# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

ಅಕ್ಟೋಬರ್, ೨೦೧೪

ಸಂಪುಟ: ೪ ಸಂಚಿಕೆ: ೩

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ :** ವಾರ್ಷಿಕ: ರೂ. ೧೫೦/–(ವ್ಯಕ್ತಿಗಳಿಗೆ) ರೂ.೨೫೦/–(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/– ಪುಟ: ೨೪



**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ **ಈ ಮೇಲ್:** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಮ್ಮ ಪತ್ರಿಕೆ ಪ್ರಧಾನಿ ನರೇಂದ್ರ ಮೋದಿಯವರನ್ನು ಕುರಿತು ಪೂರ್ವ ನಿಶ್ಚಿತ ಅಭಿಪ್ರಾಯಗಳನ್ನು ಹೊಂದಿ ಬರೆಯುತ್ತಿರುವಂತಿದೆ ಎಂಬ ಅಭಿಪ್ರಾಯವನ್ನು ಕೆಲವು ಓದುಗರು ವ್ಯಕ್ತಪಡಿಸಿದ್ದಾರೆ. ಸಮಾಜವಾದದಲ್ಲಿ ನಂಬಿಕೆ ಇರುವ ಪತ್ರಿಕೆಯೊಂದಕ್ಕೆ ಮೋದಿಯವರ ಬಗ್ಗೆ ಕೆಲವು ಪೂರ್ವನಿಶ್ಚಿತ ಅಭಿಪ್ರಾಯಗಳಿರಲು ಅವರ ರಾಜಕೀಯ ಚರಿತ್ರೆಯಲ್ಲೇ ಕಾರಣಗಳಿದ್ದಂತಿವೆ. ಅವರ ಆಡಳಿತ ಶೈಲಿ ಮತ್ತು ಅಭಿವೃದ್ಧಿ ಮಾದರಿಗಳ ಬಗ್ಗೆ ನಮ್ಮ ಭಿನ್ನಾಭಿಪ್ರಾಯಗಳನ್ನು ಈಗಾಗಲೇ ಹಿಂದಿನ ಸಂಚಿಕೆಗಳಲ್ಲಿ ವಿವರಿಸಲಾಗಿದೆ. ನಿಷ್ಕಾರಣವಾಗಿ ಅಥವಾ ಟೀಕಿಸಲೆಂದೇ ಮೋದಿಯವರನ್ನು ಟೀಕಿಸಿದ್ದರೆ ಅದನ್ನು ಈ ಓದುಗರು ವಿವರಿಸಿ ಆಕ್ಷೇಪಿಸುವ ಎಲ್ಲ ಹಕ್ಕುಗಳನ್ನೂ ಹೊಂದಿದ್ದಾರೆ. ಹಾಗೆ ನೋಡಿದರೆ, ಪತ್ರಿಕೆ ಮನಮೋಹನ ಸಿಂಗ್ ಮತ್ತು ಸಿದ್ಧರಾಮಯ್ಯನವರ ಆಡಳಿತ ದೋಷಗಳ ಬಗ್ಗೆಯೂ ವಿಫುಲವಾಗಿ ಬರೆದಿದೆ. ಇರಲಿ, ಮೋದಿ ಅಭಿಮಾನಿಗಳ ಸಂತೋಷಕ್ಕಾಗಿ ಬರೆಯಲು ಈ ಬಾರಿ ಎರಡು ಅವಕಾಶಗಳು ಉಂಟಾಗಿವೆ.

ಒಂದು, ಈ ಹಿಂದೆಯೇ ಬರೆದಿದ್ದಂತೆ, ಮೋದಿ ಇಂಗ್ಲಿಷ್ ಮಾತನಾಡಲಾಗದ ಮತ್ತು ಬಹುಶಃ ಮಾತನಾಡಲಿಚ್ಛಿಸದ ಮೊದಲ ಪ್ರಧಾನಿ, ಈ ಸಂಬಂಧದ ಅವರ ಯಶಸ್ಸು ಭಾರತೀಯ ಭಾಷೆಗಳ ಯಶಸ್ಸೇ ಆಗಿದೆ. ಈ ದೃಷ್ಟಿಯಿಂದ ಈವರೆಗಿನ ಮೋದಿಯವರ ಸಾಧನೆ–ವಿಶೇಷವಾಗಿ ಅಂತಾರಾಷ್ಟ್ರೀಯ ವ್ಯವಹಾರಗಳ ವೇದಿಕೆಗಳಲ್ಲಿ–ಇಂಗ್ಲಿಷ್ ಇಲ್ಲದೆ ಅಂತಾರಾಷ್ಟ್ರೀಯ ವ್ಯವಹಾರಗಳನ್ನು ನಡೆಸಲಾಗದು ಎಂದು ನಂಬಿದ್ದ ಮತ್ತು ದೇಶವನ್ನೂ ನಂಬಿಸಿಬಿಟ್ಟಿದ್ದ ಇಂಗ್ಲಿಷ್‌ವಾದಿಗಳ ಮೌಢ್ಯಕ್ಕೆ ಛೀಮಾರಿ ಹಾಕಿದೆ. ಹಾಗೂ ಇಂಗ್ಲಿಷ್ ಭಾಷೆಯ ಸುತ್ತ ಅದರ ಗುಲಾಮರು ರೂಪಿಸಿದ್ದ 'ಮಿಥ್ಯೆ'ಯನ್ನು ಬಯಲುಗೊಳಿಸಿದ್ದಕ್ಕಾಗಿ ಮೋದಿಯವರಿಗೆ ದೊಡ್ಡ ವಂದನೆಗಳು.

ಎರಡು: ಇತ್ತೀಚಿನ ವರ್ಷಗಳಲ್ಲಿ ಮಿತಿ ಮೀರಿ ಬೆಳೆದು ರಾಜಕಾರಣಿಗಳಿಗಿಂತ ಹೆಚ್ಚು ಭ್ರಷ್ಟ ಹಾಗೂ ವಿಧ್ವಂಸಕ ರಾಜಕಾರಣ ಮಾಡುತ್ತಿದ್ದ ಮಾಧ್ಯಮಗಳನ್ನು(ವಿಶೇಷವಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು) ನಿಮ್ಮ ಪ್ರಚಾರವೂ ಬೇಡ, ಅಪಪ್ರಚಾರವೂ ಬೇಡವೆನ್ನುವ ರೀತಿಯಲ್ಲಿ ಪ್ರತಿಬಂಧಿಸಿ ಅವನ್ನು ಒಂದು ತಹಬಂದಿಗೆ ತಂದಿರುವುದು. 'ಮಾಧ್ಯಮವೇ ಸಂದೇಶ' ಎಂಬ ಆಧುನಿಕ ಮಾಧ್ಯಮ ಸತ್ಯವನ್ನು ಅಶ್ಲೀಲಗೊಳಿಸುವ ರೀತಿಯಲ್ಲಿ ಇಂದಿನ ಮಾಧ್ಯಮಗಳು ಸುದ್ದಿ ಮತ್ತು ಸತ್ಯಗಳ ನಡುವಣ ಗಡಿರೇಖೆಯೇ ಮಸುಕಾಗುವಂತೆ 'ವಾಸ್ತವ'ಗಳೆಂಬ ಗ್ರಾಹಕ ವಸ್ತುಗಳನ್ನು ಉತ್ಪಾದಿಸುವ ಕಾರ್ಖಾನೆಗಳಂತಾಗಿವೆ. ಇವು ಸೃಷ್ಟಿಸತೊಡಗಿರುವ ಮಿಥ್ಯಾ ವಾಸ್ತವ ಪ್ರಪಂಚವು ನಮ್ಮ ಸಾರ್ವಜನಿಕ ಜೀವನದ ಹೊಸ ಪಟ್ಟಭದ್ರ ಹಿತಾಸಕ್ತಿಗಳ ನೆಲೆವೀಡಾಗಿವೆ. ಈ ಹಿನ್ನೆಲೆಯಲ್ಲಿ ಮೋದಿಯವರು ತಮಗಾಗಿ ಮಾಧ್ಯಮ ಸಲಹಾಗಾರರನ್ನು ನೇಮಿಸಿಕೊಳ್ಳದಿರುವುದು ಅರ್ಥಪೂರ್ಣವೆನಿಸುತ್ತದೆ. ಮತ್ತೆ ಮೋದಿಯವರಿಗೆ ವಂದನೆಗಳು.

ಆದರೆ ಒಂದು ಎಚ್ಚರಿಕೆಯ ಮಾತು. ಎಲ್ಲ ಸಚಿವಾಲಯಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಿ ಯಾವ ಸಚಿವರೂ, ಅಧಿಕಾರಿಯೂ ಪತ್ರಕರ್ತರೊಂದಿಗೆ ಮಾತನಾಡಕೂಡದೆಂಬ ಆದೇಶ ಹೊರಡಿಸಿದ್ದಾರೆಂಬ ಸುದ್ದಿ ಒಳ್ಳೆಯ ಸುದ್ದಿಯೇನಲ್ಲ. ಇದು ಪತ್ರಕರ್ತರ ಮೇಲಿನ ಅಪನಂಬಿಕೆಗಿಂತ ಹೆಚ್ಚಾಗಿ ಸಚಿವ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳ ಮೇಲಿನ ಅಪನಂಬಿಕೆಯ ದ್ಯೋತಕವಾಗಿ ಕಾಣುತ್ತಿದ್ದು, ಮೋದಿಯವರ ರಾಜಕೀಯ ಶೈಲಿಗೆ ಸಂಬಂಧಿಸಿದಂತಿರುವ ಏಕವ್ಯಕ್ತಿ ಅಧಿಕಾರ ವ್ಯವಸ್ಥೆಯ ಭಯವನ್ನು ನಿಜಗೊಳಿಸುವಂತಿದೆ. ಮೋದಿಯವರು ಕಳೆದ ನೂರು ದಿನಗಳಲ್ಲಿ ನಡೆಸಿದ ದೀರ್ಘ ವಿದೇಶಾಂಗ ವ್ಯವವಹಾರಗಳ ಪ್ರಕ್ರಿಯೆಯಲ್ಲಿ(ಭೂತಾನ, ನೇಪಾಳ, ಜಪಾನ್‌ಗಳ ಅಧಿಕೃತ ಪ್ರವಾಸ ಮತ್ತು ಚೀನಾ ಅಧ್ಯಕ್ಷರ ಭಾರತದ ಭೇಟಿ) ಎದ್ದು ಕಂಡ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್‌ರ ಗೈರುಹಾಜರಿ ಬರಲಿರುವ ದಿನಗಳ ಆಡಳಿತ ಸ್ವರೂಪದ ಬಗ್ಗೆ ಆತಂಕ ಹುಟ್ಟಿಸುವಂತಿದೆ. ಏಕೆಂದರೆ ಮೋದಿಯರ ಇಂತಹ ಬಿಗಿ ಆಡಳಿತ ಒಂದು ದಿನ ಸಾಮಾನ್ಯ ಜನತೆಯ ಕೊರಳ ಸುತ್ತಣ ಬಿಗಿ ಉರುಳಾಗಿಯೂ ಪರಿಣಮಿಸಿ ಅವರ ನಾಗರೀಕ ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸುವ ಎಲ್ಲ ಸಾಧ್ಯತೆಗಳಿವೆ. ಇದು ಮೋದಿ ಸಚಿವ ಸಂಪುಟದ ಸದಸ್ಯರ ಮತ್ತು ಸಚಿವಾಲಯಗಳ ಅಧಿಕಾರಿಗಳ ನಾಗರೀಕ ಸ್ವಾತಂತ್ರ್ಯಗಳ ಮೊಟಕಿನೊಂದಿಗೆ ಆರಂಭವಾಗಿರುವಂತಿದೆ.ಇತ್ತೀಚೆಗೆ ಮೋದಿಯವರ ಹೆಸರೊಂದನ್ನು ಬಿಟ್ಟು ಇನ್ನಾವುದೇ ಸಚಿವರ ಹೆಸರು ಸುದ್ದಿ ಮಾಧ್ಯಮಗಳಲ್ಲಿ ಆದ್ಯತೆಯನ್ನು ಪಡೆದದ್ದನ್ನು ಯಾರಾದರೂ ಗಮನಿಸಿದ್ದೀರಾ?

ಆದರೆ ಬಿಜೆಪಿಯ ಮತ್ತು ಅದರ ಮಿತ್ರ ಪಕ್ಷಗಳಲ್ಲಿನ ಪುಢಾರಿಗಳ ನಾಗರಿಕ ಸ್ವಾತಂತ್ರ್ಯಗಳಿಗೇನೂ ಭಂಗ ಬಂದಂತಿಲ್ಲ. ಈ ಹಿಂದೆ ಶಿವಸೇನೆಯ ಮತ್ತು ಆರೆಸ್ಸೆಸ್ ನಾಯಕರು ನೀಡಿದ ಮತ್ತು ಇತ್ತೀಚಿನ ಉಪಚುನವಣೆಗಳ ಸಂದರ್ಭದಲ್ಲಿ ಆದಿತ್ಯನಾಥ್ ಮತ್ತು ಸಾಕ್ಷಿ ಮಹಾರಾಜ್ ಎಂಬ ಕಾವಿಧಾರಿ ಬಿಜೆಪಿ ರಾಜಕಾರಣಿಗಳು 'ಲವ್ ಜೆಹಾದ್' ಮತ್ತು ಮದರಾಸಗಳಲ್ಲಿನ ಶಿಕ್ಷಣ ಕ್ರಮದ ಹೆಸರಿನಲ್ಲಿ ನೀಡಿದ ಕೋಮುವಾದಿ ಪ್ರಚೋದನೆಯ ಹೇಳಿಕೆಗಳ ಬಗ್ಗೆ ಮೋದಿಯರ ಮೌನವನ್ನು ಏನೆಂದು ಅರ್ಥ ಮಾಡಿಕೊಳ್ಳುವುದು? ಅನುಮಾನ ಬೇಡ. ಜನ ಅದನ್ನು ಸರಿಯಾಗಿಯೇ ಅರ್ಥ ಮಾಡಿಕೊಂಡೇ, ಬಿಹಾರದ ನಂತರ ಈಗ ಬಿಜೆಪಿಯ ಭದ್ರ ಕೋಟೆಗಳೆನಿಸಿದ ಉ.ಪ್ರ., ರಾಜಸ್ಥಾನ ಮತ್ತು ಗುಜರಾತ್‌ಗಳಲ್ಲಿನ ಇತ್ತೀಚಿನ ಉಪಚುನಾವಣೆಗಳಲ್ಲಿ ಬಿಜೆಪಿಗೆ ಆಘಾತಕರವೆನ್ನಿಸುವ ಫಲಿತಾಂಶಗಳನ್ನು ನೀಡಿದ್ದಾರೆ. ಮೋದಿಯವರಿಗೆ ಇದೊಂದು ಎಚ್ಚರಿಕೆ. ಕಳೆದ ಚುನಾವಣೆಗಳಲ್ಲಿ ಜನ ಬಿಜೆಪಿಗೆ ಮತ ಹಾಕಿದ್ದು ಅದರ ಮೇಲಿನ ಪ್ರೀತಿಗಿಂತ ಕಾಂಗ್ರೆಸ್‌ನ ಭ್ರಷ್ಟ ಆಡಳಿತದ ಮೇಲಿನ ಕೋಪದಿಂದಾಗಿ. ಆ ಕೋಪ ಆರತೊಡಗಿ, ಭ್ರಷ್ಟ ಹೋಗಿ ದುಷ್ಟ ಆಡಳಿತ ಆರಂಭವಾಗಿದೆ ಎಂಬ ಸೂಚನೆ ದೊರೆಯತೊಡಗಿದಂತೆ ಆ ಕೋಪ ಬಿಜೆಪಿಯ ಕಡೆಗೂ ತಿರುಗುತ್ತದೆ.

ಇನ್ನು ಇಲ್ಲಿ, ಕರ್ನಾಟಕದ ರಾಜಕಾರಣ ದಿನೇ ದಿನೇ ಹಾಸ್ಯಾಸ್ಪದವೆನಿಸತೊಡಗಿದೆ. ಸಿದ್ಧರಾಮಯ್ಯನವರ ಸಚಿವರನೇಕರ ಕಾರ್ಯವೈಖರಿ ನೋಡುತ್ತಿದ್ದರೆ, ಸಚಿವ ಸಂಪುಟ ಪುನಾರಚನೆಯಯ ಬಗ್ಗೆ ಅವರು ಸೃಷ್ಟಿಸುತ್ತಿರುವ ಗೊಂದಲ ಮತ್ತು ಅನಿಶ್ಚಿತತೆ ಜನವಿರೋಧಿಯಾದದ್ದು ಎಂದೇ ಅನಿಸುತ್ತದೆ. ಅವರ ಸಂಪುಟದ 'ದಂಡಪಿಂಡ'ಗಳು ಜನರ ಕಣ್ಣಿಗೇ ಎದ್ದು ಕಾಣುತ್ತಿರುವಾಗ ಇವರ ಕಣ್ಣಿಗೆ ಕಾಣದಿರಲು ಕಾರಣವೇನು? ಜನ ಇಂದು ಯೋಚಿಸಬಲ್ಲವರಾಗಿದ್ದಾರೆ. ಇನ್ನು ನಿಗಮ ಮಂಡಳಿಗಳ ಅಧಿಕಾರ ಸ್ಥಾನಗಳನ್ನು ತುಂಬುವ ವಿಷಯವನ್ನು ಎಳೆದಾಡುತ್ತಿರುವುದನ್ನು ನೋಡಿದರೆ, ಇದು ಅಗತ್ಯ ಆಡಳಿತಾತ್ಮಕ ಕ್ರಮವೋ ಅಥವಾ ರಾಜ್ಯದ ಜನತೆಯ ಖರ್ಚಿನಲ್ಲಿ ಬೇಕಾದವರಿಗೆ ಬಿಸ್ಕಟ್ ಹಂಚುವ ಕಾರ್ಯಕ್ರಮವೋ ಎಂದು ಅನುಮಾನವಾಗುತ್ತಿದೆ. ಸಿದ್ಧರಾಮಯ್ಯನವರಿಂದ ಘನತೆಯುಳ್ಳ ನೇರ ಮತ್ತು ದಿಟ್ಟ ರಾಜಕಾರಣವನ್ನು ನಿರೀಕ್ಷಿಸಿದ್ದವರಿಗೆಲ್ಲ ನಿರಾಶೆ ಮಡುಗಟ್ಟುತ್ತಿದೆ.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ವಿಶೇಷಾಂಕದ ನಿಮ್ಮ ಸಂಪಾದಕೀಯದ ಬಗ್ಗೆ ಹೇಳುವುದಾದರೆ, ಲೋಹಿಯಾವಾದ, ಗಾಂಧಿವಾದ, ಅಂಬೇಡ್ಕರ್‌ವಾದಗಳ ವಕ್ತಾರರು ಹೇಳಿದ್ದನ್ನೇ ಹೇಳುತ್ತಾ ಅವನ್ನು ಮೂಲಭೂತವಾದಗಳನ್ನಾಗಿ ಮಾಡಿಬಿಟ್ಟಿದ್ದಾರೆನಿಸುತ್ತದೆ. ನಿಮ್ಮ ಪತ್ರಿಕೆಯ ಬರಹಗಳು ಇದಕ್ಕೆ ದೃಷ್ಟಾಂತಗಳು. ಎಡಪಂಥಗಳ ಕಾಳಜಿಗಳ ಬಗ್ಗೆ ಭಿನ್ನಮತವಿಲ್ಲ. ಆದರೆ ಅವುಗಳ ಪ್ರತಿಪಾದನೆ, ವಿಧಾನ–ವಿವರಗಳಲ್ಲಿ ವೈರುಧ್ಯಗಳಿವೆ. ಪ್ರಧಾನಿ ನರೇಂದ್ರ ಮೋದಿಯವರ ಹೆಜ್ಜೆಗಳನ್ನು ಬೆಕ್ಕಿನ ಹೆಜ್ಜೆಗಳೆಂದು ಕರೆದಿರುವುದು ಅನುಚಿತ. ಮೂರು–ನಾಲ್ಕು ತಿಂಗಳುಗಳಲ್ಲೇ ಅವರ ಪ್ರತಿಭೆ, ಸಾಮರ್ಥ್ಯ ಮತ್ತು ಸಾಧನೆಗಳ ಬಗ್ಗೆ ಮಾತಾಡುವುದು ಹಾಸ್ಯಾಸ್ಪದವಾದೀತು.

ಅಗಲಿದ ಹಿರಿಯ ಲೇಖಕ ಯು. ಆರ್. ಅನಂತಮೂರ್ತಿಯವರ (ಕೊನೆಯ) ಸಂದರ್ಶನಕ್ಕಾಗಿ ನಿಮಗೆ ಅಭಿನಂದನೆಗಳು. ಅವರ ಕಥನದ ರೀತಿ ತುಂಬ indulgent ಮತ್ತು ತೀರಾ ಕೆಳಗಿಳಿದು ಬಂದು ಮಾತಾಡುವ (condescending) ತರಹ ಆಗಿದೆ. ಇತಿಹಾಸಕ್ಕೆ ತಪ್ಪು ಮಾಡಿ ಅಪಚಾರ ಮಾಡುವುದು, ಆಬಳಿಕ ಐತಿಹಾಸಿಕ ತಪ್ಪೆನ್ನುವುದು, ಕುವೆಂಪು ಕವಿಯಲ್ಲ ಅನ್ನುವುದು, ನಾವು ಅವರ ಮುಂದುವರಿಕೆ ಅನ್ನುವುದು, ಆಯ್ದ ಸಾಹಿತಿಗಳ ಬರವಣಿಗೆಯೇ ಕನ್ನಡದ ಸರ್ವಸ್ವ ಎನ್ನುವುದು ಲಾಗಾಯ್ತಿನಿಂದ ಕೆಲವರ ರೀತಿ. ಪ್ರಗತಿಶೀಲ–ನವೋದಯಗಳನ್ನು ಹೊಟ್ಟೆ ತುಂಬ ಬಯ್ದು ಈಗ ಅದೂ ಶ್ರೇಷ್ಠವೆನ್ನುವ ಅನುಗ್ರಹಕಾರಕ ಮಾತುಗಳು!

**–ಡಾ. ಎಂ. ಪ್ರಭಾಕರ ಜೋಷಿ,** ಮಂಗಳೂರು

ವಿಶೇಷಾಂಕದ ಹೈಲೈಟ್ ಎಂದರೆ ಸಮಾಜವಾದಿ ಚಿಂತನೆಯು ವಿನೂತನವಾಗಿ ಮೂಡಿ ಬಂದಿರುವುದು. "ನಾವು ಬದುಕಲು ಯೂರೋಪ್ ಸಾಯಬೇಕು." "ಮುಕ್ಕಿದಷ್ಟು ದಾಹ ಕೆರಳಿಸುವ ಉಪ್ಪು." ಹಾಗೂ ರಾಜೇಂದ್ರ ಚೆನ್ನಿ ಅವರ "ಜಾಗತೀಕರಣದ ಸಾಂಸ್ಕೃತಿಕ ಫಲಗಳು" ಅನಂತಮೂರ್ತಿಯವರ ಸಂದರ್ಶನ ಹಾಗೂ ನಟರಾಜ ಹುಳಿಯಾರರ ಪುಸ್ತಕ ವಿಮರ್ಶೆಯು ಸಂಚಿಕೆಯ ಮಹತ್ವದ ಲೇಖನಗಳು

ಸಮಾಜವಾದ ಎಂದರೆ ಎಲ್ಲ ರೀತಿಯ ಸಮಾನತೆ ಮಾತ್ರ. ಎಂಬ ಸೀಮಿತ ಪರಿಕಲ್ಪನೆಯಲ್ಲಿ ಇದ್ದ ನಮ್ಮಂಥವರಿಗೆ ಸಮಾಜವಾದಿ ಸಿದ್ಧಾಂತದ ಆಳ ಮತ್ತು ವ್ಯಾಪ್ತಿಯನ್ನು ಪತ್ರಿಕೆಯ ಮೂಲಕ ಬಹಳ ಸೊಗಸಾಗಿ ನಿರೂಪಿಸಿ ಕೊಡುತ್ತಿದ್ದೀರಿ. ಇದು ನಮ್ಮ ತಿಳುವಿನ ಮಟ್ಟ ಚಿಂತನಾಕ್ರಮ, ಸಂವೇದನೆ ಹಾಗೂ ಬದುಕಿನ ಸೌಂದರ್ಯವನ್ನು ಉತ್ತಮಪಡಿಸುತ್ತಿದೆ. ತಮ್ಮ ಹಿತ–ಮಿತ, ಆಂತರಿಕ ಪ್ರಶಾಂತಿ, ಮತ್ತು ಬಾಹ್ಯ ಬಂಧುತ್ವ ಇತ್ಯಾದಿ ಸಮಾಜವಾದಿ ಪರಿಕಲ್ಪನೆಗಳು ಆಳವಾಗಿ ಪರಿಣಾಮ ಬೀರಿವೆ. ಹಾಗೂ ಆ ಮೂಲಕ ಇದು ಅಂತರ್ಗಾಮಿನಿಯಾಗಿ ನಮ್ಮ ವ್ಯಕ್ತಿತ್ವದಲ್ಲಿ ಹರಿದು ಪ್ರಜ್ಞೆಯ ರೂಪದಲ್ಲಿ ಪಸರಿಸಿದೆ. ಪತ್ರಿಕೆಯ ಯಶಸ್ಸು ಇದೇ ಎಂದು ತಿಳಿದಿದ್ದೇನೆ.

ಸೆಪ್ಟೆಂಬರ್ ಸಂಚಿಕೆಯಲ್ಲಿ ಆರ್. ಎಸ್. ಎಸ್. ತಲೆತಲಾಂತರದಿಂದ ನಡೆಸಿಕೊಂಡು ಬಂದಿರುವ ಪುರೋಹಿತಶಾಹಿ ಪಿತೂರಿಯು ಈಗ ಮೋದಿಯವರನ್ನು ಪ್ರಭಾವಿಸಿರುವುದನ್ನು ಗಮನಿಸಿ ಸಂಪಾದಕೀಯದಲ್ಲಿ ಖಂಡಿಸಿರುವುದು, ಪುರೋಹಿತಶಾಹಿ ಮತ್ತು ಕೋಮುವಾದದಂತಹ ಕೆಡುಕನ್ನು ಜಾಗತೀಕರಣದ ಸಮಸ್ಯೆಯ ಸವಾಲುಗಳನ್ನು ಎದುರಿಸಿದ ತೀವ್ರತೆಯಲ್ಲಿ ಪತ್ರಿಕೆ ಎದುರಿಸುತ್ತಿಲ್ಲ ಎಂಬ ನಮ್ಮ ಭಾವನೆಯನ್ನು ಅಳಿಸಿ ಹಾಕಿದ್ದೀರಿ.

'ಸಮಕಾಲೀನ'ದಲ್ಲಿ, ಅತ್ಯಾಚಾರದ ಬಗ್ಗೆ ತಮ್ಮ ಪ್ರಾಸ್ತಾವಿಕ ನುಡಿಗಳೂ ಸೇರಿ ಬರೆದ ಅನೇಕ ಲೇಖನಗಳು ಈ ಸಮಸ್ಯೆಯ ಅನೇಕ ಮಗ್ಗಲುಗಳನ್ನು ಪರಿಚಯಿಸಿ ತೀವ್ರವಾಗಿ ಸ್ಪಂದಿಸುವಂತೆ ಮಾಡಿದ್ದೀರಿ.

ಯುವ ಬರಹಗಾರರ ವೇದಿಕೆಯನ್ನು ಶುರು ಮಾಡಿರುವುದು ಮತ್ತು ಪರಿಸರ ಸಂರಕ್ಷಣೆ ಕುರಿತ ಲೇಖನಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿರುವುದು (ಡಾ. ಶೇಖರ್ ಗೌಳೇರರ 'ಪ. ಘಟ್ಟಗಳನ್ನು ಕುರಿತ ಲೇಖನ) ಸಂತೋಷ ಹಾಗೂ ಸಮಂಜಸವಾಗಿದೆ. ಪತ್ರಿಕೆ ಯಾವುದೇ ಸಮಸ್ಯೆಯನ್ನು ಚರ್ಚೆಗೆ ತೆಗೆದುಕೊಂಡರೂ ಮೂಲಭೂತವಾಗಿ ಪರಿಹಾರವಾಗಬೇಕಾದ ದಾರಿಗಳನ್ನು ಶೋಧಿಸುವುದು ಅದರ ವೈಶಿಷ್ಟ್ಯತೆ ಹಾಗೂ ಹೆಗ್ಗಳಿಕೆ ಎಂದೇ ತಿಳಿದಿದ್ದೇನೆ.

**–ಸುರೇಂದ್ರ,** ಧಾರವಾಡ

ಅಪ್ಪಟ ಕಾಳಜಿ ಹಾಗೂ ಬದ್ಧತೆಗಳಿದ್ದರೆ ಏನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ನಿದರ್ಶನ, ಈ ಕಾಲದಲ್ಲೂ 'ಹೊಸ ಮನುಷ್ಯ'ದಂತಹ ಪ್ರಾಮಾಣಿಕ ಸಮಾಜವಾದಿ ಪತ್ರಿಕೆಯ ಮೂರು ವರ್ಷಗಳ ಯಶಸ್ಸು.

ವಿಶೇಷಾಂಕ ತುಂಬಾ ಅರ್ಥಪೂರ್ಣವಾಗಿದೆ. ಆಧುನಿಕ ತಂತ್ರಜ್ಞಾನದ ಅಗಾಧ ಬೆಳವಣಿಗೆಯ ದೆಸೆಯಿಂದಾಗಿ ಓದುಗನನ್ನು ಹಿಡಿದು, ಓದಿಸಿ, ವಿಚಾರ ಪ್ರಚೋದನೆ ಮಾಡುವುದು ಸುಲಭದ ಕೆಲಸವಲ್ಲ. ನಿಮಗೆ ವಿಶೇಷ ನಮನಗಳು. ಪತ್ರಿಕೆಯನ್ನು 'ಓದುವಂತಹ' ಹೆಚ್ಚು ಜನರಿಗೆ ತಲುಪಿಸುವ ಪ್ರಾಮಾಣಿಕಪ್ರಯತ್ನವನ್ನು ಸಮಾನ ಮನಸ್ಕರೆಲ್ಲ ಸೇರಿ ಮಾಡಬೇಕಿದೆ.

–ಸಿ. ಚೆನ್ನಬಸವಣ್ಣ, ಬಳ್ಳಾರಿ

ಲೋಹಿಯಾ ಕುರಿತ ಮಸ್ತ್‌ರಾಂ ಕಪೂರರ ಲೇಖನ, ಅನಂತಮೂರ್ತಿಯವರ ಸಂದರ್ಶನ, ಜಯಂತ್ ಕಾಯ್ಕಿಣಿಯವರ ಕತೆ, ವಿಜಯೇಂದ್ರ ಪಾಟೀಲರ ಲಹರಿ, ಗಿರೀಶ್ ಕಾಸರವಳ್ಳಿಯವರೊಡನೆಯ ಸಂದರ್ಶನ ಮತ್ತು ನಟರಾಜ್ ಹುಳಿಯಾರರ ಪುಸ್ತಕದ ನಿಮ್ಮ ವಿಮರ್ಶೆ ವಿಶೇಷಾಂಕದ ಮೌಲಿಕತೆಯನ್ನು ಹೆಚ್ಚಿಸಿವೆ. ಅಭಿನಂದನೆಗಳು.

**–ಎಂ. ನಾಗರಾಜು,** ಮೈಸೂರು

ವಿಶೇಷಾಂಕದಲ್ಲಿ ಕೆ.ಎಂ. ಶಂಕರಪ್ಪನವರನ್ನು ಕುರಿತು ಸವಿತಾ ಮೇಡಂ ಬರೆದ ಲೇಖನ ಓದಿದಾಗ ನಾನು ಮೈಸೂರಿನ ಸಮಾಜವಾದಿ ಸಮಾರಂಭವೊಂದರಲ್ಲಿ ಅವರನ್ನು ಭೇಟಿಯಾದ ನೆನಪಾಯಿತು. ಅವರು ನಮ್ಮೊಡನೆ ಮಾತನಾಡುತ್ತಾ, ರಾಣಿ ಜೇನು ಸತ್ತ ಮೇಲೆ ಸೇವಕ ಹುಳುವೊಂದು ರೂಪಾಂತರಗೊಂಡು ರಾಣಿಜೇನಾಗುವಂತಹ ವ್ಯವಸ್ಥೆ ಸಮಾಜವಾದಿ ಆಂದೋಲನದಲ್ಲಿ ಇಲ್ಲದಿದ್ದುದೇ ಅದರ ದುರವಸ್ಥೆಗೆ ಕಾರಣ ಎಂದು ಹೇಳಿದ್ದು ಇನ್ನೂ ನನ್ನ ನೆನಪಿನಲ್ಲಿದೆ. ಶಂಕರಪ್ಪ ಕರ್ನಾಟಕದ ಜೆನ್ ಮಾಸ್ಟರ್!

**–ಅಪೂರ್ವ ಡಿ'ಸಿಲ್ವ,** ಚಾಮರಾಜನಗರ

ಪತ್ರಿಕೆಯನ್ನು ಇದೇ ಮೊದಲು ಓದಿದೆ. ಖುಷಿ ಎನಿಸಿತು. ನಿಸ್ಸಂದಿಗ್ಧ ನಿಲುವು–ನಂಬಿಕೆಯ ಪತ್ರಿಕೆ. ಮುದ್ರಣವೂ ಸ್ವಚ್ಛ, ಹಿತವಾದ ಆಕಾರ. ಸಮಾಜವಾದಿ ಚಿಂತನೆಗೆ ಚಾಚಿಕೊಳ್ಳುವ ತುಡಿತ ಮತ್ತು ಬದ್ಧತೆ ಎದ್ದು ಕಾಣುತ್ತದೆ.

**–ವಿಷ್ಣುನಾಯ್ಕ,** ಅಂಕೋಲಾ

ಸೆಪ್ಟಂಬರ್ ಸಂಚಿಕೆ, ಏಕೋ ಸಪ್ಪೆಯೆನಿಸಿತು. ಲೈಂಗಿಕ ಅಪರಾಧಗಳ ಬಗ್ಗೆ ಐದು ಜನ ಬರೆದಿದ್ದರೂ, ಯಾರೊಬ್ಬರೂ ತಾವು ಹೇಳಬೇಕೆಂಬುದನ್ನು ಸರಿಯಾಗಿ ಹೇಳಲಾಗದೆ ಲೇಖನಗಳು ಸೊರಗಿವೆ. ತಾರಿಣಿ ಶುಭದಾಯಿನಿಯವರ ಲೇಖನ ಸ್ವಲ್ಪ ಮಟ್ಟಿಗೆ ಉತ್ತಮ.

ನರೇಂದ್ರಮೋದಿಯವರನ್ನು 'ಪ್ರಧಾನ ಮಂತ್ರಿ ಅಭ್ಯರ್ಥಿ' ಎಂದು ಘೋಷಿಸಿದ ದಿನದಿಂದಲೂ ನಿಮ್ಮ ಸಂಪಾದಕೀಯ, ಅವರ ಬಗ್ಗೆ ಮೊದಲೇ ಒಂದು ಅಭಿಪ್ರಾಯಕ್ಕೆ ಬಂದು ಬರೆಯುತ್ತಿರುವಂತಿದೆ. ಮುಂದೆ ಆ ನಿಮ್ಮ ನಿಲುವು ಬದಲಾಗಬಹುದು ಎಂಬ ನಂಬಿಕೆ ನನ್ನದು!

ಅನಂತಮೂರ್ತಿ ಎಂಬ 'ಜಾತ್ಯತೀತ' ಬುದ್ಧಿಜೀವಿಯ ಶವಸಂಸ್ಕಾರಕ್ಕೆ ಕೇಜಿಗಟ್ಟಲೆ ತುಪ್ಪ, ಟನ್‌ಗಟ್ಟಲೆ ಶ್ರೀಗಂಧ, ಹೂವು, ಅದೂ ಸರ್ಕಾರದ ಖರ್ಚಿನಲ್ಲಿ ಮತ್ತು ಮಾಧ್ವ ಪುರೋಹಿತರ ನೇತೃತ್ವದಲ್ಲಿ! ಜನ ಈ ಬುದ್ಧಿಜೀವಿಗಳನ್ನು ಯಾಕೆ ನಂಬಬೇಕು?

**–ಡಾ. ಎಚ್. ಎಸ್. ರುದ್ರೇಶ್,** ಶಿವಮೊಗ್ಗ

ನಿಮ್ಮ ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಅನಂತಮೂರ್ತಿ ಅವರನ್ನು ಕುರಿತು ಅವರ ದೌರ್ಬಲ್ಯಗಳ ಬಗ್ಗೆ ಮಾತನಾಡುವ ಸಂದರ್ಭ ಇದಲ್ಲ ಎಂದಿರುವುದು ಸರಿಯೇ. ಆದರೆ ಅವರು ನಮ್ಮ ಬಹು ದೊಡ್ಡ ಲೇಖಕರು ಎಂದು ಮಾನ್ಯ ಮಾಡುತ್ತಲೇ, ಅವರ ಅಭಿಮಾನಿಗಳಿಗೂ ತಪ್ಪು ಸಂದೇಶ ಕೊಡುವಂತಹ ಅವರ ಹಲವು ವರ್ತನೆಗಳನ್ನು ಈಗಲಾದರೂ ದಾಖಲಿಸಬೇಕಿದೆ.

ನಾನೇ ಒಬ್ಬ ಪತ್ರಕರ್ತನಾಗಿ ನೋಡಿದಂತೆ, ಮೈಸೂರಿನಲ್ಲಿ ಅವರು ಒಂದು ಸಂದರ್ಭದಲ್ಲಿ ಒಂದು ಪ್ರತಿಷ್ಠಿತ ಅಂತಾರಾಷ್ಟ್ರೀಯ ಖಾಸಗಿ ಶಾಲೆಯ ಉದ್ಘಾಟನೆಗೆ ಬಂದು ಅದನ್ನು ಸ್ವಾಗತಿಸಿ ಎಂತಹ ಅದ್ಭುತ ಭಾಷಣ ಮಾಡಿದರೆಂದರೆ, ನಾನೂ ಒಂದು ಖಾಸಗಿ ಶಾಲೆ ತೆರೆಯುವುದು ನನ್ನ ಕರ್ತವ್ಯವೇ ಆಗಿದೆ ಎನಿಸಿಬಿಟ್ಟಿತು. ಆದರೆ ಅದೇ ಅನಂತಮೂರ್ತಿಯವರು ಮೈಸೂರಿನಲ್ಲಿಯೇ ಇನ್ನೊಂದು ಸಂದರ್ಭದಲ್ಲಿ–ಅದು ದಲಿತ ಸಂಘಟನೆಯೊಂದು ಏರ್ಪಡಿಸಿದ ಸಮಾರಂಭ–'ಸಾಮಾನ್ಯ ಶಾಲೆಗಳ ವ್ಯವಸ್ಥೆ' ಅಗತ್ಯದ ಬಗ್ಗೆಯೂ ಎಷ್ಟು ಅದ್ಭುತವಾಗಿ ಮಾತನಾಡಿದರೆಂದರೆ, ನಾನು ಸಂಪೂರ್ಣ ಗೊಂದಲದಲ್ಲಿ ಮುಳುಗಿ ಹೋದೆ!

**–ಚೀ.ಜ. ರಾಜೀವ,** ಮೈಸೂರು

## ನಮ್ಮ ಸಮಾಜವಾದಿಗಳು

# ನ್ಯಾಯನಿಷ್ಠುರ ‘ಜನಸೇವಕ’ ಅಮ್ಮೆಂಬಳ ಆನಂದ



ಅಮ್ಮೆಂಬಳ ಆನಂದ ಅವರ ಬಗ್ಗೆ ‘ಪ್ರಪಂಚ’ ಸಾಪ್ತಾಹಿಕದಲ್ಲಿ ನಾಡೋಜ ಪಾಟೀಲ ಪುಟ್ಟಪ್ಪ ಹೀಗೆ ಬರೆಯುತ್ತಾರೆ: “ನಿತ್ಯವೂ ಕಣ್ಣೀರಿನಲ್ಲಿ ಕೈತೊಳೆಯುತ್ತಾ ಗೋಳಿನ ಜೀವನವನ್ನು ಬದುಕುತ್ತಿದ್ದ ಯುವ ವಿಧವೆಯನ್ನು ಅಮ್ಮೆಂಬಳ ಆ ಕಾಲದಲ್ಲಿ ಮದುವೆಯಾಗಿ (೧೯೫೪) ಬದುಕುಕೊಟ್ಟವರು. ಅದು ರೆಜಿಸ್ಟರ್ ಮದುವೆ. ಡಾ॥ ಕೆ. ನಾಗಪ್ಪ ಆಳ್ವ, ಡಾ॥ ಅಮ್ಮೆಂಬಳ ಬಾಳಪ್ಪ – ಆ ಕಾಲದ ಈ ಕ್ರಾಂತಿಕಾರಿ ಸರಳ ಮದುವೆಗೆ ಸಾಕ್ಷಿಯಾದವರು.” ಆ ಸಂದರ್ಭದಲ್ಲಿ ಇವರ ಪತ್ನಿ ಗಂಗಮ್ಮ ತನ್ನ ಪೂರ್ವ ಪತಿಯಿಂದ ಒಬ್ಬ ಹೆಣ್ಣುಮಗಳನ್ನೂ ಪಡೆದಿದ್ದಳು. ಅಂದೇ ಆನಂದರು ಅವಳನ್ನು ಮಗಳನ್ನಾಗಿಯೂ ಸ್ವೀಕರಿಸಿದರು.

ಆನಂದರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಅಮ್ಮೆಂಬಳ ಎಂಬ ಹಳ್ಳಿಯವರು. ಹುಟ್ಟಿದ್ದು ೧೯೨೭ರ ಸೆಪ್ಟೆಂಬರ್ ೧೭ರಂದು. ಮಂಗಳೂರಿನಲ್ಲಿ ಪ್ರಾಥಮಿಕ ಮತ್ತು ಹೈಸ್ಕೂಲು ಶಿಕ್ಷಣ, ಮೆಟ್ರಿಕ್ ಮುಗಿದ ಕೂಡಲೇ ಕರ್ನಾಟಕದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನೆಯ ಜವಾಬ್ದಾರಿ ಹೊತ್ತಿದ್ದ ದ.ಕ.ದವರೇ ಆದ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಕರೆಗೆ ಓಗೊಟ್ಟು ಹುಬ್ಬಳ್ಳಿಗೆ ಪ್ರಯಾಣ, ಅಲ್ಲಿ ಕರ್ನಾಟಕ ಪ್ರಾಂತ ಸಮಾಜವಾದಿ ಪಕ್ಷದ ಪ್ರಾಂತೀಯ ಕಚೇರಿಯ ಕಾರ್ಯದರ್ಶಿ. ಅದರ ಜೊತೆಗೇ ರೈಲ್ವೆ ಕೆಲಸಗಾರರ ಸಂಘದ ವಿಭಾಗೀಯ ಸಂಘಟನಾ ಕಾರ್ಯದರ್ಶಿ. ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ, ಕಮಲಾದೇವಿ ಮತ್ತು ಉಮಾದೇವಿ ಕುಂದಾಪುರ ಅವರ ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾಗುತ್ತ ಅವರು ವಹಿಸಿಕೊಟ್ಟ ಎಲ್ಲ ಸಂಘಟನೆಗಳಲ್ಲಿ ಮನಸಾ ಅರ್ಪಿಸಿಕೊಂಡವರು ಅಮ್ಮೆಂಬಳ ಆನಂದ. ಉಪಜೀವನಕ್ಕಾಗಿ ‘ನವಯುಗ’ ದಿನಪತ್ರಿಕೆಯಲ್ಲಿ ಸಹ ಸಂಪಾದಕರಾಗಿ ಸೇರಿಕೊಂಡಿದ್ದರು, ಆದರೆ ಇವರ ಸಮಾಜವಾದಿ ಚಟುವಟಿಕೆಗಳನ್ನು ಆಕ್ಷೇಪಿಸಿ ಪತ್ರಿಕೆಯ ಆಡಳಿತ ಮಂಡಳಿ ಇವರನ್ನು ಆ ಕೆಲಸದಿಂದ ಉಚ್ಚಾಟಿಸಿತು. ಮುಂದೆ ಹುಬ್ಬಳ್ಳಿಯ ಡೆಕ್ಕನ್ ಫರ್ಟಿಲೈಸರ್ಸ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದರಾದರೂ ಕೆಲ ಕಾಲಾನಂತರ ಇದೇ ಕಾರಣದ ಮೇಲೆ ಅಲ್ಲೂ ಕೆಲಸದಿಂದ ತೆಗೆದುಹಾಕಲ್ಪಟ್ಟರು. ಮುಂದೆ ಅನಿವಾರ್ಯವಾಗಿ ಮುಂಬೈಗೆ ಪ್ರಯಾಣ. ಅಲ್ಲಿದ್ದ ಹೋಟೆಲ್ ಕೆಲಸಗಾರರ ಸಂಘದ ಧುರೀಣರಾದ ವಡ್ಡರ್ಸೆ ರಘುರಾಮ ಶೆಟ್ಟಿ ಮತ್ತು ಎಮ್. ಸಂಜೀವ ಶೆಟ್ಟಿ ಇವರ ರಾತ್ರಿ ವಸತಿಗೆ ಅನುಕೂಲ ಮಾಡಿಕೊಟ್ಟರು. ಅಲ್ಲಿ ಆನಂದರಿಗೆ ಹೋಟೆಲ್ ಕಾರ್ಮಿಕರಿಗೆ ರಾತ್ರಿ ಶಾಲೆಯಲ್ಲಿ ಪಾಠ ಹೇಳುವ ಕೆಲಸ.

ನಂತರದ ವರ್ಷಗಳಲ್ಲಿ ಆನಂದರು ಮಂಗಳೂರಿಗೆ ಹಿಂತಿರುಗಿ ಅಲ್ಲಿನ ‘ನವ ಭಾರತ’ ಪತ್ರಿಕೆಯ ಉಪಸಂಪಾದಕರಾದರು. ಆ ವೇಳೆಗೆ ದೇಸಾಯಿ ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತ ಜನಾಂದೋಲನದ ಮೂಲಕ ಮತ್ತು ಮುಂಬೈ ಬಂದರು ಕೆಲಸಗಾರರ ಯೂನಿಯನ್ನಿನ ಸಂಘಟನೆಯ ಮೂಲಕ ಬಡಜನತೆಯ ಬಹುದೊಡ್ಡ ನಾಯಕನಾಗಿ ಕಾಣಿಸಿಕೊಂಡಿದ್ದರು. ಇತ್ತ ಅಂಕೋಲೆಯಲ್ಲಿ ರೈತ ಜನಾಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಗಿರಿಪಿಕಳೆಯವರನ್ನು (ಪಿಕಳೆ ಮಾಸ್ತರ) ಭೂಮಾಲಿಕ ವರ್ಗದ ಆಡಳಿತ ಮಂಡಳಿ ಉಚ್ಚಾಟಿಸಿದ ಕಾರಣ ಕೆರಳಿದ ರೈತರು ಹುಟ್ಟುಹಾಕಿದ ಕೆನರಾ ಎಗ್ರಿಕಲ್ಚರ್ ಸ್ಕೂಲಿನ ಆಡಳಿತ ಮಂಡಳಿಯಾಗಿ ಕೆನರಾ ವೆಲ್‌ಫೇರ್ ಟ್ರಸ್ಟು ಅಸ್ತಿತ್ವಕ್ಕೆ ಬಂದಿತ್ತು. ದಿನಕರ ದೇಸಾಯಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಮುಂದೆ ದೇಸಾಯರು ಜಿಲ್ಲೆಯ ಕುಗ್ರಾಮಗಳಲ್ಲಿ ಹೈಸ್ಕೂಲುಗಳನ್ನು ತೆರೆಯತೊಡಗಿದರು. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗಡೆ ಬಲಿಷ್ಠವಾದ ವಿರೋಧಿ ಪಕ್ಷ ಇರಬೇಕೆಂಬ ಉದ್ದೇಶದಿಂದ ಲೋಕ ಶಿಕ್ಷಣಕ್ಕಾಗಿ ವಾರ ಪತ್ರಿಕೆಯೊಂದನ್ನು ಪ್ರಾರಂಭಿಸಲು ಮುಂದಾದರು. ಅವರು ಆ ಸಂದರ್ಭದಲ್ಲಿ ಬಡವರ ಬಗ್ಗೆ, ದೀನದಲಿತರ ಬಗ್ಗೆ, ರೈತಕಾರ್ಮಿಕರ ಬಗ್ಗೆ ವಿಶೇಷ ಕಳಕಳಿಯಿರುವ ಒಬ್ಬ ಸಂಪಾದಕರ ಹುಡುಕಾಟದಲ್ಲಿದ್ದರು.

. ಒಮ್ಮೆ ಮಂಗಳೂರಿಗೆ ಅಲ್ಲಿನ ಸಮಾಜವಾದಿಗಳ ಆಹ್ವಾನದ ಮೇರೆಗೆ ಭೇಟಿ ನೀಡಿದ್ದ ದೇಸಾಯರು ಸಭೆಯ ನಂತರ ಈ ಪ್ರಸ್ತಾಪವನ್ನು ಮಾಡಿದಾಗ, ಆ ಭಾಗದ ಸಮಾಜವಾದಿ ಚಿಂತಕರೆಲ್ಲ – ಅಲ್ಲೇ ಇದ್ದ ಅಮ್ಮೆಂಬಳ ಆನಂದರ ಹೆಸರನ್ನು ಸೂಚಿಸುತ್ತಾರೆ. ಕೂಡಲೇ ಆನಂದ ಅವರನ್ನಲ್ಲದೆ, ಪ್ರಸೂತಿ ಕಾರ್ಯದಲ್ಲಿ ತರಬೇತಿ ಪಡೆದಿದ್ದ ಅವರ ಪತ್ನಿ ಗಂಗಮ್ಮ ಅವರ ಸೇವೆಯನ್ನು ಬಳಸಿಕೊಳ್ಳುವ ಉದ್ದೇಶದಿಂದ ಈ ದಂಪತಿಗಳನ್ನು ಅಂಕೋಲೆಗೆ ಕರೆಯಿಸಿಕೊಂಡು (೧೯೫೫) ತಾವು ಪ್ರಾರಂಭಿಸಿದ ‘ಜನಸೇವಕ’ ಪತ್ರಿಕೆಯ ಸಂಪಾದಕರಾಗಿ ಆನಂದರನ್ನೂ, ಆಸ್ಪತ್ರೆಗಳೇ ಇಲ್ಲದ ಅಂಕೋಲೆಯ ಹಳ್ಳಿಗಳ ಮಹಿಳೆಯರ ಪ್ರಸೂತಿ ಕೆಲಸಕ್ಕಾಗಿ ಅವರ ಪತ್ನಿ ಗಂಗಮ್ಮನವರನ್ನೂ ನೇಮಕಮಾಡಿಕೊಂಡಿದ್ದಲ್ಲದೆ ತಮ್ಮ ಟ್ರಸ್ಟಿನ ಲೈಫ್‌ವರ್ಕರ್ಸ್‌ರನ್ನಾಗಿಯೂ ಸೇರಿಸಿಕೊಂಡರು.

ಅಮ್ಮೆಂಬಳ ಆನಂದರು ‘ಜನಸೇವಕ’ ಪತ್ರಿಕೆಯಲ್ಲಿ–ಅದು ಪ್ರಾರಂಭವಾದ ೧೯೫೫ರಿಂದ ಆರ್ಥಿಕ ಕಾರಣಕ್ಕಾಗಿ ಅದು ನಿಂತ ೧೯೭೩ರ ವರೆಗೆ (ಸುಮಾರು ೧೮ ವರ್ಷ) ಒಂದೇ ಒಂದು ವಾರ ಬಿಡುವಿಲ್ಲದೇ ನಡೆಯುವಂತೆ ನೋಡಿಕೊಂಡರು. ಅದರ ಮುಖಪುಟ ಲೇಖನ ‘ಜನಸೇವಕ’ ಎಂಬ ಹೆಸರಿನಲ್ಲಿ ದಿನಕರ ದೇಸಾಯಿಯವರೇ ಬರೆಯುತ್ತಿದ್ದರು. ಸಂಪಾದಕೀಯ ಪುಟವನ್ನು ಕೂಡ ಹೆಚ್ಚಾಗಿ ದೇಸಾಯಿಯವರೇ ಬರೆಯುತ್ತಿದ್ದರು. ದೇಸಾಯಿಯವರಿಗೆ ಸಮಯದ ಸಮಸ್ಯೆ ಇದ್ದಾಗಲೆಲ್ಲ ಈ ಎರಡೂ ಪುಟಗಳನ್ನು ಅಮ್ಮೆಂಬಳ ಆನಂದರೇ ಬರೆಯುತ್ತಿದ್ದರು. ಸುಮಾರು ೧೫ ಇಂಚು ಉದ್ದದ ೮ ಪುಟಗಳ ಈ ಪತ್ರಿಕೆಯಲ್ಲಿ ‘ನೇಗಿಲಯೋಗಿ’ ಎಂಬ ಹೆಸರನ್ನಿಟ್ಟುಕೊಂಡು ೧೦೦ಕ್ಕಿಂತ ಹೆಚ್ಚು ಲೇಖನಗಳನ್ನು ಅಮ್ಮೆಂಬಳ ಬರೆದಿದ್ದಾರೆ. ಅವೆಲ್ಲ ಪ್ರತ್ಯೇಕ ಗ್ರಂಥವಾಗಿ ಬರಬೇಕಾದ ಅಗತ್ಯವಿದೆ.

ಅಮ್ಮೆಂಬಳ ಆನಂದ ‘ಜನಸೇವಕ’ದ ಜೊತೆಗೆ ‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’, ‘ಸಂಯುಕ್ತ ಕರ್ನಾಟಕ’ ಮುಂತಾದ ನಾಲ್ಕಾರು ಪತ್ರಿಕೆಗಳಿಗೆ ಅಧಿಕೃತ ವರದಿಗಾರರಾಗಿದ್ದರು. ಇವರಂಥ ನ್ಯಾಯನಿಷ್ಠುರ ಪತ್ರಕರ್ತರನ್ನು ನಾನು ಇದುವರೆಗೆ ಬೇರೆಲ್ಲೂ ಕಂಡಿಲ್ಲ. ಸತ್ಯವನ್ನು ಮುಚ್ಚುಮರೆಯಿಲ್ಲದೆ ಬರೆಯುವಾಗಲೂ ಅದರ ಜೊತೆಜೊತೆಗೆ ನಾಡಿನ ನೆಮ್ಮದಿಯ ಬಗ್ಗೆ ಚಿಂತಿಸುತ್ತಿದ್ದರು.

೫೦ ವರ್ಷಗಳ ಅಂಕೋಲೆಯ ನಂಟು ಸಣ್ಣದೇನೂ ಆಗಿರಲಿಲ್ಲ. ಈ ನೆಲದಲ್ಲಿ ಆನಂದರಂತಹ ಸಮಾಜವಾದಿ ಕಾರ್ಯಕರ್ತ ಇನ್ನೊಬ್ಬನಿರಲಿಲ್ಲ. ಅವರ ಪತ್ರಿಕಾಲಯ ಸಮಾಜವಾದಿ ಪಕ್ಷದ ಕಾರ್ಯಾಲಯವೂ ಆಗಿತ್ತು. ಈ ಲೇಖಕನನ್ನೊಳಗೊಂಡು ಅಂದಿನ ಅನೇಕ ಯುವಕರನ್ನು ಈ ದಿಶೆಯಲ್ಲಿ ತಿದ್ದಿ ತೀಡಿದ ನೂರಕ್ಕೆ ನೂರು ಶ್ರೇಯಸ್ಸು ಅವರದು. ರೈತ–ಕಾರ್ಮಿಕರ ಮನೆ ಮನೆಗೆ ಹೋಗಿ ತಳಮಟ್ಟದ ಸಂಘಟನೆ ಮಾಡಿ ಪ್ರತಿ ಹಳ್ಳಿಯಿಂದ ಅಂಕೋಲೆಯ ಮಹಾಸಭೆಗೆ ಜನರು ಸಮುದ್ರದಂತೆ ಹರಿದು ಬಂದುದಕ್ಕೆ (೧೯೫೫ರ ನಂತರ) ಆನಂದರ ಶ್ರಮವೇ ಮುಖ್ಯ. ೬೦ ರ ದಶಕದಲ್ಲಿ ಇಡೀ ಜಿಲ್ಲೆಯೊಳಗೆ ಅಂಕೋಲಾ ತಾಲೂಕಾ ಬೋರ್ಡು ಮೊಟ್ಟ ಮೊದಲು ಸಮಾಜವಾದಿಗಳ ಆಡಳಿತಕ್ಕೆ ಒಳಪಡುವಂತೆ ಯೋಜನೆಗಳನ್ನು ರೂಪಿಸಿದ ಬೆರಳೆಣಿಕೆಯ ನಾಯಕರಲ್ಲಿ ಅಮ್ಮೆಂಬಳ ಆನಂದರ ಪಾತ್ರ ಬಹುಮುಖ್ಯವಾದದ್ದು. ಆ ವೇಳೆಗಾಗಲೇ ಸಮಾಜವಾದಿ ಚಳುವಳಿಗೆ ನೇರವಾಗಿ ಧುಮುಕಿದ ನಾನು, ‘ಜನಸೇವಕ’ ಪತ್ರಿಕಾಲಯದ ಮುಂದೆ ರೈತಕಾರ್ಮಿಕರು ‘ಜನಸೇವಕ’ ವಾರ ಪತ್ರಿಕೆಯಲ್ಲಿ ಏನು ಬರೆದಿದೆ ಎಂದು ನೋಡುವ ಕುತೂಹಲದಿಂದ ಹಣ

ಕೊಟ್ಟು ಪತ್ರಿಕೆ ಕೊಳ್ಳಲು ಫರ್ಲಾಂಗುದ್ದ 'ಕ್ಯೂ' ನಿಂತ ದೃಶ್ಯ ಇನ್ನೂ ನನ್ನ ಕಣ್ಮುಂದಿದೆ. ೧೯೬೭ ರಲ್ಲಿ ನಡೆದ ದೇಶದ ಮಹಾಚುನಾವಣೆಯೊಳಗೆ ಉತ್ತರ ಕನ್ನಡ ಜಿಲ್ಲೆಯಿಂದ ಲೋಕಸಭೆಗೆ ದಿನಕರ ದೇಸಾಯಿ ಮತ್ತು ೬ ವಿಧಾನಸಭೆ ಸ್ಥಾನಗಳಲ್ಲಿ ೫ನ್ನು ಸಮಾಜವಾದಿ ಪಕ್ಷವೇ ಗೆದ್ದು ದಾಖಲೆ ನಿರ್ಮಿಸಿದ್ದಕ್ಕೂ ದಿನಕರ ದೇಸಾಯಿ, ಅಮ್ಮೆಂಬಳ, ನಾಡಕರ್ಣಿ, ಶಂಕರ ಕೇಣಿ, ಟಿ.ಕೆ.ಮೆಹಮೂದ ಇವರುಗಳ ಕಾರ್ಯತಂತ್ರವೇ ಮುಖ್ಯ ಕಾರಣವಾಗಿತ್ತು.

೮೦ರ ದಶಕಾರಂಭದಲ್ಲಿ ಅಂದಿನ ಕೇಂದ್ರ ಸಚಿವರಾದ ಜಾರ್ಜ್ ಫರ್ನಾಂಡೀಸ್ ಕಾರವಾರದಲ್ಲಿ ಆರಂಭವಾಗಲಿದ್ದ ನೌಕಾನೆಲೆಯ ಕಾಮಗಾರಿಗೆ ಅಡಿಗಲ್ಲನ್ನಿಡಲು ಆಗಮಿಸಿದ್ದರು. ಎಲ್ಲೆಲ್ಲೂ ಪೊಲೀಸರ ಕಣ್ಗಾವಲು! ಜಾರ್ಜ್ ಫರ್ನಾಂಡೀಸ್ ಅಮ್ಮೆಂಬಳರನ್ನು ಅಲ್ಲಿ ಕಂಡಾಕ್ಷಣವೇ 'ಓ ಆನಂದ್ ನೀವಿಲ್ಲಿ, ತುಂಬಾ ಖುಷಿಯಾಯಿತು' ಎಂದು ಅಪ್ಪಿಕೊಂಡರು. ರಕ್ಷಣಾ ಬಲದವರೆಲ್ಲ ತಬ್ಬಿಬ್ಬು! ಅಮ್ಮೆಂಬಳ ಆನಂದ ಇದೇ ಜಾರ್ಜ್ ಫರ್ನಾಂಡೀಸರ ಜೊತೆಗೇ ಕುಳಿತು ಮಂಗಳೂರಿನಲ್ಲಿ ಓದಿದವರು. ಮುಂದೆ ಅನೇಕ ಸ್ಥಳೀಯ ಜನಪರ ಹೋರಾಟಗಳಲ್ಲಿ ಕೂಡಿ ಕೆಲಸ ಮಾಡಿದವರು. ಜಾರ್ಜ್ ಫರ್ನಾಂಡೀಸರಿಗೆ ಊಟಕ್ಕೂ ಕಷ್ಟವಿದ್ದ ದಿನಗಳಲ್ಲಿ ಆನಂದರ ಚಿಕ್ಕಪ್ಪ ಅಮ್ಮೆಂಬಳ ಬಾಳಪ್ಪನವರೇ ಒಂದಷ್ಟು ದುಡ್ಡುಕೊಟ್ಟು ಮುಂಬೈಗೆ ಕಳಿಸಿದ್ದರು.

ಅಮ್ಮೆಂಬಳರು ಜಯಪ್ರಕಾಶ ನಾರಾಯಣ, ಲೋಹಿಯಾ, ಖಾದ್ರಿ, ಶಾಮಣ್ಣ, ಎಚ್.ಕೆ.ರಂಗನಾಥ, ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾದೇವಿ, ಕೆ.ಎಸ್. ಕಾರಂತ (ಲೇಖಕ ಶಿವರಾಮ ಕಾರಂತರಲ್ಲ) ಮುಂತಾದ ಮಹಾನ್ ಸಮಾಜವಾದಿಗಳ ಸಂಪರ್ಕ ಪ್ರಭಾವದಿಂದ ಇನ್ನಷ್ಟು ಮತ್ತಷ್ಟು ಎಂಬಂತೆ ವಾಗಿದವರು. ಸಮಾಜವಾದಿ ಬದ್ಧತೆಯ ಮೂಲಕ ಬಹಳಷ್ಟನ್ನು ಕಳೆದುಕೊಂಡವರು ಅಮ್ಮೆಂಬಳ ಆನಂದ. ತಮ್ಮ ೮೭ನೇ ವಯಸ್ಸಿನಲ್ಲೂ ಅದೇ ಕ್ರಿಯಾಶೀಲತೆ, ಅದೇ ಸಿದ್ಧಾಂತ, ಅದೇ ಹೋರಾಟದ ಕೆಚ್ಚು. ಹೊಸ ತಲೆಮಾರಿನ ನಮ್ಮ ಪತ್ರಕರ್ತರು ಆ ಕ್ಷೇತ್ರಕ್ಕೆ ಬಂದು ಐದೇ ವರ್ಷಗಳಲ್ಲಿ ಹೊಸ ಮನೆ ಕೊಂಡಿದ್ದಿದೆ. ಆದರೆ ಆನಂದರು ೫೦ ವರ್ಷಗಳ ದುಡಿಮೆಯ ನಂತರವೂ ಬಡವರಾಗಿಯೇ ಉಳಿದು, – ಅಲ್ಲಿ ಇಲ್ಲಿ ಹಣಿಕಿ ಸಣ್ಣವರಾಗದೇ – ಬ್ಯಾಂಕಿನಲ್ಲೇ ಸಾಲ ಮಾಡಿ ವೃತ್ತಿ ಘನತೆಗಿಂತ ದೊಡ್ಡ ಸಂಪತ್ತು ಬೇರಿಲ್ಲ ಎಂದು ತೋರಿಸಿಕೊಟ್ಟವರು. ಸುಮಾರು ೫ ಲಕ್ಷ ರೂಪಾಯಿ ಸಾಲ ತೀರಿಸುವುದಕ್ಕಾಗಿ ಇದ್ದ ತಮ್ಮ ಸ್ವಂತ ಮನೆಯನ್ನೇ ಆನಂದರು ಮಾರಿಬಿಟ್ಟರು. ಈಗ ಮಣಿಪಾಲದ ದಶರಥನಗರದಲ್ಲಿರುವ ಮಗಳ ಮನೆಯಲ್ಲೇ ವಾಸವಾಗಿದ್ದಾರೆ.

ಅಮ್ಮೆಂಬಳ ಆನಂದರ ಪತ್ರಿಕಾ ಕ್ಷೇತ್ರದ ಸಾಧನೆಗಾಗಿ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ (೧೯೮೭), ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ (೧೯೯೬) ಮತ್ತು ಜಿ. ಆರ್. ಪಾಂಡೇಶ್ವರ ಪತ್ರಿಕೋದ್ಯಮ ಪ್ರಶಸ್ತಿ (೨೦೦೪)ಗಳನ್ನಲ್ಲದೆ ಅವರ ಸಮಾಜವಾದಿ ಕೆಲಸ ಕಾರ್ಯಗಳಿಗಾಗಿ ಲೋಕನಾಯಕ ಜೆ.ಪಿ. ಪ್ರಶಸ್ತಿ (೨೦೧೦) ನೀಡಿ ಗೌರವಿಸಲಾಗಿದೆ.

**–ವಿಷ್ಣು ನಾಯ್ಕ**

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ – ೨೪

**–ಇಂದಿರಾ ಬಿ. ಕೃಷ್ಣಪ್ಪ**

### ಓ ನನ ತಂಗಿ ಅನಸೂಯ....

**ಭಾ**ರತದ ಸಾಮಾಜಿಕ ವ್ಯವಸ್ಥೆ, ತಳ ಸಮುದಾಯದವರು ಮತ್ತು ಮಹಿಳೆಯರನ್ನು ಸಮಾನತೆಯ ದೃಷ್ಟಿಯಿಂದ ಎಂದೂ ಪರಿಭಾವಿಸಲೇ ಇಲ್ಲ. ಶತ ಶತಮಾನದ ಈ ದಾಸತ್ವದ ವಿರುದ್ಧದ ಹೋರಾಟಗಳ ಮೂಲಕ ಸ್ವಾಭಿಮಾನ ಮತ್ತು ಸಮಾನತೆಯ ತತ್ವಗಳನ್ನು ಮೈಗೂಡಿಸಿಕೊಳ್ಳುತ್ತಲೇ ಬೆಳೆದ ಪ್ರೊ. ಕೃಷ್ಣಪ್ಪ, ದಸಂಸವನ್ನು ಶೋಷಿತ ಸಮುದಾಯದ ಧ್ವನಿಯಾಗಿ ಕಟ್ಟಿದರು. ೧೯೭೦–೮೦ರ ದಶಕದಲ್ಲಿ ಶೋಷಿತ ಸಮುದಾಯಗಳು ತಮಗಾದ ಅನ್ಯಾಯ ದೌರ್ಜನ್ಯಗಳ ವಿರುದ್ಧ ನ್ಯಾಯಕ್ಕಾಗಿ ಬದುಕುವ ಹಕ್ಕಿಗಾಗಿ, ದಸಂಸದ ಬಾಗಿಲನ್ನು ತಟ್ಟುವಂತಾದದ್ದು. ಆ ಸಂಘಟನೆಯ ಮಾತೃವಾತ್ಸಲ್ಯದ ಅಪ್ಪುಗೆಯೇ ಕಾರಣವಾಗಿತ್ತು. ಅಂತಹ ಒಂದೆರಡು ಸತ್ಯ ಘಟನೆ ಮತ್ತು ಮತ್ತು ಅವುಗಳಲ್ಲಿ ಪ್ರೊ. ಬಿ.ಕೆ.ಯವರು ನಿರ್ವಹಿಸಿದ ಪಾತ್ರ, ಹೋರಾಟವನ್ನು ತೆಗೆದುಕೊಂಡು ಹೋದ ರೀತಿ ಹೇಳದಿದ್ದರೆ ಮನಸ್ಸಿಗೆ ನೆಮ್ಮದಿ ಬಾರದು.

ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಟೇಕಲ್ಲು ಹೋಬಳಿ ಹುಣಸೇಕೋಟೆಯೆಂಬ ಗ್ರಾಮದಲ್ಲಿ ಶೇಷಗಿರಿಯಪ್ಪನೆಂಬ ಬಡ ಕುಂಬಾರ ಮಡಿಕೆ–ಕುಡಿಕೆ ಮಾಡುತ್ತಾ ಜೀವನ ಸಾಗಿಸುತ್ತಿದ್ದ. ಆತನಿಗೆ ಪಿತ್ರಾರ್ಜಿತವಾಗಿ ಎರಡು ಎಕರೆ ಜಮೀನು ಕೂಡ ಇದ್ದಿತ್ತು. ಒಂದು ಎಕರೆಯಲ್ಲಿ ಸೀಬೆಗಿಡ, ಇನ್ನೊಂದು ಎಕರೆಯಲ್ಲಿ ಹುರಳಿ–ರಾಗಿ ಬೆಳೆಯುತ್ತಿದ್ದ ಈತ ಹೆಂಡತಿ ಮತ್ತು ವಿಧವೆ ಮಗಳು ಅನಸೂಯಮ್ಮ ಮತ್ತು ೩ ಮಕ್ಕಳು ಇದ್ದರು. ತಾನಾಯಿತು, ತನ್ನ ಸಂಸಾರವಾಯಿತೆಂದು ಇದ್ದವನೀತ.

ಅದೇ ಊರಿನ ಕೃಷ್ಣಪ್ಪನೆಂಬಾತ ಈತನ ದೊಡ್ಡ ಸಂಸಾರದ ಬವಣೆ ನೋಡಲಾರದೆ, ೨೭ ಗುಂಟೆ ಜಮೀನನ್ನು ಶೇಷಗಿರಿಯಪ್ಪನಿಗೆ ಗುತ್ತಿಗೆ ಕೊಟ್ಟಿದ್ದ. ಊರಿನ ಜಮೀನ್ದಾರ ಕೃಷ್ಣೇಗೌಡನ ಬಳಿ ಕೃಷ್ಣಪ್ಪನ ಈ ೨೭ ಗುಂಟೆ ಜಮೀನು ಮಾರಾಟ ಮಾಡುವುದಾಗಿ ಮೊದಲು ಹೇಳಿದ್ದ. ಆ ಜಮೀನನ್ನು ತನ್ನ ಸಂಬಂಧಿಗಳೊಬ್ಬರಿಗೆ ಮಾರಾಟ ಮಾಡಿಸುವ ಹುನ್ನಾರ ಮಾಡಿಕೊಂಡಿದ್ದ ಜಮೀನ್ದಾರ ಕೃಷ್ಣೇಗೌಡನಿಗೆ ಶೇಷಗಿರಿಯಪ್ಪ ಆ ೨೭ ಗುಂಟೆ ಜಮೀನು ಪಡೆದಿದ್ದು, ನುಂಗಲಾರದ ತುತ್ತಾಯಿತು. ಆವುಗೆಯಲ್ಲಿ ಮಡಿಕೆ ಸುಡುವುದರಿಂದ ಜಾನುವಾರುಗಳ ಸಂಚಾರಕ್ಕೆ ಅಡ್ಡಿಯಾಗುತ್ತದೆ, ಗ್ರಾಮದಲ್ಲಿ ಪರಿಸರ ಮಾಲಿನ್ಯವಾಗುತ್ತದೆ ಎಂದು, ಬಿಡಿಓ ಅವರಿಂದ ನೋಟೀಸು ಕೊಡಿಸಿದ. ಆತನ ಒಂದು ಎಕರೆ ಜಮೀನಲ್ಲಿ ನಿವೇಶನ ಮಾಡಿಸಿ, ಬಡವರಿಗೆ ಹಂಚಲು ಸರ್ಕಾರದಿಂದ ಭೂಸ್ವಾಧೀನ ಆಜ್ಞೆ ಹೊರಡಿಸಿದ್ದ, ಉಳಿದ ಜಮೀನು ಅಕ್ರಮ ಒತ್ತುವರಿ ಎಂದು ರೂ. ೨೭೮೦/– ಡಿ.ಡಿ. ದಂಡ ಹಾಕಿಸಿದ್ದ. ಆದರೆ ಕೃಷ್ಣೇಗೌಡನ



**ದಲಿತ ಸಮ್ಮೇಳನವೊಂದರಲ್ಲಿ ಬಿ. ಕೃಷ್ಣಪ್ಪ ಚರ್ಚೆಯಲ್ಲಿ**

ಈ ಪರಿಯ ಹಿಂಸೆ ತಾಳಲಾರದೆ, ಶೇಷಗಿರಿಯಪ್ಪ ತಾಲ್ಲೂಕು ಕಚೇರಿಗೆ ಜಮೀನಿನ ಪಿತ್ರಾರ್ಜಿತ ದಾಖಲೆ ಸಲ್ಲಿಸುವುದರೊಂದಿಗೆ ಕೃಷ್ಣೇಗೌಡನ ಮೇಲೆ ದೂರನ್ನು ಸಲ್ಲಿಸಿದ.

ಇದರಿಂದ ಕೋಪಾವಿಷ್ಟನಾದ ಕೃಷ್ಣೇಗೌಡ ಅವನ ಬಂಟರಿಂದ ಶೇಷಗಿರಿಯಪ್ಪನ ಗುಡಿಸಲು ಧ್ವಂಸಗೊಳಿಸಿದ. ಜಮೀನಿನಲ್ಲಿ ಬೆಳೆದ ರಾಗಿ ಫಸಲನ್ನು ತನ್ನ ಮನೆಗೆ ಸಾಗಿಸಿದ. ಸೀಬೇಗಿಡ ಕಡಿದು ಎಸೆಯಲಾಯಿತು. ಕೊಲೆ ಬೆದರಿಕೆಯುನ್ನೂ ಒಡ್ಡಿದ. ಕಂಗಾಲಾದ ಶೇಷಗಿರಿಯುಪ್ಪ ಮುಖ್ಯಮಂತ್ರಿಗಳಿಗೆ, ಗೃಹ ಮಂತ್ರಿಗಳಿಗೆ ರಕ್ಷಣೆ ಕೋರಿ ಪತ್ರ ಬರೆದ. ಆ ಪತ್ರದ ಪ್ರತಿಯುನ್ನು ವಿರೋಧ ಪಕ್ಷದ ನಾಯಕರಾದ ಎಸ್.ಆರ್. ಬೊಮ್ಮಾಯಿಯುವರಿಗೆ ಪಂಚಾಯುತ್‌ರಾಜ್ ಸಚಿವರಿಗೆ, ಮುಖ್ಯ ಕಾರ್ಯದರ್ಶಿಗಳಿಗೆ, ಐಜಿಪಿ, ಕ್ಷೇತ್ರದ ಶಾಸಕರುಗಳಿಗೆ ಕಳುಹಿಸುತ್ತಾ, ಕುಟುಂಬದ ಮಾನ ಪ್ರಾಣಗಳಿಗೆ ರಕ್ಷಣೆ ಕೊಡಬೇಕೆಂದು ಕೋರಿಕೊಂಡ. ಆತನ ಮೊರೆ ಯಾರ ಮನವನ್ನೂ ಕರಗಿಸಲಿಲ್ಲ. ಬದಲು ಕೃಷ್ಣೇಗೌಡನ ಅಟ್ಟಹಾಸ ಎಗ್ಗಿಲ್ಲದೆ ಮುಂದುವರಿಯಿತು. ಆತನ ತಮ್ಮ ವೆಂಕಟೇಶ – ನಂಜುಂಡಿ, ಸೀಬೆ ತೋಪು ಕಾಯುತ್ತಿದ್ದ ಶೇಷಗಿರಿಯಪ್ಪನ ವಿಧವೆ ಮಗಳು ಅನಸೂಯಮ್ಮಳ ಮೇಲೆ ಅತ್ಯಾಚಾರ ನಡೆಸಿದರು. ಪ್ರಜ್ಞಾಶೂನ್ಯಳಾದ ಆಕೆಯ ಮುಖದ ಮೇಲೆ ಮೂತ್ರ ವಿಸರ್ಜಿಸಿ ಓಡಿ ಹೋಗಿದ್ದರು.

ಕಂಗಾಲಾದ ಶೇಷಗಿರಿಯಪ್ಪ ಸ್ಥಳೀಯ ಪೋಲೀಸರಲ್ಲಿ "ನನ್ನ

ಖೂನಿಯಾಗುವುದನ್ನು ತಪ್ಪಿಸಿ" ಎಂದು ಅಂಗಲಾಚಿದ. ಬಲಾಢ್ಯರ ಕೈಗೂಸಾದ ರಕ್ಷಣಾ ಸಿಬ್ಬಂದಿ ಈತನ ಕಡೆಗೆ ಬೆನ್ನು ತಿರುಗಿಸಿತ್ತು. ಹತಾಶನಾದ ಶೇಷಗಿರಿಯಪ್ಪ, ಕೋಲಾರ ಜಿಲ್ಲೆಯ ದಲಿತ ಸಂಘರ್ಷ ಸಮಿತಿಯ ಮುಂದೆ ಬಂದು ನಿಂತಿದ್ದ.

ಕರ್ನಾಟಕ ದಸಂಸ ಆ ವೇಳೆಗಾಗಲೇ ರಾಜ್ಯವ್ಯಾಪಿ, ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಹೋರಾಟ ಕೈಗೆತ್ತಿಕೊಂಡಿತ್ತು.

**"ಮನೆಮನೆಯು ಕತ್ತಲೆ, ಪ್ರತಿ ಕಣ್ಣು ಕಣ್ಣೀರು, ರಾಜ್ಯ**
**ಬಂದದ್ದಾರಿಗೋ, ಅಣ್ಣಾ ಸುಖವು ದಕ್ಕಿದ್ದಾರಿಗೋ"**

ಎಂದು ಹಾಡು ಕಟ್ಟುತ್ತಿದ್ದ ಹೂಮನಸ್ಸಿನ ಹುಡುಗರು, ಶೇಷಗಿರಿಯಪ್ಪನ ಕಥೆಯನ್ನು ಕೇಳಿ ಪ್ರೊ. ಕೃಷ್ಣಪ್ಪನವರಲ್ಲಿ ಮುಂದಿನ ಕ್ರಮದ ಬಗ್ಗೆ ಚರ್ಚಿಸಿದರು. ಕೃಷ್ಣಪ್ಪನವರ ಸಲಹೆಯಂತೆ ಕೋಲಾರದಲ್ಲಿ ಬಹು ದೊಡ್ಡ ಪ್ರತಿಭಟನೆ, ಕೃಷ್ಣೇಗೌಡನ ಪ್ರತಿಕೃತಿ ದಹನ ಮಾಡಿ ಆತನ ದಬ್ಬಾಳಿಕೆ ವಿರುದ್ಧ ಕಾನೂನು ಕ್ರಮ ಮತ್ತು ಶೇಷಗಿರಿಯಪ್ಪನಿಗೆ ರಕ್ಷಣೆ ಕೋರಿ ಜಿಲ್ಲಾಧಿಕಾರಿಗಳವರಿಗೆ ಮನವಿ ಸಲ್ಲಿಸಿತು. ಇದರಿಂದ ಪ್ರಯೋಜನವಾಗಲಿಲ್ಲ. ಮುಂದಿನ ಹಂತವಾಗಿ ದಸಂಸದ ಮಹಿಳಾ ವಿಭಾಗವು ಕೋಲಾರದ ಜನಪರ ಸಂಘಟನೆಗಳೊಡಗೂಡಿ ಬೃಹತ್ ಪ್ರತಿಭಟನಾ ಮೆರವಣಿಗೆ ಹಾಗೂ ಖಂಡನಾ ಸಭೆ ನಡೆಸಿತು.

ರಾಜ್ಯ ಸಮಿತಿಯ ಕರೆ ಮೇರೆಗೆ ರಾಜ್ಯಾದ್ಯಂತ ಈ ಘಟನೆಯ ವಿರುದ್ಧ ಪ್ರತಿಭಟನಾ ಮೆರವಣಿಗೆಗಳು ನಡೆದವು. ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಪ್ರೊ. ಬಿ.ಕೆ. ಯವರ ಸಲಹೆ ಮೇರೆಗೆ, ಕೋಲಾರ ಜಿಲ್ಲಾ ಸಂಚಾಲಕರಾದ ಪಿ.ಎಂ. ಮುನಿಯಪ್ಪನವರ ನೇತೃತ್ವದಲ್ಲಿ ಜಿಲ್ಲಾ ಎಸ್.ಪಿ. ಕಚೇರಿ ಮುಂದೆ ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು. ಸರ್ಕಾರ, ಧರಣಿಕಾರರನ್ನು ಬಂಧಿಸಿ, ಕೇಸು ಜಡಿದರೆ ವಿನಹ ಅಪರಾಧಿಯನ್ನು ಬಂಧಿಸಲಿಲ್ಲ. ಅದೇ ದಿನ ಬೆಂಗಳೂರಿನಲ್ಲಿ ದಸಂಸ ವಿಶೇಷ ಪತ್ರಿಕಾ ಗೋಷ್ಠಿ ನಡೆಸಿ, ದೌರ್ಜನ್ಯ ಹಿಂಸೆ, ಅತ್ಯಾಚಾರವನ್ನು ಖಂಡತುಂಡವಾಗಿ ಖಂಡಿಸಿತು. ಜನರಿಗೆ ಏನಾದರೇನು? ಸರ್ಕಾರ ನಿದ್ದೆ ಮಾಡುತ್ತಿತ್ತು. ತನ್ನ ಮಾನವನ್ನು ಹರಾಜಿಗಿಡುತ್ತಿರುವ ಶೇಷಗಿರಿಯಪ್ಪನ ಸರ್ವನಾಶವೊಂದೇ ಕಡೇ ದಾರಿಯೆಂದು, ಕೃಷ್ಣೇಗೌಡ ಮತ್ತವನ ಪಟಾಲಂ, ಶೇಷಗಿರಿಯಪ್ಪನ ಮನೆಗೆ ನುಗ್ಗಿ ಅವನನ್ನು ಕೊಚ್ಚಿ ಕೊಲೆಮಾಡಿತು. ಮನೆಮಂದಿಯ ಮೇಲೆ ಹಲ್ಲೆ ಮಾಡಿತು. ನೆರೆದ ಜನ ಭಯಭೀತರಾಗಿ ನೋಡುತ್ತಾ ನಿಂತಿದ್ದರಷ್ಟೆ.

ದಸಂಸ ಕಾರ್ಯಕರ್ತರು, ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದರು. ಪೋಲೀಸ್ ಕ್ರಮಗಳಿಗಾಗಿ ಓಡಾಡಿದರು. ಪರಿಸ್ಥಿತಿ ಬಿಗಡಾಯಿಸುತ್ತಿರುವುದರ ಸುಳಿವರಿತ, ಭೂಮಾಲೀಕರೆಲ್ಲಾ ಒಟ್ಟಾಗುವ ಸೂಚನೆಗಳನ್ನರಿತ ದಸಂಸ ಕೋಲಾರದಲ್ಲಿ ತುರ್ತು ಸಭೆಯನ್ನು ಕರೆಯಿತು. ಪ್ರೊ.ಬಿ.ಕೆ.ಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹುಣಸೇ ಕೋಟೆಯಿಂದ ವಿಧಾನ ಸಭೆಯ ಅಧಿವೇಶನ ನಡೆಯುತ್ತಿದ್ದ ವಿಧಾನಸೌಧದವರೆಗೆ ಪಂಜಿನ ಮೆರವಣಿಗೆ ನಡೆಸಲು ಸಭೆ ನಿರ್ಣಯಿಸಿತು. ಅದರಂತೆ, ಜೂನ್ ೯ ರಂದು ಪ್ರೊ. ಬಿ.ಕೆ. ಯವರ ನೇತೃತ್ವದ ಹುಣಸೇ ಕೋಟೆಯಿಂದ ಹೊರಟ ಕಾಲ್ನಡಿಗೆಯ ಪಂಜಿನ ಮೆರವಣಿಗೆ ಹಳ್ಳಿಗಳ ನಡುವೆ ಹಾದು ಮುನ್ನಡೆಯಿತು. ಹಾದಿ ಬೀದಿಯಲ್ಲಿ ಹಳ್ಳಿಯ ಜನರೇ ಇವರಿಗೆ ಊಟ ನೀರು, ಮಲಗಲು ಸ್ಥಳ ನೀಡಿದ್ದರು.

**ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು**
**ಟೇಕಲ್ಲು ಹೋಬಳಿ ಹುಣಸೇಕೋಟೆ ಎಂಬಲ್ಲಿ ನೀ ಹುಟ್ಟಿ**
**ಬೆಳೆದೆಯಮ್ಮ ಓ ನನ ತಂಗಿ ಅನಸೂಯ....**

ಎಂದು ಇಡೀ ಘಟನೆಯನ್ನು ಕುರಿತು ಹಾಡು ಕಟ್ಟಿ ಹಾಡುತ್ತಾ ಸಾಗಿದ ಜಾಥ, ಗ್ರಾಮೀಣ ಜನರನ್ನು ಜಾಗೃತಿಗೊಳಿಸಿತ್ತು. ಕೊಲೆಗಡುಕ ಕೃಷ್ಣೇಗೌಡನ ಗಡಿಪಾರು, ನ್ಯಾಯಾಂಗ ತನಿಖೆ, ಆಸ್ತಿ ಮುಟ್ಟುಗೋಲು, ಜಾಮೀನು ನಿರಾಕರಣೆ, ಇತ್ಯಾದಿ ಬೇಡಿಕೆಗಳುಳ್ಳ ಕರಪತ್ರ ದಾರಿಯುದ್ದಕ್ಕೂ ಜನರಿಗೆ ವಿತರಿಸಲಾಗಿತ್ತು. ಜಾಥ ಜೂನ್ ೧೨ರಂದು ಬೆಂಗಳೂರಿನ ಅಲಸೂರು ಪ್ರದೇಶವನ್ನು ತಲುಪುತ್ತಿದ್ದಂತೆ, 'ಮುಖ್ಯಮಂತ್ರಿಗಳನ್ನು ೧೧.೩೦ಗಂಟೆಯೊಳಗೆ ಭೇಟಿಯಾಗಬೇಕೆಂದು' ಪೋಲೀಸರಿಂದ ಸಂದೇಶ ಬಂದಿತ್ತು. ಅರ್ಧಗಂಟೆಯೊಳಗೆ ವಿಧಾನಸೌಧ ತಲುಪಲಾಗದ ಸ್ಥಿತಿಯಲ್ಲಿದ್ದ ಕಾರ್ಯಕರ್ತರ ಪರಿಸ್ಥಿತಿ ಕಂಡು, ಕೃಷ್ಣಪ್ಪ ೭೦ ಕಿ.ಮೀ. ನಡೆದು ಕಾಲುಗಳು ಬಾತುಹೋಗಿವೆ. ನಾವು ಅನಂತರ ನೋಡುತ್ತೇವೆ' ಎಂದರು.

'ಮುಖ್ಯಮಂತ್ರಿಗಳು ಕಾರ್ಯನಿಮಿತ್ತ ಬೇರೆ ಊರಿಗೆ ಹೋಗುವವರಿದ್ದಾರೆ. ರಾತ್ರಿ ೧೨.೩೦ಗಂಟೆಗೆ ಬರಲಿದ್ದಾರೆ. ಇಂದು ನೋಡಲಾಗುವುದಿಲ್ಲ. ನಾಳೆ ನೋಡಬಹುದು" ಎಂದ ಪೋಲೀಸರು, ವಿಧಾನಸೌಧ ಪ್ರವೇಶಕ್ಕೆ ನಿಷೇಧಾಜ್ಞೆ ಇದೆ ಎಂದು ಮೆರವಣಿಗೆಯನ್ನು ಅಲ್ಲಿಯೇ ತಡೆದರು. ತಡೆದ ಜಾಗದಲ್ಲೇ ಬಹಿರಂಗ ಸಭೆ ನಡೆಸಲಾಯಿತು. ತದನಂತರ ವಿಧಾನಸೌಧದ ಕಡೆಗೆ ಜಾಥಾ ನಡೆಯಿತು. ಇದರಿಂದ ಒತ್ತಡಕ್ಕೆ ಸಿಕ್ಕ ಸರ್ಕಾರ ಸುಮಾರು ೪ ಗಂಟೆಗೆ ವಿಧಾನಸಭಾಧ್ಯಕ್ಷರ ಭೇಟಿಗೆ ಆಹ್ವಾನ ನೀಡಿತು. ಕೃಷ್ಣಪ್ಪ ಮತ್ತು ಐದು ಮಂದಿ ಮುಖ್ಯಸ್ಥರು, ವಿಧಾನಸೌಧಕ್ಕೆ ತೆರಳಿದರಾದರೂ ಯಾರನ್ನೂ ಭೇಟಿಯಾಗಲಾಗದೆ ನಿರಾಶರಾಗಿ ವಾಪಸ್ಸಾದರು. ಆಗಿನ ಮುಖ್ಯಮಂತ್ರಿ ಗುಂಡೂರಾಯರು, ಯಾವುದೇ ಊರಿಗೆ ಹೋಗದೆ, ವಿಧಾನಮಂಡಲದಲ್ಲೇ ಇರುವುದು ತಿಳಿಯಿತು. ಕಾರ್ಯಕರ್ತರು ಆಕ್ರೋಶಗೊಂಡರು. 'ಓಟು ಹಾಕಿ ಗೆಲ್ಲಿಸಿದ ಜನ ಬಂದಿದ್ದಾರೆ. ಮುಖ್ಯಮಂತ್ರಿಗಳೇ ಬಂದು ಇಲ್ಲಿ ನಮ್ಮನ್ನು ಭೇಟಿಮಾಡಬೇಕು" ಎಂದು ಕೃಷ್ಣಪ್ಪ ಕರೆಕೊಟ್ಟರು. ಪೋಲೀಸರು ಲಾಠಿ ಚಾರ್ಜ್ ಮಾಡಿ ಎಲ್ಲರನ್ನು ಬಂಧಿಸಿದರು. ಸಾಯಂಕಾಲದ ವೇಳೆಗೆ ೧೪೭ ಜನರನ್ನು ಯಶವಂತಪುರದಲ್ಲಿ ಬಿಡುಗಡೆಗೊಳಿಸಿದರು. ಕೃಷ್ಣಪ್ಪ ಮತ್ತಿತರ ೧೪ ಮಂದಿಯನ್ನು ನ್ಯಾಯಾಂಗ ಬಂಧನಕ್ಕೊಳಪಡಿಸಲಾಯಿತು..

ಮರುದಿನ ಸ್ವಂತ ಜಾಮೀನಿನ ಮೇಲೆ ಬಿಡುಗಡೆಯಾದ ಕೃಷ್ಣಪ್ಪ ಬಹಳ ವರ್ಷಗಳ ಕಾಲ ಕೇಸಿಗಾಗಿ ಅಲೆದಾಡಬೇಕಾಯಿತು. ಮರುದಿನದ ವಿಧಾನಸಭೆಯಲ್ಲಿ ಪ್ರತಿಪಕ್ಷಗಳ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸುತ್ತಾ "ಜಾಥಾದಲ್ಲಿ ಗೂಂಡಾಗಳು ಸೇರಿದ್ದರು, ಜಾಥಾದಲ್ಲಿ ಶಿಸ್ತು ಇರಲಿಲ್ಲ. ನಿಷೇಧಿತ ಪ್ರದೇಶಕ್ಕೆ ನುಗ್ಗಿದ್ದರಿಂದ ಲಾಠಿ ಪ್ರಹಾರ ಮಾಡಲಾಗಿದೆ. ಅನಸೂಯಮ್ಮಳನ್ನು ಮಹಿಳಾ ಪೋಲೀಸರು ಬಂಧಿಸಿದ್ದಾರೆ." ಎಂದು ವಿವರಣೆ ಕೊಟ್ಟಿತು.. ಇದನ್ನು ಖಂಡಿಸಿ ದಸಂಸ ತನ್ನ ಕಾರ್ಯಕರ್ತರ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯದ ವಿವರಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿತು. ಪ್ರಗತಿಪರ ಸಂಘಟನೆಗಳು, ಮಾಧ್ಯಮದವರು ರಾಜ್ಯಾದ್ಯಂತ ದಸಂಸದ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. "ಶೇಷಗಿರಿಯಪ್ಪನ ಕೊಲೆ" ಎಂಬ ನಾಟಕ ರಚನೆಯಾಗಿ, ಅಲ್ಲಲ್ಲಿ ಪ್ರದರ್ಶನಗೊಳ್ಳಲಾರಂಭಿಸಿತು. ಆ ಲಾಗಾಯ್ತು ದಸಂಸದ ಹೋರಾಟಗಳಲ್ಲಿ ಅನಸೂಯಮ್ಮಳ ಮೇಲೆ ರಚಿತವಾದ ಹಾಡುಗಳನ್ನು ಕಾರ್ಯಕರ್ತರು ಹಾಡುತ್ತಿರುತ್ತಾರೆ. ಜಾಥಾ ಹಾದು ಹೋದ ಆ ಹಳ್ಳಿಗೆ ನಾನೀಗ ಭೇಟಿ ಕೊಟ್ಟಾಗಲೂ, ಹಳ್ಳಿಯ ಹಿರಿಯರು ಆ ಜಾಥಾದ ನೆನಪನ್ನು ಮೆಲುಕು ಹಾಕುತ್ತಾ, ಪ್ರೊ. ಬಿ.ಕೆ. ತಂಗಿದ್ದ, ಮಲಗಿದ್ದ ಜಗುಲಿಗಳನ್ನು ತೋರಿಸುತ್ತಾರೆ.

ಎಲ್ಲ ಕಡೆಯಿಂದ ವ್ಯಕ್ತವಾದ ಒತ್ತಡದಿಂದಾಗಿ ಕೃಷ್ಣೇಗೌಡನ ಮೇಲೆ ಕೊಲೆ ಪ್ರಕರಣ ಕೋಲಾರ ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಾಗಿ ಕೊನೆಗೆ ಅನಸೂಯಮ್ಮಳ ಪರವಾಗಿ ತೀರ್ಪು ಹೊರಬಿತ್ತು. ಕೃಷ್ಣೇಗೌಡನಿಗೆ ೭ ವರ್ಷ ಸಜೆ ಹಾಗೂ ದಂಡ ವಿಧಿಸಲಾಗಿತ್ತು. ಆದರೆ ಕೃಷ್ಣೇಗೌಡ ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಿದಾಗ ಅವನ ಶಿಕ್ಷೆ ರದ್ದಾಯಿತು. ಈ ಸಂಬಂಧವಾಗಿ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ದಾಖಲಿಸಬೇಕೆಂದು ಮತ್ತು ದಸಂಸ ಕಾರ್ಯಕರ್ತರ ಮೇಲೆ ಹಾಕಿರುವ ಕೇಸುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರೊ. ಕೃಷ್ಣಪ್ಪ ಸರ್ಕಾರಕ್ಕೆ ಪತ್ರ ಬರೆದರು. ಬಹಳ ವರ್ಷಗಳ ನಂತರ ಅಂದರೆ ಜನತಾದಳ ಸರ್ಕಾರ ಬಂದಾಗ ರಾಮಕೃಷ್ಣ ಹೆಗ್ಡೆ ಮುಖ್ಯಮಂತ್ರಿಗಳಾಗಿದ್ದಾಗ ಈ ಪ್ರಕರಣಗಳನ್ನು ಹಿಂತೆಗೆದುಕೊಳ್ಳಲಾಗಿತ್ತು. ಕೃಷ್ಣೇಗೌಡ ಈಗ ಮರಣ ಹೊಂದಿದ್ದಾನೆ. ಅನಸೂಯಮ್ಮ ಹುಣಸೇಕೋಟೆಯಲ್ಲಿ ಬದುಕು ಸವೆಸುತ್ತಿದ್ದಾಳೆ.

ಮೂವತ್ತು ವರ್ಷಗಳ ಹಿಂದೆ ನಡೆದ ಕೆಳವರ್ಗದವರ ಮೇಲಿನ ದೌರ್ಜನ್ಯ ಹಾಗೂ ಅತ್ಯಾಚಾರದ ಪ್ರಕರಣವನ್ನು ಪ್ರೊ. ಬಿ. ಕೃಷ್ಣಪ್ಪ, ದಸಂಸ ಸಂಘಟನೆಯ ಪರವಾಗಿ ಕೈಗೆತ್ತಿಗೊಂಡು ನಡೆಸಿದ ರಾಜ್ಯವ್ಯಾಪಿ ಪ್ರತಿಭಟನೆ ಹಾಗೂ ಜಾಗೃತಿ ಮತ್ತು ಅದು ಒಡಮೂಡಿಸಿದ ಸಾರ್ವಜನಿಕ ಅನುಕಂಪ ಮತ್ತು ಬೆಂಬಲ, ಜನಪರ ಚಳುವಳಿಗಳಿಗೆ ಈಗಲೂ ಮಾದರಿಯಾಗಿದೆ.

ಅಂದಿನ ದಿನಗಳಲ್ಲಿ ನಾನು ನಿದ್ದೆಬಾರದ ಎಷ್ಟೋ ರಾತ್ರಿಗಳನ್ನು ಕಳೆದಿದ್ದೇನೆ. ಯಾವ ಸಂಪರ್ಕ ಸಾಧನಗಳಿಲ್ಲದ ಆ ದಿನಗಳಲ್ಲಿ ಯಾವ ಅಪಾಯವಿಲ್ಲದೆ ಅವರು ಹಿಂತಿರುಗಲಿ ಎಂದು ಮನಸ್ಸು ಹಂಬಲಿಸುತ್ತಿತ್ತು. ಕೃಷ್ಣಪ್ಪ ವಾಪಾಸಾದಾಗ, ಏನನ್ನೂ ಪ್ರಶ್ನಿಸದೆ ಅವರ ಮಾನಸಿಕ–ದೈಹಿಕ ವಿಶ್ರಾಂತಿಗೆ ಮಾತ್ರ ಗಮನ ಕೊಡುತ್ತಿದ್ದೆ.

**(ಮುಂದುವರೆಯುವುದು).**

# ಅಲ್ಪಸಂಖ್ಯಾತರಲ್ಲಿ ಬದಲಾವಣೆಯ ಗಾಳಿ?

–ಬಲ್‌ಬೀರ್ ಪೂಂಜ್



ಇಸ್ಲಾಮಿ ಭಯೋತ್ಪಾದನೆ ಎಂಬುದು ದಿನೇ ದಿನೇ ಹೊಸ ಹೊಸ ರೂಪಗಳನ್ನು ತಾಳುತ್ತಾ ಜಗತ್ತನ್ನು ತಲ್ಲಣಗೊಳಿಸುತ್ತಿರುವ ಈ ಹೊತ್ತಿನಲ್ಲಿ ಇದರ ಮೂಲದ ಬಗ್ಗೆ ವ್ಯವಧಾನದಲ್ಲಿ ಆಲೋಚಿಸುವುದು ಅಗತ್ಯವೆನಿಸಿದೆ. ವಿಶೇಷವಾಗಿ ಇತ್ತೀಚೆಗೆ ಇರಾಕ್‌ನಲ್ಲಿ ಈ ಭಯೋತ್ಪಾದನೆಯ ಹೊಸ ರೂಪ ಇಸ್ಲಾಮಿಕ್ ಸ್ಟೇಟ್ ಎಂಬ ಹೆಸರಿನ ಸಂಘಟನೆಯು ಓರ್ವ ಅಮೆರಿಕನ್ ಮತ್ತೋರ್ವ ಬ್ರಿಟಿಷ್ ಪತ್ರಕರ್ತರ ಶಿರಚ್ಛೇದನ ಮಾಡಿ ಮತ್ತೊಂದು ಶಿರಚ್ಛೇದನದ ಬೆದರಿಕೆ ಹಾಕಿರುವ ಸಂದರ್ಭದಲ್ಲಿ. ಇಸ್ಲಾಮಿಕ್ ಭಯೋತ್ಪಾದನೆಗೆ, ಸದ್ಯದ ಐ.ಎಸ್. ಸಂಘಟನೆ ಇರಾಕ್‌ನಲ್ಲಿ ಅಮೆರಿಕಾ ನಡೆಸಿದ ಅಪಕ್ವ ಮಿಲಿಟರಿ ಹಸ್ತಕ್ಷೇಪವೇ ಕಾರಣವೆಂದು ಹೇಳುತ್ತಿರುವಂತೆ ಅನೇಕ ಕಾರಣಗಳನ್ನು ನೀಡಲಾಗುತ್ತದೆ. ಆದರೆ ಅದರ ಈ ಅಮಾನುಷ ಮತ್ತು ಜಿಗುಪ್ಸೆಕರ ವರ್ತನೆಗೆ ಇದೆಲ್ಲ ಸಮರ್ಥನೆಯಾಗಲಾರದು. ಇಸ್ಲಾಮೀ ಭಯೋತ್ಪಾದನೆಗೆ ಹೊರಗಿನ ಕಾರಣಗಳಿರುವಂತೆಯೇ ಒಳಗಿನ ಕಾರಣಗಳೂ ಇವೆ ಎಂದು ಹೇಳಲಾಗುತ್ತಿದೆ. ಇಸ್ಲಾಮಿನ ಪುರೋಹಿತಶಾಹಿಯನ್ನು ಇತರ ಮತಗಳಲ್ಲಿನ ಪುರೋಹಿತಶಾಹಿಯನ್ನು ಆಯಾ ಮತಗಳೊಳಗಿನ ವಿವೇಕಿಗಳು ಪ್ರಶ್ನಿಸಿ ಪಳಗಿಸಿದಂತೆ ಆ ಮತದ ವಿವೇಕಿಗಳು ಪ್ರಶ್ನಿಸಿ ಪಳಗಿಸುವ ಛಾತಿ ತೋರಲಾಗಿಲ್ಲ ಎಂಬ ಮಾತೂ ಇದೆ. ಏಕೆ ಎಂಬುದು ದೊಡ್ಡ ಪ್ರಶ್ನೆ.. ಅದೇನೇ ಇದ್ದರೂ, ಭಾರತದಂತಹ ಬಹುಮತಗಳ ನಾಡಿನಲ್ಲಿ ಇದು ಹೆಚ್ಚು ಕಾಲ ನಡೆಯಲಾರದು ಎಂಬ ಸೂಚನೆಗಳು ಬರತೊಡಗಿವೆ. ಆ ಸಮಾಜದ ಹೊರಗಿನಿಂದಲೂ ಮತ್ತು ಒಳಗಿನಿಂದಲೂ. ಅಂತಹುದೊಂದು ಸೂಚನೆಯ ಬಗ್ಗೆ ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷ ಬಲಬೀರ್ ಪೂಂಜ್ ಅವರು ಬರೆದಿದ್ದಾರೆ. ಅವರು ಬಿಜೆಪಿಯವರು ಎಂಬ ಕಾರಣಕ್ಕೆ ಈ ಬರಹದ ಹಿಂದಿನ ಕಳಕಳಿ ಪ್ರಶ್ನಾರ್ಹವಾಗಬಾರದೆಂಬುದು ಪತ್ರಿಕೆಯ ನಂಬಿಕೆ. ನಿಮಗೇನನ್ನಿಸುತ್ತದೆ, ಬರೆಯಿರಿ.–ಸಂ

ಇಸ್ಲಾಮಿಕ್ ಶರಿಯತ್ ಕಾನೂನನ್ನು ಮುಸ್ಲಿಮರ ಮೇಲೆ ಶಾಸನಾತ್ಮಕವಾಗಿ ಹೇರಲಾಗದು ಮತ್ತು ಫತ್ವಾಗಳು ವ್ಯಕ್ತಿಯೊಬ್ಬನ ಸಂವಿಧಾನದತ್ತ ಹಕ್ಕನ್ನು ಉಲ್ಲಂಘಿಸಬಾರದು. ಇದು ಕಳೆದ ಜುಲೈ ೭ರ ಸುಪ್ರೀಂ ಕೋರ್ಟ್ ನೀಡಿದ ತೀರ್ಪು. ಈ ತೀರ್ಪು ಭಾರತದ ಮತ್ತು ಜಗತ್ತಿನ ಇತಿಹಾಸ ನಿರ್ಣಯಾತ್ಮಕ ಸಂದರ್ಭದಲ್ಲಿ ಬಂದಿದೆ ಎಂದೇ ಹೇಳಬೇಕು. ಹಿಂದಿನ ಸರ್ಕಾರವು ಜಾತ್ಯಾತೀತತೆಯ ಹೆಸರಿನಲ್ಲಿ ಮುಸ್ಲಿಂ ಸಮುದಾಯದೊಳಗಿನ ಮೂಲಭೂತವಾದಿಗಳ ಗುಂಪನ್ನು ಓಲೈಸುತ್ತಾ ಬಂದದ್ದನ್ನು ಸತತವಾಗಿ ವಿರೋಧಿಸಿದ ಬಿಜೆಪಿ ಮುಂದಾಳತ್ವದ ಎನ್‌ಡಿಎ ಸರ್ಕಾರಕ್ಕೆ ಮತದಾರರು ಭಾರೀ ಬಹುಮತವನ್ನು ನೀಡಿರುವ ಸಂದರ್ಭದಲ್ಲೇ ಈ ತೀರ್ಪು ಹೊರಬಿದ್ದಿದೆ. ಈ ಓಲೈಕೆಯ ಪರಿಣಾಮವೆಂಬುದು ವೈಯಕ್ತಿಕ ಕಾನೂನಿನ ಹೆಸರಿನಲ್ಲಿ ಯಾವುದೇ ತರ್ಕಬದ್ಧ ವಿವರಣೆಗೆ ಸಿಗದ ತಮ್ಮ ಇಚ್ಛೆಯನ್ನು ಜನರ ಮೇಲೆ ಹೇರುವುದಕ್ಕೆ ಮುಸ್ಲಿಂ ಸಂಪ್ರದಾಯವಾದಿಗಳ ಕೈಗೆ ಸಿಕ್ಕಿದ ಖಾಲಿ ಚೆಕ್‌ಪುಸ್ತಕವೇ ಆಗಿತ್ತು.

ಶರಿಯತ್ ಕಾನೂನನ್ನಾಧರಿಸಿದ ಫತ್ವಾಗಳ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಗೆ ಕಾರಣವಾದ ಪ್ರಸಂಗವನ್ನು ಗಮನಿಸಿ, ತನ್ನ ಸೊಸೆಯ ಮೇಲೆ ಸ್ವತಃ ಮಾವನೊಬ್ಬ ಅತ್ಯಾಚಾರವೆಸಗಿದ ಸಂದರ್ಭದಲ್ಲಿ ಆ ಸೊಸೆ ಅತ್ಯಾಚಾರಿ ಮಾವನ ಜೊತೆ ಆತನ ಹೊಸ ಹೆಂಡತಿಯಾಗಿ ಬಾಳಬೇಕು. ತನ್ನ ಗಂಡನನ್ನು ತ್ಯಜಿಸಬೇಕು ಎಂಬ ತೀರ್ಪನ್ನು ದೈವನಿಯಮದ ಹೆಸರಿನಲ್ಲಿನ ಮುಸ್ಲಿಂ ವೈಯಕ್ತಿಕ ಕಾನೂನಿನಡಿಯಲ್ಲಿ ನೀಡಲಾಗಿತ್ತು.

ಮೊದಲನೆಯದಾಗಿ ಮಾವನಿಂದಲೇ ಅತ್ಯಾಚಾರಕ್ಕೊಳಗಾದ ಆ ಬಡಪಾಯಿ ಮಹಿಳೆ ಅತ್ಯಾಚಾರಿ ಮಾವನ ಜೊತೆಯೇ ಬದುಕಬೇಕೆಂಬ ತೀರ್ಪು ಒಂದು ಅನ್ಯಾಯವಾದರೆ, ಆಕೆ ತನ್ನ ಗಂಡನನ್ನೂ ತ್ಯಜಿಸಬೇಕೆಂಬ ಮತ್ತೊಂದು ಅನ್ಯಾಯಕ್ಕೆ ಬಲಿಪಶುವಾಗಬೇಕಾಗಿ ಬಂದ ಸಂದರ್ಭದಲ್ಲಿ ಆ ಮಹಿಳೆಗೆ ಸಹಾಯ ಮಾಡುವ ನಿಟ್ಟಿನಲ್ಲಿ ಸಮುದಾಯದ ನಾಯಕರು ಒಂದು ಕಿರುಬೆರಳನ್ನೂ ಎತ್ತಲಿಲ್ಲ.

ದೈವನಿಯಾಮಕತೆಯ ಹೆಸರಿನಲ್ಲಿ ಮುಸ್ಲಿಂ ವೈಯಕ್ತಿಕ ಕಾನೂನನ್ನು ಈ ರೀತಿಯಲ್ಲಿ ಅರ್ಥೈಸುವುದರ ಬಗ್ಗೆ ಹಲವಾರು ಸಾಮಾನ್ಯ ಮುಸ್ಲಿಮರಲ್ಲಿದ್ದ ಕೋಪವು ಇತ್ತೀಚಿನ ಮತದಾರನ ತೀರ್ಪಿನಲ್ಲಿ ಬಿಂಬಿತವಾಗಿದೆ. ಮುಸ್ಲಿಂ ಬಾಹುಳ್ಯದ ಹಲವಾರು ಪ್ರದೇಶಗಳಲ್ಲಿ ಸಹ ಬಿಜೆಪಿ ಮತದ ಪಾಲಿನಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. ಮುಸ್ಲಿಮರು ಭಾರತದ ಪ್ರಧಾನಧಾರೆಯಲ್ಲಿ ಒಂದಾಗುವುದರಲ್ಲೇ ಅವರ ಏಳಿಗೆ ಇದೆ ಎಂಬ ವಿಚಾರವನ್ನು ಉಗ್ರ ವರ್ತನೆಯ ಧಾರ್ಮಿಕ ನಾಯಕರು ಅರ್ಥಮಾಡಿಕೊಳ್ಳುತ್ತಾರಾ ಎಂಬುದು ಶರಿಯತ್ ಕಾನೂನಿನ ಅನ್ವಯದ ಸಾಧ್ಯತೆಯ ಕುರಿತು ನ್ಯಾಯಾಲಯದ ತೀರ್ಪಿನ ಬಗ್ಗೆ ಅವರ ಕ್ಷೀಣ ಪ್ರತಿಕ್ರಿಯೆಯಿಂದಲೇ ಗೊತ್ತಾಗುತ್ತದೆ. ಶರಿಯತ್‌ನ್ನು ಉಲ್ಲೇಖಿಸಿ ಯಾರೇ ಅಥವಾ ಯಾವುದೇ ಸಂಸ್ಥೆ ಹೊರಡಿಸುವ ನೀಡುವ ಫತ್ವಾಗಳು ಅಥವಾ ಆಜ್ಞೆಗಳು ಪ್ರಜಾಪ್ರಭುತ್ವದಡಿಯ ಜನತಾ ಸಭೆಗಳೆನಿಸಿದ ಶಾಸನ ಸಭೆಗಳ ಮೂಲಕ ರೂಪಿತವಾದ ಅಥವಾ ಅನುಮೋದಿತವಾದುವುಗಳಲ್ಲವಾದ್ದರಿಂದ ಅವಕ್ಕೆ ಶಾಸನಾತ್ಮಕ ಮಾನ್ಯತೆ ಇಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ ಪೀಠ ಸ್ಪಷ್ಟಪಡಿಸಿದೆ. ಇದಕ್ಕೆ ಮುಸ್ಲಿಂ ಗುರುಗಳು ಮತ್ತು ನಾಯಕರ ಪ್ರತಿಕ್ರಿಯೆ ಕ್ಷೀಣವಾದುದಾಗಿದ್ದರೆ, ನ್ಯಾಯಾಂಗ ವ್ಯವಸ್ಥೆಗೆ ಪರ್ಯಾಯವಾಗಿ ನಾವು ಏನೂ ಮಾಡುತ್ತಿಲ್ಲ ಮತ್ತು ಖಾಜಿಯು ನೀಡುವ ಯಾವುದೇ ತೀರ್ಪನ್ನು ಎಲ್ಲರೂ ಪಾಲಿಸಲೇ ಬೇಕೆಂಬ ನಿರ್ಬಂಧವಿಲ್ಲ ಎಂಬುದಷ್ಟೇ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಸದಸ್ಯ ಜುಲ್ಫಿಕರ್ ಜಲಾನಿಯವರ ಪ್ರತಿಕ್ರಿಯೆಯಾಗಿತ್ತು.

೧೯೮೦ರಲ್ಲಿ ಶಾಬಾನೋ ಪ್ರಕರಣದಲ್ಲಿ ಭಾರತೀಯ ಕಾನೂನಿನ ಪ್ರಕಾರ ವಿಚ್ಛೇದಿತ ಮಹಿಳೆಗೆ ಮಾಜಿ ಪತಿಯಿಂದ ಜೀವನಾಂಶ ಪಡೆಯುವ ಅಧಿಕಾರವಿದೆ ಎಂಬ ಐತಿಹಾಸಿಕ ತೀರ್ಪು ಸರ್ವೋನ್ನತ ನ್ಯಾಯಾಲಯದಿಂದ ಬಂದಾಗ ಇವರೆಲ್ಲರ ಪ್ರತಿಕ್ರಿಯೆ ಹೇಗಿತ್ತು ನೆನಪಿಸಿಕೊಳ್ಳಿ. ಆ ಸಮಯದಲ್ಲಿ ಇಸ್ಲಾಮಿಕ್ ಕಂದಾಚಾರಿಗಳೆಲ್ಲಾ ಒಂದಾಗಿ ಮುಸ್ಲಿಂ ಶರಿಯತ್ ಪ್ರಕಾರ ವಿಚ್ಛೇದಿತ ಮಹಿಳೆಗೆ ಎಷ್ಟು ಪರಿಹಾರ ದೊರೆಯಬೇಕೋ ಅಷ್ಟು ಮಾತ್ರವೇ ದೊರೆಯುವಂತೆ ರಾಷ್ಟ್ರದ ಕಾನೂನಿಗೆ ತಿದ್ದುಪಡಿ ತಂದು ನ್ಯಾಯಾಲಯದ ತೀರ್ಪನ್ನೇ ತಲೆಕೆಳಗು ಮಾಡುವಂತೆ ರಾಜೀವ್‌ಗಾಂಧಿ ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಇದರ ಅರ್ಥ ಭಾರತದಲ್ಲಿ ಭಾರತೀಯನೊಬ್ಬನ ಮಾನವ ಹಕ್ಕಿನ ಪ್ರಶ್ನೆ ಕೆಲವರ ವಿಷಯದಲ್ಲಿ ಸಂವಿಧಾನದ ವ್ಯಾಪ್ತಿಗೆ ಹೊರತಾದ ಪಂಥೀಯ ಕಾನೂನಿನ ವ್ಯಾಪ್ತಿಯಲ್ಲಿ ತೀರ್ಮಾನವಾಗಬೇಕು ಎಂಬುದಾಗಿತ್ತು. ಇಂತಹ ವಿಚಾರಕ್ಕೆ ಅಂದು ಸಿಕ್ಕ ವಿಜಯವು ಭಾರತದ ಎಲ್ಲ ಪ್ರಜೆಗಳು, ವಿಶೇಷವಾಗಿ ಮುಸ್ಲಿಮರು ಮತಮೂಲವಾದ ಕಾನೂನಿನ ಅಡಿಗೆ ಬದಲಾಗಿ ಪ್ರಜಾಪ್ರಭುತ್ವಾತ್ಮಕವಾದ ಆಧುನಿಕ ವಿಚಾರಗಳು ಮತ್ತು ಅನುಲ್ಲಂಘನೀಯವಾದ ಮಾನವ ಹಕ್ಕುಗಳನ್ನು ಆಧರಿಸಿದ ಒಂದು ಕಾನೂನು ವ್ಯವಸ್ಥೆಯಡಿ ಬದುಕಬೇಕೆಂಬ ಸದುದ್ದೇಶದಿಂದ ಸರ್ವೋನ್ನತ ನ್ಯಾಯಾಲಯ ಅಂದು ನೆಟ್ಟ ಗಿಡವನ್ನು ಹೂ ಮೂಡುವ ಮುನ್ನವೇ ಚಿವುಟಿ ಹಾಕಿತು.

ಜಾತ್ಯತೀತತೆಗೆ, ಸಂವಿಧಾನಾತ್ಮಕ ನೀತಿಗೆ ವಿರುದ್ಧವಾದ ಮತ್ತು ಪ್ರತ್ಯೇಕತೆಯ ಮನಃಸ್ಥಿತಿಯನ್ನು ಬಲಪಡಿಸುವ ಇಂತಹ ‘ವಿಜಯ’ ಸೃಷ್ಟಿಸಿದ ವಾತಾವರಣದ ಫಲವಾಗಿಯೇ ೧೯೮೦ರಲ್ಲಿ ಕಾಶ್ಮೀರದಲ್ಲಿ ಉಗ್ರವಾದವು ಬಲಗೊಂಡದ್ದು. ಜಾಗತಿಕ ಮುಸ್ಲಿಂ ಸಂಘಟನೆಯ ಭಾಗವಾಗಿದ್ದು ಪಾಕಿಸ್ತಾನದಲ್ಲಿ ನೆಲೆಹೊಂದಿದ್ದ ಮುಜಾಹಿದೀನ್‌ಗಳು ಭಾರತದೊಳಗೆ ನುಸುಳಲು ಸಾಧ್ಯವಾದದ್ದು ಆಗಲೇ. ಮುಸ್ಲಿಮರಿಗೆ ಪ್ರತ್ಯೇಕ ಶರಿಯಾ ಕಾನೂನು ಮಾತ್ರವೇ ಅನ್ವಯವಾಗಬೇಕೆಂಬುದು ಈ ಮುಜಾಹಿದೀನ್‌ಗಳ ಉದ್ದೇಶವಾಗಿತ್ತು.

ಪಾಕಿಸ್ತಾನ ಸರ್ವಾಧಿಕಾರಿ ಜನರಲ್ ಜಿಯಾನ ಇಸ್ಲಾಮೀ ಶರಿಯತ್ ದಬ್ಬಾಳಿಕೆಯ ಪರಿಣಾಮಗಳಿಂದ ಇನ್ನೂ ಮುಕ್ತವಾಗಿಲ್ಲ. ಹಾಗಾಗಿಯೇ ಆ ದೇಶ ಇಸ್ಲಾಮಿ ಉಗ್ರರ ತವರು ಮತ್ತು ನೆಲೆವೀಡಾಗಿ ಮುಂದುವರೆದಿದ್ದು ಅಲ್ಲಿ ರಕ್ತಪಾತ ನಿತ್ಯದ ವಿದ್ಯಮಾನವಾಗಿ ಹೋಗಿದೆ. ಅದೇನೇ ಇರಲಿ, ಮೇ ೧೬ರ ನಮ್ಮ ಚುನಾವಣಾ ಫಲಿತಾಂಶದ ನಂತರ ಮುಸ್ಲಿಂ ಕಂದಾಚಾರಿ ನಾಯಕತ್ವಕ್ಕೆ ತನ್ನ ಶಕ್ತಿ ಕುಂದಿರುವುದು ಚೆನ್ನಾಗಿ ಗೊತ್ತಾಗಿದೆ. ಎಲ್ಲರನ್ನೂ ಒಳಗೊಳ್ಳುವ ಯಾರಿಗೂ ಆದ್ಯತೆ ನೀಡದ ನಿಜವಾದ ಜಾತ್ಯತೀತ ಕಾರ್ಯಕ್ರಮದ ಕಲ್ಪನೆ ಕೆಲ ಮುಸ್ಲಿಮರ ಮನಹೊಕ್ಕಿರುವುದರ ಅರಿವು ಈ ಮುಸ್ಲಿಂ ನಾಯಕರಿಗೆ ಆಗಿದೆ. ಹಾಗಾಗಿ ೧೯೮೬ರಲ್ಲಿ ಮಾಡಿದಂತೆ ಕಾನೂನಿಗೆ ನ್ಯಾಯಾಲಯದ ಸಮ್ಮತಿ ದೊರೆಯುವಂತೆ ಒತ್ತಾಯಿಸುವ ಯಾವ ನಡೆಯನ್ನೂ ಕೊನೇ ಪಕ್ಷ ತತ್ಕಾಲದಲ್ಲಾದರೂ ನಾವು ನಿರೀಕ್ಷಿಸದೇ ಇರಬಹುದು.

ಆದರೆ ಮತ್ತೊಂದು ನೆಲೆಯ ಅಪಾಯವಿದೆ. ಮುಸ್ಲಿಮರು ಕಲೀಫರಿಂದ ಮಾತ್ರ ಆಳಲ್ಪಡಬೇಕು. ಶರಿಯ ಕಾನೂನು ಮುಸ್ಲಿಮರಿಗೆ ಕಡ್ಡಾಯವಾಗಬೇಕು ಎಂಬ ಭೂಗತ ಮರ್ಮರ ಮತ್ತು ಪ್ರಚಾರ ಇಂಡಿಯನ್ ಮುಜಾಹಿದೀನ್ ತರದ ಉಗ್ರವಾದಿ ಚಳುವಳಿಯ ಭಾಗವಾಗಿದೆ. ಮುಸ್ಲಿಂ ಸಮುದಾಯವು ಯಾವ ಕೆಡಕುಗಳಿಂದ ತೊಂದರೆಗೆ ಒಳಗಾಗಿದೆಯೋ ಅದು ಉಂಟಾಗಿರುವುದು ಮುಸ್ಲಿಂ ಶರಿಯ ಕಾನೂನಿನ ಅವಗಣನೆಯಿಂದ ಎಂಬ ರಮ್ಯ ಕಲ್ಪನೆಯನ್ನು ಮುಸ್ಲಿಂ ಯುವಕರನ್ನು ತಪ್ಪು ದಾರಿಗಳೆಯಲು ಬಳಸಿಕೊಳ್ಳಲಾಗುತ್ತಿದೆ. ಮಧ್ಯಯುಗಕ್ಕೆ ಹಿನ್ನಡೆದಿರುವ ಪರಿಸ್ಥಿತಿಯಿಂದಾಗಿ ಇಸ್ಲಾಮಿಕ್ ಉಗ್ರವಾದ ಮತ್ತು ಆತ್ಮಹತ್ಯಾ ದಾಳಿಗಳು ಪಾಕಿಸ್ತಾನವೂ ಒಳಗೊಂಡಂತೆ ಪಶ್ಚಿಮ ಏಷ್ಯಾದ ಯುದ್ಧರಂಗದ ಕೊಂಬು ಕಹಳೆಗಳಾಗಿ ಮೊಳಗಿವೆ.

ತನ್ನ ತೀರ್ಪಿನ ಮೂಲಕ ಸುಪ್ರಿಂ ಕೋರ್ಟ್ ಪರೋಕ್ಷವಾಗಿ ಮುಸ್ಲಿಂ ರಾಜಕೀಯಕ್ಕೆ ಒಂದು ನಿರ್ಣಾಯಕ ತಿರುವು ಬರಲು ಸಹಾಯಕವಾಗಿದೆ. ಸಮಾನ ನಾಗರಿಕ ಸಂಹಿತೆ ಇರಬೇಕೆಂಬ ಸಂವಿಧಾನದ ಆಶಯಕ್ಕೆ ಬಲನೀಡಿರುವುದು ಈ ತೀರ್ಪಿನ ಒಂದು ಆಶಾದಾಯಕ ಪರಿಣಾಮ. ವೈಯಕ್ತಿಕ ಕಾನೂನಿಗೆ ಸಂಬಂಧಿಸಿದಂತೆ ಮೂಲಭೂತ ಹಕ್ಕುಗಳ ಬಗೆಗಿನ ಸಾಂವಿಧಾನಿಕ ಬದ್ಧತೆಯು ಅಂತಿಮ ಎಂಬುದಾಗಿ ಸುಪ್ರೀಂ ಕೋರ್ಟ್ ಘೋಷಿಸುವುದರೊಂದಿಗೆ ಸಮಾನ ನಾಗರಿಕ ಸಂಹಿತೆಯ ಬಗೆಗಿನ ನಿರ್ದೇಶಕ ತತ್ವಗಳು ಮತ್ತೆ ತಮ್ಮ ಪೀಠದ ಮೇಲೆ ಸ್ಥಾಪನೆಗೊಂಡಿವೆ.

(ಕನ್ನಡಕ್ಕೆ: ಎಂ. ರಾಜು)

(ಕೃಪೆ: ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್, ೧೨ ಜುಲೈ, ೨೦೧೪)

---

## ಕೆ.ಪಿ.ಎಸ್.ಸಿ. ಹಗರಣ ಏನೆಲ್ಲ ಹೇಳುತ್ತಿದೆ?

–ರವಿ ಕೃಷ್ಣಾರೆಡ್ಡಿ

**ಕರ್ನಾಟಕದ ಜನಸೇವೆಗೆ ಅಧಿಕಾರಿಗಳನ್ನು ಆಯ್ಕೆ ಮಾಡಲು ಜನತಾ ಶಕ್ತಿಯೇ ರೂಪಿಸಿರುವ ವ್ಯವಸ್ಥೆಯೇ ಕೊಳೆತು ನಾರತೊಡಗಿದರೆ ಜನತೆಯ ಸೇವೆಯ ಪರಿ ಹೇಗಿರಬೇಡ? ಕರ್ನಾಟಕದ ಆಡಳಿತ ನಡೆಸಲು ಅಧಿಕಾರಿಗಳನ್ನು ಆಯುವ ಕರ್ನಾಟಕ ಲೋಕ ಸೇವಾ ಆಯೋಗ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ದುರಂತ ಕಥೆ ಈಗ ಸವಿವರವಾಗಿ ಬಹಿರಂಗಗೊಂಡಿದೆ. ಅಂದಮಾತ್ರಕ್ಕೆ ಈ ಮುನ್ನ ಇಲ್ಲಿ ಎಲ್ಲ ಸರಿ ಇತ್ತು ಎಂದಲ್ಲ. ಕಳೆದ ಮುವ್ವತ್ತು ವರ್ಷಗಳಲ್ಲಿ ಕರ್ನಾಟಕದ ಘನತೆ ಭಾರತದ ಪ್ರಗತಿ ನಕ್ಷೆಯಲ್ಲಿ ಕ್ರಮೇಣ ಇಳಿಮುಖವಾಗುತ್ತಾ ಹೋದ ಕಥೆಗೂ ಈ ಕೆ.ಪಿ.ಎಸ್.ಸಿ. ಅವನತಿಯ ಕಥೆಗೂ ಸಂಬಂಧವಿದೆ. ಜನತೆ ಮತ್ತು ರಾಜಕಾರಣಿಗಳು ಒಟ್ಟಾಗಿ ಸೇರಿ ರೂಪಿಸಿದ ಅವನತಿಯ ಕಥೆ ಇದು. ಈ ಹಗರಣ ಬಯಲಾಗಿ, ತನಿಖಾ ವರದಿ ಪ್ರಕಟವಾದ ಮೇಲೂ, ಈ ಅವನತಿಯ ಕಥೆಯನ್ನು ಮುಚ್ಚಿ ಹಾಕಲು ಆಡಳಿತ ಪಕ್ಷ, ವಿರೋಧ ಪಕ್ಷಗಳೆಂಬ ಬೇಧವಿಲ್ಲದೆ ಮತ್ತು ಜನಸಮುದಾಯದ ಕೆಲವು ಮೂಲೆಗಳಿಂದ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ನಡೆದ ಪ್ರಯತ್ನಗಳನ್ನು ಇಡೀ ರಾಜ್ಯ ಆಯ್ದ ಕೆಲವರ ಪ್ರತಿಭಟನೆಯ ಹೊರತಾಗಿ ಹೆಚ್ಚೂಕಡಿಮೆ ಮೌನವಾಗಿ ನೋಡಿದೆ. ಇಡೀ ಪ್ರಕರಣ ಈಗ ನ್ಯಾಯಾಂಗದ ವ್ಯಾಪ್ತಿಗೆ ಬಂದಿದ್ದರೂ, ಈ ಇಡೀ ಹಗರಣದ ಹಿಂದಿರುವ ಶಕ್ತಿಗಳ ಚರಿತ್ರೆ ಮತ್ತು ಸ್ವರೂಪವನ್ನು ನೋಡಿದರೆ ನ್ಯಾಯ ಎತ್ತ ಕಡೆ ಎಂಬುದರ ಬಗ್ಗೆ ಅನುಮಾನಗಳೇ ಇವೆ. ಈ ಕೆ.ಪಿ.ಎಸ್.ಸಿ.ಯನ್ನು 'ಶುದ್ಧೀಕರಿಸಲು', ಅದರ ಕಾರ್ಯಚಟುವಟಿಕೆಗಳಿಗೆ ಪಾರದರ್ಶಕತೆ ಒದಗಿಸಲು ಸರ್ಕಾರವೇ ನೇಮಿಸಿದ್ದ ಹೋತಾ ಸಮಿತಿಯ ವರದಿಯ ಮುಖ್ಯ ಸಲಹೆಯೊಂದನ್ನು ಒಪ್ಪಲು ಸರ್ಕಾರ ನಿರಾಕರಿಸುತ್ತಿರುವ ಪರಿ ಮತ್ತು ನಮ್ಮ ಮುಖ್ಯಮಂತ್ರಿಗಳು; ನಮ್ಮ ಬಳಿ ನೆರವಿಗೆ ಬಂದವರ ಪರವಾಗಿ ಒಂದು ಶಿಫಾರ್ಸು ಮಾಡುವ ಅಧಿಕಾರ ನಮಗಿಲ್ಲವೇ?' ಎಂದು ಕೇಳುವ ಭಂಡತನದಲ್ಲಿಯೇ ಇದು ಕೇವಲ ಹಗರಣವಲ್ಲ. ಕರ್ನಾಟಕದ ರಾಜಕಾರಣಕ್ಕೆ ಹತ್ತಿರುವ ಒಂದು ರೋಗ ಎಂಬುದು ಗೊತ್ತಾಗುತ್ತದೆ. ಜನ ಯೋಚಿಸಬೇಕು. ಸಾರ್ವಜನಿಕವಾಗಿ ಸ್ವಲ್ಪ ದನಿ ಎತ್ತರಿಸಿ ಮಾತನಾಡಬೇಕಾದ ಕಾಲವೀಗ ಬಂದಿದೆ.**–ಸಂ.



**ಕ**ರ್ನಾಟಕ ಲೋಕಸೇವಾ ಆಯೋಗ ೨೦೧೧ನೇ ಸಾಲಿನಲ್ಲಿ ೩೬೨ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಗೆ ನಡೆಸಿದ ಪ್ರಕ್ರಿಯೆಯಲ್ಲಿ ಎಲ್ಲಾ ಹಂತದಲ್ಲಿಯೂ ಭ್ರಷ್ಟಾಚಾರ ಮತ್ತು ಅಕ್ರಮಗಳು ನಡೆದಿರುವುದರಿಂದ ಕೆಪಿಎಸ್‌ಸಿಯು ಸರ್ಕಾರಕ್ಕೆ ಸಲ್ಲಿಸಿರುವ ಪಟ್ಟಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಮತ್ತು ಅದನ್ನು ತಿರಸ್ಕರಿಸುತ್ತಿದೆ ಎನ್ನುವ ನಿರ್ಧಾರವನ್ನು ಕಡೆಗೂ ಸರ್ಕಾರ ಆಗಸ್ಟ್ ೭ ರಂದು ತೆಗೆದುಕೊಂಡಿತು. ಇದು ಬಹಳ ದಿಟ್ಟ ಮತ್ತು ಚಾರಿತ್ರಿಕ ನಿರ್ಧಾರವಾಗಿದ್ದು, ಇಂತಹುದೊಂದು ನಿರ್ಧಾರ ತೆಗೆದುಕೊಳ್ಳುವುದು ಸರ್ಕಾರಕ್ಕೆ ಸುಲಭವಾಗಿರಲಿಲ್ಲ. ಹೊರಗೆ ಮತ್ತು ಒಳಗೆ ವಿಪರೀತ ಒತ್ತಡವಿತ್ತು. ಸಿದ್ದರಾಮಯ್ಯ ಮತ್ತವರ ಸಂಪುಟದ ಸಹೋದ್ಯೋಗಿಗಳು ಈ ವಿಚಾರದಲ್ಲಿ ಭ್ರಷ್ಟಾಚಾರವಿರೋಧಿ ನಿಲುವು ತೆಗೆದುಕೊಳ್ಳಬೇಕು ಎಂದು ಪ್ರಾಮಾಣಿಕವಾಗಿಯೇ ನಿರ್ಧರಿಸಿದರೋ ಅಥವಾ ಈ ನಿರ್ಧಾರ ತೆಗೆದುಕೊಳ್ಳದೆ ಬೇರೆ ವಿಧಿ ಇರಲಿಲ್ಲವೋ. ಅಂತೂ ಒಂದು ನಿರ್ಧಾರ ಬಂದಾಗಿದೆ ಮತ್ತು ಅದು ಕೆಪಿಎಸ್‌ಸಿಯಲ್ಲಿ ಕಳೆದ ಎರಡು–ಮೂರು ದಶಕಗಳಿಂದ ನಡೆದುಕೊಂಡು ಬಂದಿದ್ದ ಅವ್ಯಾಹತ ಅಕ್ರಮಗಳಿಗೆ ಅದು ಸದ್ಯದ ಮಟ್ಟಿಗಾದರೂ ಕಡಿವಾಣ ಹಾಕಿದೆ.

ಇದೆಲ್ಲವೂ ಆರಂಭವಾಗಿದ್ದು ಮಂಗಳಾ ಶ್ರೀಧರ್ ಎನ್ನುವ ಆಗಿನ ಕೆಪಿಎಸ್‌ಸಿ ಸದಸ್ಯೆ ೨೦೧೩ರ ಆರಂಭದಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದ ಮತ್ತು ಆ ಗುಂಪಿನಲ್ಲಿ ಲಿಖಿತ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದ ಡಾ. ಮೈತ್ರಿ ಎನ್ನುವವರ ಬಳಿ ೭೫ ಲಕ್ಷ ರೂಪಾಯಿಯ ಲಂಚ ಕೇಳಿ, ಅವರು ಅದನ್ನು ಕೊಡದೆ ಇದ್ದದ್ದಕ್ಕೆ ಸಂದರ್ಶನದಲ್ಲಿ ಎಲ್ಲ ಲೆಕ್ಕಾಚಾರಗಳೊಂದಿಗೆ ಡಾ. ಮೈತ್ರಿಗೆ ಕೇವಲ ೭೫ ಅಂಕಗಳನ್ನು ಕೊಟ್ಟು, ಅವರಿಗೆ ಎ ದರ್ಜೆಯ ಎ.ಸಿ. ಹುದ್ದೆ ಸಿಗದಂತೆ ನೋಡಿಕೊಳ್ಳಲಾಯಿತೆಂಬ ಆರೋಪ ಕೇಳಿಬಂದ ಸಂದರ್ಭದಿಂದ. ಜೊತೆಗೆ ಸಂದರ್ಶನದ ಸಮಯದಲ್ಲಿ ಹಾಜರಿರದಿದ್ದ ಸಂದರ್ಶಕರೂ ಸೇರಿದಂತೆ ಎಲ್ಲಾ ಸಂದರ್ಶಕರೂ ಒಂದೇ ಅಂಕಗಳನ್ನು ಕೊಡುವುದರ ಹಿಂದೆ ಅಕ್ರಮ ಮತ್ತು ಭ್ರಷ್ಟಾಚಾರ ಇಲ್ಲದೇ ಇರಲು ಸಾಧ್ಯವೇ ಇಲ್ಲ ಎಂಬುದು ಮನದಟ್ಟಾದಾಗ.

ಆಗ ಡಾ.ಮೈತ್ರಿ ಇದನ್ನು ಮಾಧ್ಯಮಗಳ ಗಮನಕ್ಕೆ ತಂದರು, ನಂತರ ಸರ್ಕಾರದ ಗಮನಕ್ಕೂ ತಂದರು. ಆಗ ತಾನೆ ಬಿಜೆಪಿಯನ್ನು ಆಡಳಿತದಿಂದ ಹೊರಗಟ್ಟಿ ರಾಜ್ಯದ ಜನತೆ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದಿತ್ತು. ಒತ್ತಡ ಹೆಚ್ಚಾಗಿ ಮುಖ್ಯಮಂತ್ರಿಗಳು ೨೦೧೩ರ ಜೂನ್‌ನಲ್ಲಿ ಸಿಐಡಿ ತನಿಖೆಗೆ ಆದೇಶ ಕೊಟ್ಟರು. ಅಪರೂಪಕ್ಕೆಂಬಂತೆ ಈ ವಿಷಯದಲ್ಲಿ ಸಿಐಡಿ ಇಲಾಖೆ ಅತ್ಯುತ್ತಮ ಎನ್ನಬಹುದಾದ, ಬಹಳ ವಸ್ತುನಿಷ್ಠವಾದ ಮತ್ತು ವೃತ್ತಿಪರವಾಗಿ ಶ್ರೇಷ್ಠ ಎನ್ನಬಹುದಾದ ಮಧ್ಯಂತರ ವರದಿಯನ್ನು ನೀಡಿತು. ಕೆಪಿಎಸ್‌ಸಿಯ ಆಗಿನ ಅಧ್ಯಕ್ಷರಾಗಿದ್ದಂತಹ ಗೋನಾಳ್ ಭೀಮಪ್ಪ ಆದಿಯಾಗಿ ಬಹುತೇಕ ಎಲ್ಲಾ ಸದಸ್ಯರು ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿದ್ದಾರೆ ಮತ್ತು ಇಡೀ ಪ್ರಕ್ರಿಯೆಯೇ ಅಕ್ರಮಗಳಿಂದ ತುಂಬಿದೆ ಎನ್ನುವಂತಹ ಬೆಚ್ಚಿಬೀಳಿಸುವ ಸಂಗತಿಗಳು ಸಾಕ್ಷ್ಯಗಳ ಸಮೇತ ಆ ವರದಿಯಲ್ಲಿ ದಾಖಲಾಗಿದೆ. ಅಕ್ರಮಗಳು ಸಂದರ್ಶನದ ಹಂತದಲ್ಲಿಯಷ್ಟೇ ಆಗಿಲ್ಲ. ಲಿಖಿತ ಪರೀಕ್ಷೆಗಳಲ್ಲಿ ಮತ್ತು ಉತ್ತರಪತ್ರಿಕೆಗಳ ಮೌಲ್ಯಮಾಪನದಲ್ಲಿಯೂ ಆಗಿದೆ ಮತ್ತು ಲಿಖಿತ ಪರೀಕ್ಷೆಯ ಮೌಲ್ಯಮಾಪನ

ಸಂದರ್ಭದಲ್ಲಿಯೇ ಯಾರನ್ನು ಆಯ್ಕೆ ಮಾಡಬೇಕು ಮತ್ತು ಅದಾಗಬೇಕಾದರೆ ಯಾರಿಗೆ ಎಷ್ಟು ಅಂಕಗಳನ್ನು ಕೊಡಬೇಕು ಎನ್ನುವ ತೀರ್ಮಾನವೂ ಆಗಿದೆ ಎನ್ನುವ ಸಂದೇಹಗಳನ್ನು ಆ ವರದಿ ಹುಟ್ಟುಹಾಕುತ್ತದೆ. ಒಂದೂವರೆ ಕೋಟಿ ರೂಗಳಿಗೆ ಎ.ಸಿ., ೮೦ ಲಕ್ಷಕ್ಕೆ ಡಿವೈಎಸ್‌ಪಿ, ೬೦ ಲಕ್ಷಕ್ಕೆ ತಹಸಿಲ್ದಾರ ಹುದ್ದೆಗಳು ಮಾರಾಟ ಆಗಿರುವುದನ್ನು, ವರದಿಯಲ್ಲಿ ಹೇಳಲಾಗಿದೆ.

ಆದರೆ, ಇಂತಹ ಗಂಭೀರವಾದ ಮತ್ತು ಮಹತ್ತರವಾದ ವರದಿಯನ್ನು ಬಹುಕಾಲ ಸರ್ಕಾರ ಮುಚ್ಚಿಟ್ಟಿತ್ತು. ಆದರೆ ಅದು ಹೇಗೋ ಆ ವರದಿ ಪ್ರಜಾವಾಣಿಯ ರವೀಂದ್ರ ಭಟ್ಟರಿಗೆ ಸಿಕ್ಕಿ ಅವರು ಕಳೆದ ವರ್ಷದ ಅಕ್ಟೋಬರ್‌ನಲ್ಲಿ "ಕೆಪಿಎಸ್‌ಸಿ ಕರ್ಮಕಾಂಡ" ಎಂಬ ಹೆಸರಿನಲ್ಲಿ ಸರಣಿ ಲೇಖನಗಳನ್ನೇ ಬರೆದರು. ಆಗ ಎಚ್ಚೆತ್ತ ಸಾರ್ವಜನಿಕ ಸಂಸ್ಥೆಗಳು ಮತ್ತು ಹೋರಾಟಗಾರರು ಮುಂದಿನ ಅಗತ್ಯ ಆಡಳಿತ ಕ್ರಮಗಳನ್ನು ಒತ್ತಾಯಿಸಿ ಬೀದಿಗಿಳಿದರು.

ಈ ಮಧ್ಯೆ ಸರ್ಕಾರ ಅಡ್ವೋಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್‌ರ ಅಭಿಪ್ರಾಯ ಕೇಳಿ ಅವರ ಶಿಫಾರಸಿನ ಆಧಾರದ ಮೇಲೆ "ಮರುಮೌಲ್ಯಮಾಪನ ಮತ್ತು ಮರುಸಂದರ್ಶನ" ಮಾಡುವಂತೆ ಕೆಪಿಎಸ್‌ಸಿಗೆ ಪತ್ರ ಬರೆಯಿತು. ಕೆಪಿಎಸ್‌ಸಿಯ ಸದಸ್ಯರು ಆ ಮನವಿಯನ್ನು ಕಸದ ಬುಟ್ಟಿಗೆ ಎಸೆದರು ಮತ್ತು ಮೊದಲ ಹಂತದ ಪಟ್ಟಿಯನ್ನೂ ಬಿಡುಗಡೆ ಮಾಡಿದರು. ಇದರ ವಿರುದ್ಧ ಡಾ. ಮೈತ್ರಿಯವರು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯಲ್ಲಿ (KAT) ದೂರು ದಾಖಲಿಸಿದರು. ನ್ಯಾಯಮಂಡಳಿ ಆಗ ಕೆಪಿಎಸ್‌ಸಿ ಸಲ್ಲಿಸಿದ್ದ ಮೊದಲ ಹಂತದ ಪಟ್ಟಿಗೆ ತಡೆಯಾಜ್ಞೆ ನೀಡಿತು. ಆ ಮಧ್ಯೆ ಅಂತಿಮ ವರದಿ ಸಿದ್ಧಮಾಡಿದ ಸಿಐಡಿ ೧೦೫೦೦ ಪುಟಗಳ ಚಾರ್ಜ್‌ಶೀಟ್ ಅನ್ನು ಲೋಕಾಯುಕ್ತ ಕೋರ್ಟಿಗೆ ಸಲ್ಲಿಸಿತು. ಹಲವಾರು ಅಡೆತಡೆಗಳ ಮಧ್ಯೆಯೂ ಅಂತಿಮವಾಗಿ ಮಂಗಳಾ ಶ್ರೀಧರ್ ಸದಸ್ಯತ್ವದಿಂದ ವಜಾ ಆದರು. ಆದರೆ ನ್ಯಾಯಮಂಡಳಿಯು ತಡೆಯಾಜ್ಞೆ ತೆರವುಗೊಳಿಸಿದ ತಕ್ಷಣ ಕೆಪಿಎಸ್‌ಸಿ ಅಂತಿಮ ಪಟ್ಟಿಯನ್ನೂ ಸರ್ಕಾರಕ್ಕೆ ಸಲ್ಲಿಸುವ ಧಾರ್ಷ್ಟ್ಯ ಪ್ರದರ್ಶಿಸಿತು. ಆದರೆ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸ್ವಲ್ಪ ಕಾಲ ರಾಜಕೀಯ ತಾರಮ್ಮಯ್ಯ ಆಡಿದ ಸರ್ಕಾರ ಅಂತಿಮವಾಗಿ ಪಟ್ಟಿಯನ್ನು ತಿರಸ್ಕರಿಸುವ ತೀರ್ಮಾನ ಮಾಡಿ ಅಧಿಸೂಚನೆಯನ್ನೂ ರದ್ದು ಮಾಡಿತು.

ಸರ್ಕಾರದ ಕ್ರಮಕ್ಕೆ ಜಾತಿಬಣ್ಣ ಕಟ್ಟುವ ಕೆಲಸಗಳೂ ಆದವು. ಆದರೆ ಇಡೀ ಪ್ರಕ್ರಿಯೆಯೇ ಅಕ್ರಮಗಳಿಂದ ತುಂಬಿದ್ದರಿಂದ ಮತ್ತು ಸರ್ಕಾರದ ನಿರ್ಧಾರದ ಪರವಾಗಿ ರಾಜ್ಯದ ಅನೇಕ ಪ್ರಜ್ಞಾವಂತರು ಧ್ವನಿಯೆತ್ತಿದ್ದರಿಂದಾಗಿ ಸರ್ಕಾರ ಹಿಂದಕ್ಕೆ ಸರಿಯಲಿಲ್ಲ. ಈಗ ಆಯ್ಕೆಪಟ್ಟಿಯಲ್ಲಿದ್ದ ಹಲವಾರು ಅಭ್ಯರ್ಥಿಗಳು ಅಧಿಸೂಚನೆಯನ್ನು ರದ್ದುಗೊಳಿಸಿರುವ ಸರ್ಕಾರದ ತೀರ್ಮಾನವನ್ನು ಪ್ರಶ್ನಿಸಿ ಕೆ.ಎ.ಟಿ.ಗೆ ಅಪೀಲು ಹೋಗಿದ್ದಾರೆ. ನ್ಯಾಯಮಂಡಳಿ ಈಗ ಸದ್ಯಕ್ಕೆ ಸರ್ಕಾರದ ಕ್ರಮಕ್ಕೆ ತಡೆಯಾಜ್ಞೆ ನೀಡಿದೆ.

ಲಂಚ ಕೊಡದೆ ಅರ್ಹತೆಯ ಆಧಾರದ ಮೇಲೆ ಸರ್ಕಾರಿ ನೌಕರಿಗೆ ಸೇರಿಕೊಂಡ ಜನರೇ ಕೋಟಿಶತಕೋಟಿಗಳ ಭ್ರಷ್ಟಾಚಾರ ಮಾಡುವಾಗ, ಇನ್ನು ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಲಂಚ ಕೊಟ್ಟು ಕೆಲಸಕ್ಕೆ ಸೇರಿಕೊಳ್ಳುವವರು ಭ್ರಷ್ಟಾಚಾರ ಎಸಗದೆ ಪ್ರಾಮಾಣಿಕರಾಗಿರುತ್ತಾರೆ ಎಂದುಕೊಳ್ಳುವುದು ಮೂರ್ಖತನ ಮಾತ್ರವೆನಿಸಿಕೊಂಡೀತು. ಈ ಚಾರಿತ್ರಿಕ ನಿರ್ಧಾರದ ಮೂಲಕ ಸರ್ಕಾರ ಒಂದು ಸಂಪ್ರದಾಯ ಹಾಕಿಕೊಟ್ಟಿದೆ. ಬಹುಶಃ ಮುಂದಿನ ದಿನಗಳಲ್ಲಿ ಸರ್ಕಾರಿ ನೇಮಕಾತಿಗಳಲ್ಲಿ ಭ್ರಷ್ಟಾಚಾರ ಕಡಿಮೆಯಾಗಬಹುದು ಎನ್ನುವ ವಿಶ್ವಾಸದಲ್ಲಿ ಜನರಿದ್ದಾರೆ. ಕ್ಷುಲ್ಲಕ ರಾಜಕೀಯ ಪರಿಗಣನೆಯಿಲ್ಲದ ತನ್ನ ದಿಟ್ಟ ನಿರ್ಧಾರಗಳ ಮೂಲಕ ಈ ನಂಬಿಕೆ ಮತ್ತು ವಿಶ್ವಾಸವನ್ನು ಉಳಿಸಿಕೊಳ್ಳುವುದು ಸರ್ಕಾರದ ಜವಾಬ್ದಾರಿ ಆಗಿದೆ.



**(ರವಿಕೃಷ್ಣಾ ರೆಡ್ಡಿ ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು ಆಂ ಆದ್ಮಿ ಪಕ್ಷದ ಮುಖ್ಯ ರಾಜ್ಯ ನಾಯಕರಲ್ಲೊಬ್ಬರಾಗಿ ಹಲವು ಸಾಮಾಜಿಕರಾಜಕೀಯ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.)**

# ತುಮಕೂರು ವಿಶ್ವವಿದ್ಯಾಲಯದಲ್ಲಿ ಕೆ.ಎಂ. ಶಂಕರಪ್ಪನವರ ನೆನಪು: ಒಂದು ವರದಿ



**ಕೆ.** ಎಂ. ಶಂಕರಪ್ಪ ಪಕ್ಷಿಯಂತೆ ಅರಿವಿನ ಬೀಜ ಚೆಲ್ಲುತ್ತ ನಡೆದವರು, ತಾವೇ ವಿಶ್ವವಿದ್ಯಾಲಯವೊಂದರ ಒಂದು ಪ್ರಸಾರಾಂಗದಂತಿದ್ದರು ಎಂದು ನಾಡಿನ ಖ್ಯಾತ ಲೇಖಕ, ಚಿಂತಕ ದೇವನೂರ ಮಹಾದೇವ ಹೇಳಿದರು. ಅವರು ೦೯.೦೯.೨೦೧೪ರಂದು ತುಮಕೂರು ವಿಶ್ವವಿದ್ಯಾಲಯ ಪ್ರಸಾರಾಂಗದ ಉದ್ಘಾಟನೆ ಮತ್ತು ಶಂಕರಪ್ಪನವರ ಕುರಿತು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾಗಿದ್ದ ಖ್ಯಾತ ಕಥೆಗಾರ ಕಾಳೇಗೌಡ ನಾಗವಾರ, ಕನ್ನಡದ ಮಹತ್ವದ ಲೇಖಕರು ಸಾಮಾಜಿಕ ಹೋರಾಟಗಳಲ್ಲಿ ಭಾಗವಹಿಸಲು ಶಂಕರಪ್ಪ ಕಾರಣರಾಗಿದ್ದರು ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎ. ಎಚ್. ರಾಜಾಸಾಬ್ ಅವರು ಇದೇ ಜಿಲ್ಲೆಯವರಾದ ಶಂಕರಪ್ಪನವರನ್ನು ವಿಶ್ವವಿದ್ಯಾಲಯ ಗುರುತಿಸದೆ ಹೋದದ್ದು ದುರಂತ, ವಿಶ್ವವಿದ್ಯಾಲಯ ನೀಡಬಹುದಾಗಿದ್ದ ಮೊದಲ ಗೌರವ ಡಾಕ್ಟರೇಟ್‌ಗೆ ಶಂಕರಪ್ಪ ಅರ್ಹರಾಗಿದ್ದರು ಎಂದರು. ಪ್ರಸಾರಾಂಗದ ನಿರ್ದೇಶಕ ಡಾ. ನಿತ್ಯಾನಂದ ಬಿ. ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ನಂತರ ನಡೆದ ಮೊದಲ ಗೋಷ್ಠಿಯಲ್ಲಿ ಮಾತಾಡಿದ ಚಿಂತಕ ಡಿ. ಎಸ್. ನಾಗಭೂಷಣ, ಶಂಕರಪ್ಪ ಅವರನ್ನು ಆಧುನಿಕ ಅವಧೂತನೆಂದು ಗುರುತಿಸುತ್ತ ಅವರೊಡನೆಯ ತಮ್ಮ ಅನನ್ಯವೆನ್ನಿಸುವ ಅನುಭವಗಳನ್ನು ಹಂಚಿಕೊಂಡರು ಡಾ. ವಿಜಯಾ ಅವರು ತುರ್ತು ಪರಿಸ್ಥಿತಿಯ ದಿಕ್ಕೆಟ್ಟ ಕಾಲದಲ್ಲಿ ಶಂಕರಪ್ಪ ಧೈರ್ಯಗೆಡದಂತೆ ತಮ್ಮ ಸುತ್ತಣ ಬೌದ್ಧಿಕ ವಲಯದ ಕ್ಷಮತೆ ಕಾಪಾಡಿದ್ದನ್ನು ನೆನೆದರು. ಶಂಕರಪ್ಪನವರ ಬಹು ಕಾಲದ ಒಡನಾಡಿ ಪುಟ್ಟರಾಮಯ್ಯನವರು ಗೆಳೆಯನನ್ನು ನೆನೆಯುತ್ತಾ ಗದ್ಗದಿತರಾದರು. ವಿಮರ್ಶಕ ನಟರಾಜ ಬೂದಾಳ್ ಶಂಕರಪ್ಪನವರು ತಮ್ಮ ಬೌದ್ಧ ತಾತ್ವಿಕತೆಯ ಅಧ್ಯಯನದ ಕಠಿಣ ಹಾದಿಯನ್ನು ಕ್ರಮಿಸಲು ತಮಗೆ ಬೌದ್ಧಿಕವಾಗಿ ನೆರವಾದುದ್ದನ್ನು ಸ್ಮರಿಸಿದರು.

ಮಧ್ಯಾಹ್ನದ ಗೋಷ್ಠಿಯಲ್ಲಿ ಶಂಕರಪ್ಪನವರ ಏಕೈಕ ಚಲನಚಿತ್ರ 'ಮಾಡಿ ಮಡಿದವರು' ಕುರಿತು ಮಾತನಾಡಿದ ಚಿಂತಕ ಎನ್ ಎಸ್. ಶಂಕರ್ ಅವರು, ಈ ಚಿತ್ರ ಒಂದು ಅನುಭವವಾಗಿ ಪ್ರೇಕ್ಷಕನನ್ನು ಸೆಳೆಯಲು ಸೋತಿದೆ ಎಂದರು. ಶಂಕರಪ್ಪನವರು ತಮ್ಮ ಕವಿತೆಗೆ ದಾರಿ ತೋರಿದ ಮಾರ್ಗದರ್ಶಿ ಎಂದು ಕವಯತ್ರಿ ಸವಿತಾ ನಾಗಭೂಷಣ ನೆನಪು ಮಾಡಿಕೊಂಡರು. ತನ್ನ ಅಪ್ಪನ ಕುರಿತು ಮಾತನಾಡಿದ ಸ್ನೇಹಲತಾ ಶಂಕರಪ್ಪ, ಮನೆಯಲ್ಲಿ ಸದಾ ಮೌನಿಯಾಗಿದ್ದು ತಮ್ಮ ಕೊಠಡಿಯಲ್ಲಿರುತ್ತಿದ್ದ ತಂದೆಯವರು ತಮಗೆ ಓದುವ ಅಭಿರುಚಿ ಬೆಳಸಿದ್ದನ್ನು ಜ್ಞಾಪಿಸಿಕೊಂಡರು. ಇನ್ನೊಬ್ಬ ಗೆಳೆಯ ತುಂಬಾಡಿ ರಾಮಯ್ಯ, ಶಂಕರಪ್ಪನವರ ಒಡನಾಟ ತಮಗೆ ಗೌರವ ಮತ್ತು ಘನತೆ ತಂದದ್ದನ್ನು ಕೃತಜ್ಞತೆಯಿಂದ ನೆನೆದರು. ಗೋಷ್ಠಿಗಳ ನಡುವೆ 'ಮಾಡಿ ಮಡಿದವರು' ಚಿತ್ರದ ತುಣುಕುಗಳನ್ನು ಪ್ರದರ್ಶಿಸಲಾಯಿತು

ಸಮಾರೋಪ ಭಾಷಣ ಮಾಡಿದ ಕವಿ ಕೆ. ಬಿ. ಸಿದ್ದಯ್ಯ 'ದೆಸೆಗೆಟ್ಟ, ಧೃತಿಗೆಟ್ಟ' ಗಳಿಗೆಗಳಲ್ಲಿ ತಾವು ಕುಸಿದು ಕೂತಾಗ ಕೈ ಹಿಡಿದು ಎತ್ತಿ ನಿಲ್ಲಿಸಿದ ತಮ್ಮ ನಿಜ ಗುರು ಶಂಕರಪ್ಪ ಎಂದರು. ಖ್ಯಾತ ಕಲಾವಿದ ಕೆ. ಟಿ. ಶಿವಪ್ರಸಾದ್ ಸಮಾರೋಪದ ಅಧ್ಯಕ್ಷತೆ ವಹಿಸಿ ಮಾತಾಡಿ, ಶಂಕರಪ್ಪನವರ ಸಿನಿಮಾ ಬದುಕಿನ ಆರಂಭದ ದಿನಗಳ ಅಸ್ಥಿರತೆ ಅವರನ್ನು ಸಿನಿಮಾ ಪ್ರಪಂಚದಿಂದ ದೂರ ಮಾಡಿದ್ದು ವಿಷಾದದ ಸಂಗತಿ ಎಂದರು.

(ವರದಿ: **ಕೆ. ಪಿ. ನಟರಾಜ್**)

**ಯುವ ಸಮಾಜವಾದಿ ಚಿಂತನ ವೇದಿಕೆ**

# ಸ್ವಾಭಿಮಾನವೇ ಚಂದ...

-ಅಖಿಲಾ ವಿದ್ಯಾಸಂದ್ರ.

ಇಂದು ನಾವು ನಮ್ಮ ಮಕ್ಕಳಿಗೆ 'ಹರಿನಾಮವೇ ಚಂದ... ಅದ ನಂಬಿಕೋ ಕಂದಾ...' ಎಂದು ಹೇಳಿಕೊಡುವ ಬದಲು "ಸ್ವಾಭಿಮಾನವೇ ಚಂದ... ಅದ ನಂಬಿಕೋ ಕಂದಾ..." ಎಂದು ಹೇಳಿಕೊಡಬೇಕಾಗಿದೆ ಎಂದೆನ್ನಿಸುತ್ತಿದೆ, ಇದೇ ವಿವೇಚನೆಯ ಮಾರ್ಗ. ಇದನ್ನೇ ಅಂಬೇಡ್ಕರ್ ಹಾಗೂ ಪೆರಿಯಾರ್‌ರವರು ಒತ್ತಿ ಒತ್ತಿ ಹೇಳಿದ್ದು.

ಬದಲಾಗುತ್ತಿರುವ ಸಾಮಾಜಿಕ ಕಳಕಳಿಯ ಈ ಕಾಲಘಟ್ಟದಲ್ಲಿ ಸಮಾಜವು, ಮಕ್ಕಳು ಹಾಗೂ ಪ್ರಕೃತಿಯ ಬಗ್ಗೆ ತೀರಾ ಉಡಾಫೆಯ ಧೋರಣೆ ಹೊಂದಿ, ತಮಗಿಷ್ಟ ಬಂದಂತೆ ನಡೆದುಕೊಳ್ಳುತ್ತಿದೆ ಹಾಗೂ ಅವುಗಳನ್ನು ನಡೆಸಿಕೊಳ್ಳುತ್ತಿದೆ. ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ, ಲಿಂಗತ್ವದ ಹೆಸರಿನಲ್ಲಿ ಅರ್ಥವಿಲ್ಲದ ಹಾಗೂ ಹೀನವೆನ್ನಿಸುವ ಸಂಪ್ರದಾಯಗಳನ್ನು ಹೇರಿ ಈ ಜೀವ-ಸಂಕುಲಗಳನ್ನು ನಲುಗಿಸುತ್ತಿದ್ದಾರೆ ನಮ್ಮ ಜನ. ನಾಗರೀಕತೆಯ ಹೆಸರಿನಲ್ಲಿ ಆಧುನಿಕ ಜೀವನ ಶೈಲಿ ಹೆಸರಿನಲ್ಲಿ ಮಕ್ಕಳ ಹಾಗೂ ಪ್ರಕೃತಿಯ ನಡುವೆ ಬೆಸೆದುಕೊಂಡಿರಬೇಕಾದ ಸುಸಂಬಂಧವನ್ನು ದಾರುಣವಾಗಿ ಹಾಳುಗೆಡವುತ್ತಿದ್ದಾರೆ.

ನಾಗರೀಕ ಸಮಾಜ ಕಟ್ಟಿಕೊಳ್ಳುವ ನೆಪದಲ್ಲಿ, ಆಸ್ತಿ ಮಾಡಿಕೊಳ್ಳುವ ದುರಾಸೆಯಲ್ಲಿ, ಮದುವೆ-ಕುಟುಂಬಗಳ ಪ್ರತಿಷ್ಠೆಗಳ ಸೋಗಿನಲ್ಲಿ, ಪ್ರಕೃತಿಯನ್ನೂ, ಹೆಣ್ಣನ್ನೂ ಅಧಃಪತನಕ್ಕೀಡು ಮಾಡುತ್ತಿದ್ದಾರೆ. ಜಾತಿ, ಧರ್ಮ, ಕುಲಗೌರವಗಳನ್ನು ಮುಂದುಮಾಡಿ ಪ್ರೀತಿಸುವ ಜೀವಗಳ ಮಾರಣಹೋಮ ಮಾಡುತ್ತಿದ್ದಾರೆ. ಇದೆಲ್ಲಾ ಯಾರಿಗಾಗಿ? ಯಾಕಾಗಿ? ಬರೀ ತಮ್ಮ ಸ್ವಾರ್ಥಕ್ಕೆ ಮಾತ್ರ. ತಮ್ಮ ಅಹಂ ಅನ್ನು ತಣಿಸಲು ಮಾತ್ರ. ಮತ್ಯಾವುದೇ ಒಳಿತಿಲ್ಲ ಇದರಲ್ಲಿ. ಬ್ರಹ್ಮ-ವಿಷ್ಣುವಾದಿಯಾಗಿ ಆದಿ ಮನುವಿನಿಂದ ಆಧುನಿಕ ಮನುಗಳವರೆಗೆ ಈ ಸಮಾಜಕ್ಕೆ ಸಿಕ್ಕ ಹಾಗೂ ಸಿಗುತ್ತಿರುವ ಕೊಡುಗೆಗಳೆಂದರೆ ಎಲ್ಲಾ ರೀತಿಯ ತಾರತಮ್ಯ ಮತ್ತು ಶೋಷಣೆಗಳೇ.

ಇದರಿಂದ, ತಂದೆ-ತಾಯಿಯರು ತಮ್ಮ ಮಕ್ಕಳನ್ನು ವಿಶೇಷ ಮುಚ್ಚಟೆಯಿಂದ ಬೆಳೆಸುತ್ತಿದ್ದಾರೆ. ಅವರನ್ನು ಮಕ್ಕಳನ್ನಾಗಿ ಅಥವಾ ಮಾನವ ಜೀವಿಗಳನ್ನಾಗಿ ಬೆಳೆಸುವ ಬದಲಿಗೆ ಗಂಡು ಅಥವಾ ಹೆಣ್ಣುಗಳನ್ನಾಗಿ ವಿಂಗಡಣೆ ಮಾಡಿ ಬೆಳೆಸುತ್ತಿದ್ದಾರೆ. ಅವುಗಳಲ್ಲಿರುವ ವಿಶ್ವಮಾನವತ್ವವನ್ನು ಧೂಳೀಪಟಮಾಡುತ್ತಿದ್ದಾರೆ. ಆದ್ದರಿಂದ ಗಂಡುಗಳು ಹೆಣ್ಣಿಗೆ, ಹೆಣ್ಣುಗಳು ಗಂಡಿಗೆ ಅಪರಿಚಿತವಾಗಿ, ಅಮಾನುಷವಾಗಿ ಕಾಣುತ್ತಿದ್ದಾರೆ. ಇದರಿಂದಾಗಿ ಹೆಚ್ಚಾಗುತ್ತಿರುವ ಅನಾಹುತಗಳಿಗೆ ಒಬ್ಬರನ್ನೊಬ್ಬರು ನಿಂದಿಸಿಕೊಳ್ಳುತ್ತಾ, ದ್ವೇಷಿಸಿಕೊಳ್ಳುತ್ತಾ ಜೀವನವನ್ನು ಸವೆಸುತ್ತಿದ್ದಾರೆ.

ಅಷ್ಟೇ ಅಲ್ಲ, ಬಂಡವಾಳಶಾಹಿ ಮನೋಭಾವದ ಫಲವಾಗಿ ಆಸ್ತಿ, ಐಷಾರಾಮ, ಸಂಪತ್ತುಗಳನ್ನು ಸಂಗ್ರಹದ ಜಂಜಾಟಕ್ಕೆ ಬಿದ್ದು ಜೀವಿಸುವುದನ್ನೇ ಮರೆತು ಜನರನ್ನು, ಜನರ ಬದುಕನ್ನು, ಅವರ ಮುಗ್ಧತೆಯನ್ನು, ಅವರ ದೇಹಗಳನ್ನು, ಲೈಂಗಿಕತೆಯನ್ನು, ಕಾಡನ್ನು, ಅಲ್ಲಿನ ಪ್ರಾಣಿ-ಪಕ್ಷಿಗಳನ್ನು, ಭೂಗರ್ಭವನ್ನೂ ಇನ್ನೂ ಏನೇನನ್ನೋ ಕೊಳ್ಳೆಯೊಡೆಯುವುದನ್ನೇ ಜೀವನ ಮಾಡಿಕೊಂಡುಬಿಡುತ್ತಿದ್ದಾರೆ. ಅಂದರೆ ಅವರು ಜೀವಿಸುತ್ತಿಲ್ಲ, ಸತ್ತುಹೋಗಿದ್ದಾರೆ. ಅವರ ಹೆಣಗಳು ಮಾತ್ರ ಈ ಎಲ್ಲಾ ವಿಷ(ಯ)ಗಳೊಂದಿಗೆ ಕೊಳೆತು ಹೋಗುತ್ತಿವೆ. ಈ ದುರ್ವಾಸನೆಯ ನಿವಾರಣೆ ಮಾಡದೆ ಬೇರೆ ವಿಧಿಯಿಲ್ಲ ಹಾಗೂ ಅದಕ್ಕೆ ಹೆಚ್ಚು ಸಮಯವೂ ಇಲ್ಲ. ಹಾಗೆಯೇ ಬಿಟ್ಟರೆ ಇನ್ನೂ ಹೆಚ್ಚಾಗುವ ಸಂಭವವಿದೆ.

ನಮಗಿರುವ ಒಂದೇ ಪ್ರಕೃತಿಯನ್ನು ನಮಗಿರುವ ಒಂದೇ ಜೀವನವನ್ನು ಪುನರುಜ್ಜೀವಗೊಳಿಸಿಕೊಂಡು ಬದುಕಲು ನಮಗಿರುವ ಒಂದೇ ದಾರಿಯೆಂದರೆ ಅದು ಈ ನಾಗರೀಕತೆ, ಆಧುನಿಕತೆ, ಸಂಪ್ರದಾಯಗಳ ಮನೋವೃತ್ತಿಯನ್ನು ಸಮಾಧಾನದಿಂದ ನಾಶಪಡಿಸುವುದು. ಬುದ್ಧ ನೂರಾರು ವರ್ಷಗಳ ಹಿಂದೆಯೇ ಇದನ್ನು ಹೇಳಿದ್ದ. ಆದರೆ ನಾವು ಅಂದಿನಿಂದ ಕಿವುಡರಾಗೇ ಇದ್ದೇವೆ. ಇನ್ನಾದರೂ ಇಂದ್ರಿಯಗಳನ್ನು ಸದುಪಯೋಗಪಡಿಸಿಕೊಳ್ಳೋಣ.

ಈ ನಿಟ್ಟಿನಲ್ಲಿ ಯೋಚಿಸಲು ನಮಗೆ ಈ ಒಂದು ಘಟನೆ ಸಹಕಾರಿಯಾಗಬಹುದೇನೋ: ಕೆನಡಾ ದೇಶದ ಸೆವೆರ್ನ್ ಕಲ್ಲಿಸ್-ಸುಜುಕಿ ಎಂಬ ಹುಡುಗಿ ೧೯೯೨ರಲ್ಲೇ ರಿಯೋಡಿ ಜನ್ಯೆರೋದಲ್ಲಿ ನಡೆದ (ವಿಶ್ವ ಪರಿಸರ ಕಾರ್ಯಕ್ರಮವಾದ) ಭೂಮಿ ಸಮ್ಮೇಳನ(Earth Summit)ದಲ್ಲಿ ಭಾಗವಹಿಸಿ ಮಾತನಾಡುತ್ತಾ 'ಪೋಷಕರಾದ ನೀವು ನಿಮ್ಮ ಮಾರ್ಗವನ್ನು ಬದಲಾಯಿಸಿಕೊಳ್ಳಬೇಕು... ಏಕೆಂದರೆ ನಾವು ನಮ್ಮ ಭವಿಷ್ಯಕ್ಕಾಗಿ ಹೋರಾಡುತ್ತಿದ್ದೇವೆ, ಭವಿಷ್ಯವನ್ನು ಕಳೆದುಕೊಳ್ಳುವುದೆಂದರೆ ಚುನಾವಣೆಯಲ್ಲಿ ಸೋತಂತೆಯೋ, ಶೇರು ಮಾರುಕಟ್ಟೆಯಲ್ಲಿ ಕೆಲ ಪಾಯಿಂಟ್‌ಗಳನ್ನು ಕಳೆದುಕೊಂಡಂತೆಯೋ ಅಲ್ಲ. ನಾನು ನಮ್ಮ ಮುಂದಿನ ಎಲ್ಲಾ ಭವಿಷ್ಯದ ಪೀಳಿಗೆಗಾಗಿ ಮಾತನಾಡುತ್ತಿದ್ದೇನೆ ... ನನಗೆ ಉಸಿರಾಡಲು ಭಯವಾಗುತ್ತಿದೆ ಅದರಲ್ಲಿರಬಹುದಾದ ಭಯಾನಕ ರಾಸಾಯನಿಕಗಳನ್ನು ನೆನೆದು. ಸಾಕಷ್ಟು ಜೀವ ಪ್ರಭೇದಗಳು ನಶಿಸಿಹೋಗುತ್ತಿವೆ. ಇಂತಹ ಕಲುಷಿತ ವಾತಾವರಣವನ್ನು ನೀವುಗಳು ಉಂಟು ಮಾಡಿರುವುದರಿಂದ.... ನಿಮಗೆ ನಿಮ್ಮ ತಪ್ಪಿನಿಂದಾಗಿರುವ ಓಜೋನ್ ಕವಚವನ್ನು ಸರಿಪಡಿಸಲು, ನಶಿಸಿಹೋಗಿರುವ ಒಂದಾದರೂ ಜೀವಿಗೆ ಮರುಹುಟ್ಟು ಕೊಡಲು, ನೀವು ಬಂಜರು ಮಾಡಿರುವ ಭೂಭಾಗಗಳನ್ನು ಮತ್ತೆ ಮಳೆಗಾಡುಗಳನ್ನಾಗಿಸಲು ನಿಮಗೆ ಸಾಧ್ಯವಿಲ್ಲ, ನಿಮಗೆ ಇವುಗಳೆಲ್ಲವನ್ನು ಸರಿಪಡಿಸಲು ಸಾಧ್ಯವಿಲ್ಲವೆನ್ನುವುದು ತಿಳಿದು ನಾಶಪಡಿಸುವ ನಿಮ್ಮ ಈ ಕೆಲಸವನ್ನು ನಿಲ್ಲಿಸಿ. ನಮ್ಮ ದೇಶಗಳಿಗೆ, ಒಂದು ಬಡ ಬೀದಿಮಗುವಿಗಿರುವಂತಹ ಹಂಚಿಕೊಂಡು ತಿನ್ನುವ-ಜೀವಿಸುವ ಮನಸ್ಸಿಲ್ಲ. ನಮಗೆ ನೀವುಗಳು LKG/UKG ತರಗತಿಯಲ್ಲಿರುವಾಗಲೇ ಈ ಪ್ರಪಂಚದಲ್ಲಿ ಹೇಗೆ ನಡೆದುಕೊಳ್ಳಬೇಕು, ಮತ್ತೊಬ್ಬರ ಜೊತೆಗೆ ಹೊಡೆದಾಡಬಾರದು, ಇತರರನ್ನು ಗೌರವಿಸಬೇಕು, ಸ್ವಚ್ಛವಾಗಿರುವುದನ್ನೂ, ಬೇರೆಯವರಿಗೆ ನೋವುಂಟುಮಾಡಬಾರದೆನ್ನುವುದನ್ನೂ, ಸ್ವಾರ್ಥಿಯಾಗಬಾರದು, ಹಂಚಿಕೊಂಡುಬಾಳಬೇಕು ಇತ್ಯಾದಿ... ಹೇಳಿಕೊಡುತ್ತೀರಿ, ಆದರೆ ನೀವೇಕೆ ಅದನ್ನು ಪಾಲಿಸುವುದಿಲ್ಲ? ನೀವು ಹೇಳಿದಂತೆ ನೀವು ನಡೆದುಕೊಳ್ಳುತ್ತಿಲ್ಲ, ನಿಮ್ಮ ನಡವಳಿಕೆ ನಮಗೆ ನೋವುಂಟುಮಾಡುತ್ತಿದೆ...' ಎಂದು ಹೇಳುತ್ತಾಳೆ.

ಸುಜುಕಿಯ ಈ ಮಾತುಗಳು ನಮ್ಮೆಲ್ಲರ ಮಾತುಗಳಾಗಿ, ನಮ್ಮೆಲ್ಲರ ಮಕ್ಕಳ ಮಾತುಗಳಾಗಿ ಹೊರಹೊಮ್ಮಬಲ್ಲ ತೀವ್ರತೆಯಲ್ಲಿ ನಾವು ಯೋಚಿಸಬಲ್ಲೆವಾದರೆ, ದೇಶದ ಭವಿಷ್ಯದ ಹೆಸರಿನಲ್ಲಿ, ನಮ್ಮ ಮಕ್ಕಳ ಒಳಿತಿನ ಹೆಸರಿನಲ್ಲಿ ನಾವು ಮಾಡುತ್ತಿರುವ ಅನೇಕ ವಿನಾಶಕಾರಿ ಕೆಲಸ ಮತ್ತು ಸಂಪ್ರದಾಯಗಳನ್ನು ನಿಲ್ಲಿಸಲು ಸಾಧ್ಯವಾಗುತ್ತದೆ. ನಮ್ಮ ಮಕ್ಕಳನ್ನು ಗೊಡ್ಡು ಸಂಪ್ರದಾಯ ಮತ್ತು ನಂಬಿಕೆಗಳ ಗುಲಾಮರನ್ನಾಗಿಸದೆ, ಸ್ವಂತ ಆಲೋಚನೆ ಮಾಡಲು ಪ್ರೋತ್ಸಾಹಿಸುವ ಮೂಲಕ ಇದನ್ನು ಮಾಡಬಹುದು. ಅದಕ್ಕಾಗಿ ಮಕ್ಕಳಲ್ಲಿ ಸ್ವಾಭಿಮಾನವನ್ನು ಬೆಳೆಸುವ ರೀತಿ ತಂದೆ-ತಾಯಿಗಳು ಮೊದಲು ತಮ್ಮ ಜೀವನ ಕ್ರಮಗಳನ್ನು ಬದಲಾಯಿಸಿಕೊಳ್ಳಬೇಕು.



**(ಅಖಿಲಾ ವಿದ್ಯಾಸಂದ್ರ ವೃತ್ತಿಯಿಂದ ವಕೀಲರಾಗಿದ್ದು, ಮಹಿಳಾ ಸಬಲೀಕರಣ ಮತ್ತು ಮಕ್ಕಳ ಹಕ್ಕುಗಳಲ್ಲಿ ವಿಶೇಷ ಪರಿಶ್ರಮ ಹೊಂದಿದ್ದಾರೆ. ಮಾನವ ಹಕ್ಕುಗಳ ಮತ್ತು ಪರಿಸರ ರಕ್ಷಣೆಯ ಕ್ಷೇತ್ರಗಳಲ್ಲೂ ಸಕ್ರಿಯರಾಗಿದ್ದಾರೆ.)**

## ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ(ರಿ), ಶಿವಮೊಗ್ಗ

### ಅಧ್ಯಯನ ಶಿಬಿರ-೨೦೧೪

**ಕುಪ್ಪಳ್ಳಿಯಲ್ಲಿ ಅಕ್ಟೋಬರ್ ೧೮ ಹಾಗೂ ೧೯ರಂದು ನಾವು ಆಯೋಜಿಸಿರುವ 'ಆಧುನಿಕತೆಯೊಂದಿಗೆ ಮುಖಾಮುಖಿ' ವಿಷಯ ಕುರಿತ ಅಧ್ಯಯನ ಶಿಬಿರಕ್ಕಾಗಿ ನಿರೀಕ್ಷೆ ಮೀರಿ ಪ್ರತಿಕ್ರಿಯೆ ವ್ಯಕ್ತವಾಗಿದ್ದು ವಸತಿ ಪೂರಾ ಭರ್ತಿಯಾಗಿದ್ದು, ಶಿಬಿರಾರ್ಥಿಗಳ ನೋಂದಣಿಯನ್ನು ನಿಲ್ಲಿಸಲಾಗಿದೆ. ಈಗಾಗಲೇ ಶಿಬಿರ ಶುಲ್ಕ ಪಾವತಿಸಿ ಹೆಸರು ನೊಂದಾಯಿಸಿಕೊಂಡವರಿಗೆ ಮಾತ್ರ ಈ ಶಿಬಿರಕ್ಕೆ ಪ್ರವೇಶವಿದೆ. ಆದುದರಿಂದ ಬೇರೆ ಯಾರೂ ಶಿಬಿರದ ದಿನ ಪ್ರವೇಶಾವಕಾಶ ಬಯಸಿ ಕುಪ್ಪಳ್ಳಿಗೆ ಆಗಮಿಸಬಾರದೆಂದು ಈ ಮೂಲಕ ಕೋರಲಾಗಿದೆ.**

**- ಅಧ್ಯಕ್ಷರು, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ**

**ಸಮಕಾಲೀನ**

# ಗಾಂಧಿಯ ಯಂತ್ರ ದರ್ಶನ



ಗಾಂಧಿಯ ಪ್ರಸ್ತುತತೆಯ ಬಗ್ಗೆ ಮಾತನಾಡುವುದು ಇಂದು ಕ್ಲೀಷೆಯ ಮಾತಾಗಿಬಿಟ್ಟಿದೆ. ವಿಶೇಷವಾಗಿ ಗಾಂಧಿ ಜಯಂತಿಗಳಂತಹ ಸಂದರ್ಭಗಳಲ್ಲಿ. ಆದರೆ ಅದನ್ನು ಮಾತನಾಡಲಾಗದೇ ಇರಲೂ ಸಾಧ್ಯವಿಲ್ಲದ ಪರಿಸ್ಥಿತಿ ಈಗ ಉಂಟಾಗುತ್ತಿದೆ. ಪಶ್ಚಿಮದ ಆಧುನಿಕ ನಾಗರೀಕತೆಯನ್ನು ನಮ್ಮ ಒಳ್ಳೆಯದಕ್ಕೇ ಎಂದು ಭಾವಿಸಿ ಒಪ್ಪಿಕೊಂಡ ನಾವು ಈಗ–ಜಾಗತೀಕರಣವೆಂಬ ಹೊಸ ಬೆಳವಣಿಗೆಯ ಹಿನ್ನೆಲೆಯಲ್ಲಿ–ಹೊಸ ಹೊಸ ತೆರನ ಬಿಕ್ಕಟ್ಟುಗಳನ್ನು ಎದುರಿಸಲಾರಂಭಿಸಿದ್ದೇವೆ. ಮನುಷ್ಯನ ಬದುಕನ್ನು ಹೆಚ್ಚು ಸುಖಕರವಾಗಿ ಮಾಡಲು ಈ ಆಧುನಿಕ ನಾಗರೀಕತೆಯ ಹೆಗ್ಗುರುತಾಗಿ ಯಂತ್ರ ಬಂತು. ಅದು ಇಂದು ತಂತ್ರಜ್ಞಾನದ ಹೆಸರಿನಲ್ಲಿ ಮನುಷ್ಯನನ್ನು ಮತ್ತು ಆ ಮೂಲಕ ಅವನ ಸಮಾಜವನ್ನು ಮತ್ತು ಅದರ ಪರಿಣಾಮವಾಗಿ ಒಟ್ಟು ಜೀವ ಪರಿಸರವನ್ನು ಒಡೆದು, ಹರಿದು ಚಿಂದಿಯಾಗಿಸುತ್ತಿರುವ ರೀತಿ ಮತ್ತು ರೂಪಗಳು ಭಯ ಹುಟ್ಟಿಸುವಂತಿವೆ; ಭವಿಷ್ಯದ ಬಗ್ಗೆ ಆತಂಕ ಸೃಷ್ಟಿಸಿವೆ.

ಗಾಂಧಿ ಈ ಆಧುನಿಕ ಯಂತ್ರ ಹುಟ್ಟಿದ ಒಂದು ನೂರು ವರ್ಷಗಳ ಹಿಂದೆ ಇದರ ಸುತ್ತ ಕಟ್ಟಿಕೊಳ್ಳತೊಡಗಿದ್ದ ಜೀವನ ಕ್ರಮವನ್ನು ಯಂತ್ರ ನಾಗರೀಕತೆ ಎಂದು ಕರೆದು ಅದರ ವಿರುದ್ಧ ಮಾತನಾಡಿದ್ದಾಗ ಅದನ್ನು 'ಹಾಸ್ಯಾಸ್ಪದ' ಎಂದು ಕರೆದು ನಕ್ಕಿತ್ತು. ಆದರೆ ಜಗತ್ತು ಈಗ ಗಾಂಧೀಜಿಯ ಅಂದಿನ ವಿರೋಧದ ಮಾತುಗಳಲ್ಲಿ ಅಡಗಿದ್ದ 'ಮಾನವತೆಯ' ಭವಿಷ್ಯ ಕುರಿತ ಆಳದ ಒಳನೋಟಗಳನ್ನು ಅರಿತುಕೊಳ್ಳತೊಡಗಿ ಅವರ ದ್ರಷ್ಟಾರತೆಯ ಬಗ್ಗೆ ಬೆರಗಾಗುತ್ತಿದೆ. ಗಾಂಧಿ ಕುರಿತ ಹೊಸ ಕುತೂಹಲ ಮತ್ತು ಅಧ್ಯಯನಗಳು ಜಗತ್ತಿನಾದ್ಯಂತ ಆರಂಭವಾಗಿವೆ.

ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ ಗಾಂಧಿ ಅಕ್ಷರಶಃ ಯಂತ್ರ ವಿರೋಧಿಯಾಗಿರಲಿಲ್ಲ. ಯಂತ್ರಗಳು ಬೇಕು. ಆದರೆ ಅವು ನಮ್ಮ ಬದುಕಿನ ತತ್ವವನ್ನು ನಿರ್ಧರಿಸುವಂತಹ ರಾಕ್ಷಸ ಶಕ್ತಿಯಾಗಬಾರದು. ಯಂತ್ರದ ಹಿಂದಿರುವ ತರ್ಕ ನಮ್ಮ ಬದುಕಿನ ತರ್ಕವಾಗಬಾರದು. ಅವರು ಹೇಳುತ್ತಿದ್ದ ಒಂದು ಮಾತು ಯಂತ್ರ ನಾಗರೀಕತೆಯನ್ನು ಕುರಿತ ಅವರ ಚಿಂತನೆಯ ನೆಲೆಯ ಆಳವನ್ನು ಪರಿಚಯಿಸುವಂತಿದೆ: 'ಈ ದೇಹವೂ ಒಂದು ಯಂತ್ರವೇ. ಅದನ್ನು ನಾನು ನಿರಾಕರಿಸಲಾಗುವುದೇ? ಆದರೆ ನನ್ನ ಮುಕ್ತಿಗೆ ಅದು ಅಡ್ಡಿಯಾಗುವುದಾದರೆ ಅದನ್ನೂ ನಾನು ತ್ಯಜಿಸಿಯೇನು!' ಅಂದರೆ ಗಾಂಧಿ ಮನುಷ್ಯ ಜನ್ಮದ ಎಲ್ಲ ಕರ್ಮಗಳ ಆತ್ಯಂತಿಕ ಗುರಿ ಮುಕ್ತಿ ಎಂದು ಗುರುತಿಸಿದ್ದರು. ಹಾಗೇ ಆ ಮುಕ್ತಿಗೆ ಮಾಧ್ಯಮ ದೇಹವೆಂದೂ ನಂಬಿದ್ದರು. ಹಾಗಾಗಿಯೇ ಅವರು ದೇಹದ ಸುಸ್ಥಿತಿಯ ಬಗ್ಗೆಯೂ ಹೆಚ್ಚು ಮಾತನಾಡುತ್ತಿದ್ದರು. ಅದರಿಂದ ಗೊತ್ತಾಗುವುದೇನೆಂದರೆ, ಗಾಂಧಿ ಮುಕ್ತಿಯ ಬಗ್ಗೆ ಮಾತನಾಡುತ್ತಿದ್ದಾಗ ಅವರು ಮಾತನಾಡುತ್ತಿದ್ದುದು ಸಾಂಪ್ರದಾಯಿಕ ಧಾರ್ಮಿಕ ಅರ್ಥದ ಮುಕ್ತಿಯನ್ನಲ್ಲ. ಅದು ದೇಹವು ಲೋಕದೊಡನೆಯ ಮುಖಾಮುಖಿಯಲ್ಲಿ ಕಂಡುಕೊಳ್ಳುವ ಆತ್ಯಂತಿಕ ಶಾಂತಿ–ದೇಹಭಾವ ಕರಗಿಹೋದ ಸ್ಥಿತಿ. ಹಾಗಾಗಿಯೇ ಅವರು ಸಾಂಪ್ರದಾಯಿಕ ಧರ್ಮಗಳ ನಂಬಿಕೆಯೆನಿಸಿದ್ದ ದೇವರು ಸತ್ಯ ಎನ್ನುವುದನ್ನು ಸತ್ಯವೇ ದೇವರು ಎಂದು ತಲೆಕೆಳಗು ಮಾಡಿ, ಹೊಸ ನೆಲೆಯ ಅಧ್ಯಾತ್ಮಿಕತೆಯನ್ನು ರೂಪಿಸಿದರು. ಆ ಸತ್ಯವೆಂಬ ದೇವರನ್ನು ಈ ದೇಹದ ಚಟುವಟಿಕೆಗಳ ಮೂಲಕವೇ–ಲೋಕದೊಡನೆಯ ಮುಖಾಮುಖಿಯಲ್ಲೇ–ಸಾಕ್ಷಾತ್ಕರಿಸಿಕೊಳ್ಳಬೇಕು. ಹಾಗಾಗಿ ದೇಹಕ್ಕೂ ಒಂದು ಅಧ್ಯಾತ್ಮಿಕತೆಯ ಮೌಲ್ಯವಿದೆ. ಅಸ್ಪೃಶ್ಯತೆಯೆಂಬ ದೇಹವನ್ನು ಕುರಿತ ಕೇವಲ ಭೌತಿಕ ವ್ಯಸನದ ಆಚರಣೆ ಈ ಅಧ್ಯಾತ್ಮಿಕತೆಗೆ ವಿರೋಧವಾದದ್ದು ಎಂದು ಅವರು ನಂಬಿದ್ದರು.

ಈ ತಮ್ಮ ಎಲ್ಲ ವಿಚಾರಗಳನ್ನು ಒಟ್ಟಿಗೆ ಹೇಳಲು ಅವರು ಕಂಡುಕೊಂಡ ಸಾಧನ ಎಂದರೆ, ಚರಕ. ಚರಕ ಗಾಂಧಿ ತತ್ವದ ದೇಹವಿದ್ದಂತೆ. ಅದನ್ನು ತಿರುಗಿಸುವವನಲ್ಲಿ ಆತ್ಮ ಜಾಗೃತವಾಗುತ್ತದೆ. ಈ ಚರಕವೂ ಒಂದು ಯಂತ್ರ ಎಂಬುದನ್ನು ನಾವು ಗಮನಿಸಿದರೆ, ಗಾಂಧಿಯ ಯಂತ್ರ ವಿರೋಧ ಯಾವ ನೆಲೆಯದ್ದು ಮತ್ತು ಅದರಲ್ಲಿ ಅವರ ಇಡೀ ಬದುಕಿನ ದರ್ಶನ ಹೇಗೆ ಅಡಕವಾಗಿದೆ ಎಂಬುದು ತಿಳಿಯುತ್ತದೆ.

ನಮ್ಮ ಈ ಸಂಚಿಕೆಯಲ್ಲಿ ಇದನ್ನೆಲ್ಲ ವಿವರಿಸುವಂತಹ ಮೂರು ಲೇಖನಗಳನ್ನು ನೀಡುತ್ತಿದ್ದೇವೆ. ಹಾಗೇ, ಇವುಗಳಿಗೆ ಸಂಬಂಧಿಸಿದಂತೆಯೇ, ನಮ್ಮ ಹೊಸ ಪ್ರಧಾನಿ ಮೋದಿಯವರನ್ನು ಬಹುವಾಗಿ ಆಕರ್ಷಿಸಿರುವ ಮತ್ತು ಈ ಹಿನ್ನೆಲೆಯಲ್ಲಿ ಇತ್ತೀಚಿಗಿನ ಚೀನಾ ಅಧ್ಯಕ್ಷರ ಭಾರತ ಭೇಟಿಯ ಸಂದರ್ಭದಲ್ಲಿ ರಾಷ್ಟ್ರಾದ್ಯಂತ ಹೊಸ ಆಸೆ ಮತ್ತು ಕುತೂಹಲ ಹುಟ್ಟಿಸಿರುವ ಚೀನಾದ ಅಭಿವೃದ್ಧಿ ಮಾದರಿಯನ್ನು ವಿಶ್ಲೇಷಿಸುವ ಒಂದು ಲೇಖನವೂ ಇದೆ. ಗಾಂಧಿಯ ಯಂತ್ರ ದರ್ಶನದ ನಿಜತ್ವವನ್ನೂ ಈ ಲೇಖನದ ಒರೆಗಲ್ಲಿನಲ್ಲಿಯೂ ಓದುಗರು ಪರೀಕ್ಷಿಸಬಹುದು.ದಯವಿಟ್ಟು ಬರೆಯಿರಿ

ಗಾಂಧಿ ಕುರಿತ ಎಲ್ಲ ಚರ್ಚೆಗಳೂ ಕ್ಲೀಷೆ ಎನ್ನಿಸುತ್ತಿರುವುದು, ಇಂತಹ ಎಲ್ಲ ಚರ್ಚೆಗಳು ಓದಿನ ಆನಂದದದಲ್ಲೇ ಕಳೆದುಹೋಗಿ ನಿಜ ಬದುಕಿನ ಒರೆಗಲ್ಲಿನವರೆಗೆ ತಲುಪದೇ ಇರುವುದರಿಂದ ಅಲ್ಲವೇ? –ಸಂಪಾದಕ

## ಆಧುನಿಕ ತಂತ್ರಜ್ಞಾನ ಯುಗದಲ್ಲಿ ಗಾಂಧಿ ಕಾಣ್ಕೆ

–ಡಾ. ಎಚ್.ಎ. ಶಂಕರನಾರಾಯಣ

ಇಂದು ನಾವು ಗಾಂಧೀಜಿಯ ಯಂತ್ರ ಕುರಿತ ಚಿಂತನೆಗಳೂ ಸೇರಿದಂತೆ ಯಾವುದೇ ಚಿಂತನೆಗಳನ್ನು ಕುರಿತು ವಿಮರ್ಶಿಸಲು ಹೊರಡುವ ಮುನ್ನ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಸಮಕಾಲೀನ ಸಾಮಾಜಿಕ ಮತ್ತು ಆರ್ಥಿಕ ಪರಿಸರವು ಗಾಂಧೀಜಿಯ ಕಾಲಕ್ಕಿಂತ ಗಣನೀಯವಾಗಿ ಬದಲಾಗಿದೆ ಮತ್ತು ಅಂತಹ ಬದಲಾವಣೆಗಳು ನಮ್ಮ ಜೀವನವನ್ನು ಗುಣಾತ್ಮಕವಾಗಿ ಪರಿಣಾಮಿಸುತ್ತಿವೆ ಎನ್ನುವುದು. ಗಾಂಧಿ ಅನುಭವದ ಸಮಾಜ ಬಹುತೇಕ ಭಾರಿ ಕೈಗಾರಿಕೆಗಳ ಸಮಾಜವಾಗಿದ್ದು ಅಂದು ಭಾರಿ ಯಂತ್ರ ಸಾಮಾಜಿಕ ಮತ್ತು ಆರ್ಥಿಕ ಚಲನಾತ್ಮಕತೆಯ ಕೇಂದ್ರ ಬಿಂದುವಾಗಿತ್ತು. ಆದರೆ ಸಮಾಕಾಲೀನ ಸಮಾಜದಲ್ಲಿ ನಾವು ದಿನ ನಿತ್ಯ ಬಳಸುವ ಹಲವಾರು ಸಾಧನಗಳು ಭಾರಿ ಕೈಗಾರಿಕೆಯನ್ನು ಅವಲಂಬಿಸಿರದ ಸಾಧನಗಳಾಗಿವೆ ಮತ್ತು ಈ ಸಾಧನಗಳ ಉತ್ಪಾದನಾ ಕೇಂದ್ರಬಿಂದು ಈಗ ಯಂತ್ರವಾಗಿರದೆ ತಾಂತ್ರಿಕ ಜ್ಞಾನವಾಗಿದೆ. ಈ ಕಾರಣಕ್ಕಾಗಿ ಇಪ್ಪತ್ತೊಂದನೇ ಶತಮಾನದ ಸಮಾಜವನ್ನು ಭಾರಿ ಕೈಗಾರಿಕೆಗಳನ್ನು ಅವಲಂಬಿಸಿರದ ಕೈಗಾರಿಕೋತ್ತರ ಸಮಾಜವೆನ್ನಬಹುದು. ಭಾರಿ ಕೈಗಾರಿಕೆಗಳ ಸಮಾಜದಲ್ಲಿ ವಸ್ತುಗಳ ಉತ್ಪಾದನೆಗೆ ಪ್ರಾಮುಖ್ಯತೆ ಇದ್ದರೆ ಭಾರಿ ಕೈಗಾರಿಕೆಗಳನ್ನು ಅವಲಂಬಿಸಿರದ ಸಮಕಾಲೀನ ಸಮಾಜದ ಪ್ರಮುಖ ಆರ್ಥಿಕ ಚಟುವಟಿಕೆ ಯಂತ್ರ ಸಾಮಗ್ರಿಗಳ ಸುತ್ತಲಲ್ಲ; ಬದಲಿಗೆ, ತಾಂತ್ರಿಕ ಅನ್ವಯಗಳ ಸಾಧನಗಳನ್ನು (Apps ಎಂದು ಸಂಕ್ಷಿಪ್ತವಾಗಿ ಕರೆಯಲಾಗುವ Applications) ಪೂರೈಸುವುದಾಗಿದೆ.

ಮಾನವನ ನಾಗರಿಕತೆಯ ಚಲನಾತ್ಮಕತೆಯಲ್ಲಿ ಯಂತ್ರವೆಂಬ ವಿದ್ಯಮಾನದ ವಿಕಸನವನ್ನು ಮೂರು ಹಂತಗಳಲ್ಲಿ ವಿಮರ್ಶಿಸಬಹುದು. ಮೊದಲ ಹಂತದ ಯಂತ್ರಗಳು ಕೈಗಾರಿಕಾ ಕ್ರಾಂತಿಯ ಪೂರ್ವದ್ದು. ಅಂದರೆ, ಮಾನವ ತಾನು ಪ್ರಕೃತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಆರಂಭಿಸಿದ ಕಾಲದಿಂದ ಕೈಗಾರಿಕಾ ಕ್ರಾಂತಿಯ ಆರಂಭದ ಕಾಲದವರೆಗೆ ಇದ್ದ ಯಂತ್ರಗಳು. ಈ ಕಾಲದ ಬಹುತೇಕ ಯಂತ್ರಗಳು ಮಾನವ ಚಾಲಿತ ಮತ್ತು ಬೃಹತ್ ಪ್ರಮಾಣದ ಉತ್ಪಾದನೆ ಸಾಧ್ಯವಿಲ್ಲದವು. ಆದ ಕಾರಣ ಇವು ತೀವ್ರ ಸಾಮಾಜಿಕ ಸಂಚಲನೆಗಳಿಗೆ–ವಿಘಟನೆ ಮತ್ತು ವಿಪ್ಲವಗಳಿಗೆ–ಬಹುತೇಕ ಕಾರಣವಾಗದ



**ಲ್ಯಾಂಕಾಶೈರ್‌ನಲ್ಲಿ ಗಾಂಧಿಯನ್ನು ಪ್ರೀತಿಯಿಂದ ಮುತ್ತಿದ ಗಿರಣಿ ಕಾರ್ಮಿಕರು**

ಯಂತ್ರಗಳು. ಎರಡನೇ ಹಂತ, ಕೈಗಾರಿಕಾ ಕ್ರಾಂತಿಯ ನಂತರದ ಯಂತ್ರಗಳು. ಈ ಯಂತ್ರಗಳು ಬಹುತೇಕ ಸ್ವಯಂಚಾಲಿತ–ಇಂಧನಚಾಲಿತ–ಯಂತ್ರಗಳು ಮತ್ತು ಬೃಹತ್ ಪ್ರಮಾಣದ ಉತ್ಪಾದನೆಯನ್ನು ಸಾಧ್ಯ ಮಾಡಿದವುಗಳು. ಈ ಯಂತ್ರಗಳು ಬೃಹತ್ ಕೈಗಾರಿಕೀಕರಣಕ್ಕೆ ನಾಂದಿ ಹಾಡಿದ್ದಲ್ಲದೆ, ಬಂಡವಾಳಶಾಹಿ ವ್ಯವಸ್ಥೆ ಮತ್ತು ನಾವು ಈಗ ಎದುರಿಸುತ್ತಿರುವ ಸಮಸ್ಯೆಗಳಾದ ಬಡವ ಶ್ರೀಮಂತರ ನಡುವಿನ ಅಂತರ, ನಿರುದ್ಯೋಗ, ವಲಸೆ, ಪರಿಸರ ನಾಶ ಮುಂತಾದ ಹತ್ತು ಹಲವು ಸಮಸ್ಯೆಗಳ ಉಗಮಕ್ಕೆ ಕಾರಣವಾಗಿ ಜಗತ್ತಿನ ಹಲವಾರು ಸಮಾಜಿಕ–ರಾಜಕೀಯ ಪಲ್ಲಟ ಮತ್ತು ವಿಪ್ಲವಗಳಿಗೆ ನಾಂದಿಯಾದಂಥವು. ಮೂರನೇ ಹಂತ, ಮಾಹಿತಿ ತಂತ್ರಜ್ಞಾನದ ಉಗಮ. ಇಪ್ಪತ್ತನೇ ಶತಮಾನದ ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ಆರಂಭವಾದ ಈ ಹಂತ ಇಂದು ಇನ್ನೂ–ನಿರಂತರವಾಗಿ–ವಿಕಸನಗೊಳ್ಳುತ್ತಿದ್ದು ಇದರ ಅಂತಿಮ ಸ್ವರೂಪ ಮತ್ತು ಪರಿಣಾಮವನ್ನು ನಾವು ಸಂಪೂರ್ಣ ಅರ್ಥಮಾಡಿಕೊಳ್ಳಾಗದ ಸಂಕ್ರಮಣ ಕಾಲದಲ್ಲಿದ್ದೇವೆ.

ಹಾಗಾಗಿ ಇಂದು ನಮ್ಮ ಮುಂದೆ ಇರುವ ದೊಡ್ಡ ಪ್ರಶ್ನೆಯೆಂದರೆ ನಾವು ಯಂತ್ರ ಯುಗವನ್ನು ದಾಟಿ ತಂತ್ರಜ್ಞಾನ ಯುಗಕ್ಕೆ ಕಾಲಿಟ್ಟಿದ್ದೇವೆಯೇ ಎಂಬುದು. ಏಕೆಂದರೆ, ಇಂದು, ಇತ್ತೀಚಿನವರೆಗೂ ಭಾರಿ ಯಂತ್ರಗಳು ಉತ್ಪಾದಿಸುತ್ತಿದ್ದ ಬಹುತೇಕ ವಸ್ತುಗಳು ಅನ್ವಯ–ಸಾಧನಗಳಾಗಿ(Apps.,) ಪರಿವರ್ತನೆಗೊಂಡಿವೆ.

ಅಂದರೆ, ಯಂತ್ರ ಯುಗದಲ್ಲಿ ವಸ್ತುಗಳ ಉತ್ಪಾದನೆ ಮುಖ್ಯವಾದರೆ ಇಂದಿನ ದಿನಗಳಲ್ಲಿ ತಂತ್ರಜ್ಞಾನ ಆಧಾರಿತ ಸಾಧನಗಳ ಪೂರೈಕೆ ಮುಖ್ಯವಾಗುತ್ತಿದೆ. ವಸ್ತುಗಳ ಉತ್ಪಾದನೆಯಲ್ಲಿ ಯಂತ್ರ, ಕಚ್ಚಾ ಸಾಮಗ್ರಿ ಮತ್ತು ಕಾರ್ಮಿಕ ಶ್ರಮದ ಅಗತ್ಯವಿದ್ದರೆ ಸಾಧನಗಳ ಪೂರೈಕೆಗೆ ತಂತ್ರಜ್ಞಾನವುಳ್ಳ ತಂತ್ರಜ್ಞಾನಿ ಇದ್ದರೆ ಸಾಕು. ಪರಿಣಾಮವೆಂದರೆ ಕೈಗಾರಿಕಾ ಸಮಾಜದಲ್ಲಿ ಅವಶ್ಯವಾಗಿದ್ದ ಶ್ರಮದ ಪರಿಣಿತಿ ಮತ್ತು ಕೌಶಲ ಈಗ ಗಣನೀಯವಾಗಿ ಬದಲಾಗಿ ಇಂದು ಆ ಯುಗದ ಶ್ರಮದ ಅವಶ್ಯಕತೆ ಗಣನೀಯವಾಗಿ ಕಡಿಮೆಯಾಗಿದೆ. ಸಾಮಾಜಿಕವಾಗಿ ಇದು ಒಂದು ವಿಚಿತ್ರ ಸನ್ನಿವೇಶವನ್ನು ನಿರ್ಮಾಣ ಮಾಡಿದೆ. ಆದೆಂದರೆ, ಭಾರಿ ಕೈಗಾರಿಕಾ ಸಮಾಜದ ಶ್ರಮದ ಸಾವು. ಕೈಗಾರಿಕಾ ಕ್ರಾಂತಿಯಿಂದ ಆವಿಷ್ಕಾರಗೊಂಡ ಯಂತ್ರಗಳು ನಿರುದ್ಯೋಗವನ್ನುಂಟು ಮಾಡಿದರೆ ಇಂದಿನ ಅನ್ವಯಗಳು (ಅಪ್ಲಿಕೇಶನ್ಸ್) ಉದ್ಯೋಗವನ್ನೇ ನಾಶ ಮಾಡುತ್ತಿವೆ. ನೆನ್ನೆಯ ಬಂಡವಾಳದ ಮಾಲಿಕ ತನ್ನ ಯಂತ್ರಗಳ ಒಡೆತನದ ಆಧಾರದ ಮೇಲೆ ಕಾರ್ಮಿಕರನ್ನು ಶೋಷಿಸುತ್ತಿದ್ದರು ಎಂದು ಹೇಳಲಾಗುವುದಾದರೆ ಇಂದು ತಂತ್ರಜ್ಞಾನದ ಮಾಲಿಕತ್ವ ಹೊಂದಿರುವವರು ಒಟ್ಟಾರೆ ಸಮಾಜವನ್ನು ಶೋಷಿಸುತ್ತಿದ್ದಾರೆ ಎಂದು ಹೇಳಬಹುದು. ಆದರೆ ಈ ಶೋಷಣೆ ಬೇರೆ ನೆಲೆಯದ್ದು ಮತ್ತು ಹೆಚ್ಚು ಸೂಕ್ಷ್ಮವೂ, ಅನಾಹುತಕಾರಿಯಾದದ್ದು ಎಂಬುದನ್ನು ನಾವು ಗಮನಿಸಬೇಕು.

ಅದು ಹೀಗೆ: ಈ ಸಾಧನಗಳ ಸ್ವರೂಪ ನೂತನವಾದದ್ದು. ಇವು ಘನರೂಪಿ ವಸ್ತುಗಳಲ್ಲ. ಆದರೆ ಇಲ್ಲಿಯವರೆಗೂ ಘನರೂಪಿ ವಸ್ತುಗಳಿಂದ ಪಡೆಯುತ್ತಿದ್ದ ಎಲ್ಲ–ಮೂರು ಆಯಾಮಗಳ ತಂತ್ರಜ್ಞಾನದ ಮೂಲಕ ವಸ್ತುಗಳ ಉತ್ಪಾದನೆಯೂ ಸೇರಿದಂತೆ–ಪ್ರಯೋಜನಗಳನ್ನೂ ನಾವು ಇವುಗಳಿಂದ ಪಡೆಯಬಹುದಾಗಿದೆ. ಇವುಗಳ ಅಸ್ತಿತ್ವ ಇರುವುದು ವ್ಯೋಮ(cyber)ದಲ್ಲಿ. ಅಂದರೆ ಈ ಸಾಧನಗಳಿಗೆ ಯಾವುದೇ ಭೌಗೋಳಿಕ ಮಿತಿಯಿಲ್ಲ. ಈ ಸಾಧನಗಳ ತಂತ್ರಜ್ಞಾನವನ್ನು ಯಾರು 'ಪಡೆಯ'ಬಲ್ಲರೋ ಅವರೇ ಒಡೆಯರು. ಅವರೇ ಎಲ್ಲ ಲಾಭ ಮತ್ತು ಸಂಪತ್ತಿನ ಒಡೆಯರು. ಈ ರೀತಿಯ ಸಾಧನಗಳ ಪೂರೈಕೆಯ ಪ್ರಕ್ರಿಯಲ್ಲಿರುವ ವೈಶಿಷ್ಟತೆಯೆಂದರೆ, ಭಾರಿ ಯಂತ್ರಾಧಾರಿತ ವಸ್ತುಗಳ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಎದ್ದು ಕಾಣುವಂತೆ ಕಾರ್ಮಿಕರ ಶೋಷಣೆ ಎದ್ದು ಕಾಣದಿರುವುದು. ಇದಕ್ಕೆ ಎರಡು ಕಾರಣಗಳನ್ನು ಕೊಡಬಹುದು. ಒಂದು, ಈ ಸಾಧನಗಳ ಪೂರೈಕೆಗೆ ಮೂಲಭೂತವಾಗಿ ಬೇಕಿರುವುದು ಮಾನಸಿಕ ಶ್ರಮ. ಕಾರ್ಮಿಕರ ದೈಹಿಕ ಶೋಷಣೆ ಸುಲಭವಾಗಿ ಗೋಚರಿಸುವಂತೆ ನಮಗೆ ಮಾನಸಿಕ ಶೋಷಣೆ ಗೋಚರಿಸುವುದಿಲ್ಲ. ಇನ್ನೊಂದು ಪ್ರಮುಖ ಕಾರಣವೆಂದರೆ, ಈ ಸಾಧನಗಳನ್ನು ಉತ್ಪಾದಿಸುವ ಸಂಸ್ಥೆಗಳಿಗೆ, ಭಾರಿ ಕೈಗಾರಿಕೆಗಳಿಗೆ ಅವಶ್ಯವಿರುವಂತೆ ಬಹು ಸಂಖ್ಯೆಯ ಕಾರ್ಮಿಕರ ಅವಶ್ಯಕತೆ ಇಲ್ಲದಿರುವುದು. ಅಂದರೆ ಕೆಲಸಗಳ–ಉದ್ಯೋಗಗಳ–ಸಾವು.

ಗಾಂಧೀಜಿಯ ಇಪ್ಪತ್ತನೆ ಶತಮಾನದ ಯಂತ್ರ ಸಂಸ್ಕೃತಿ ಕುರಿತ ಚಿಂತನೆಗಳು ಸಮಕಾಲೀನ ಸಮಾಜದಲ್ಲಿ ಜೀವ ಪಡೆಯುವುದು ಹೀಗೆ. ಅವರು ಕೈಗಾರಿಕಾ ಕ್ರಾಂತಿಪೂರ್ವದ ಯಂತ್ರ ಪದ್ಧತಿಯನ್ನು ಎಂದೂ ವಿರೋಧಿಸಿರಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಹಾಗಾಗಿ ಯಂತ್ರ ಸಂಸ್ಕೃತಿಯ ಬಗ್ಗೆ ಅವರಿಗೆ ಇದ್ದ ಪ್ರಮುಖ ಆತಂಕವೆಂದರೆ, ಸ್ವಯಂಚಾಲಿತ ಯಂತ್ರದಿಂದಾಗಿ ಮಾನವನ ಆತ್ಮ(Human spirit) ನಾಶವಾಗಿ ಅವನೂ ಒಂದು ಯಂತ್ರದಂತಾಗುತ್ತಾನೆ ಎನ್ನುವುದು. ಯಂತ್ರದಂತಾಗುತ್ತಿದ್ದ ಮಾನವನನ್ನು ಅವನ ಮೂಲಸ್ಥಿತಿಗೆ–ಮಾನವತೆಯ ಸ್ಥಿತಿಗೆ–ಪುನಃ ಸ್ಥಾಪಿಸುವ ಕಾಳಜಿ ಅವರದ್ದಾಗಿತ್ತು. ಹಣದ ಗೀಳಿಗಾಗಿ ಸಾವಿರಾರು ಜನರು ಕೆಲಸವಿಲ್ಲದೆ ಬೀದಿಗಳಲ್ಲಿ ಹಸಿವಿನಿಂದ ಸಾಯುವವರೆಗೂ ಯಂತ್ರವನ್ನು ಬಳಸಿ ಶ್ರಮ ಉಳಿತಾಯ ಮಾಡುವ ಯಂತ್ರ ಸಂಸ್ಕೃತಿಯ ಪ್ರಕ್ರಿಯೆಯನ್ನು ಪ್ರಶ್ನಿಸಿದ ಗಾಂಧಿ, ಶ್ರಮ ಮತ್ತು ಸಮಯ ಸಮಾಜದಲ್ಲಿರುವ ಕೆಲವರಿಗೆ ಮಾತ್ರವಲ್ಲದೇ ಎಲ್ಲರಿಗೂ ದೊರಕುವಂತಹ ರೀತಿಯಲ್ಲಿ ಉಳಿತಾಯವಾಗಬೇಕು ಎಂಬ ಅಭಿಪ್ರಾಯ ಹೊಂದಿದ್ದರು. ಕಾರ್ಮಿಕರ ಶ್ರಮದ ಬಳಕೆಯ ಅಂತಿಮ ಉದ್ದೇಶ ಸಮಾಜದ ಒಳಿತಿಗಾಗಿಯೇ ಹೊರತು ಅದು ಮಾನವನ ದುರಾಸೆಯ ಸಾಧನವಾಗಬಾರದು. ನಮ್ಮ ಸಮಸ್ಯೆ ಲಕ್ಷಾಂತರ ಹಳ್ಳಿಯಲ್ಲಿ ವಾಸಿಸುವ ಜನರಿಗೆ ವಿರಾಮವನ್ನು ಕಂಡುಕೊಳ್ಳುವುದಲ್ಲ. ವರ್ಷದಲ್ಲಿ ಆರು ತಿಂಗಳಾದರೂ ಈಗಿರುವ ಅವರ ವಿರಾಮವನ್ನು ಹೇಗೆ ಬಳಸಬೇಕೆಂಬುದು. ಈ ಸಂದರ್ಭದಲ್ಲಿ ಗಾಂಧೀಜಿ ಯಂತ್ರ ವಿರೋಧಿಯಲ್ಲವೆಂಬುದನ್ನು ನಾವು ಮರೆಯಬಾರದು. ಅವರ ವಿರೋಧವೇನಿದ್ದರೂ ಶ್ರಮಿಕರನ್ನು ನೆಲೆದಪ್ಪಿಸುವ ಮತ್ತು ಅವರನ್ನು ನಿಷ್ಪ್ರಯೋಜಕರನ್ನಾಗಿ ಮಾಡುವ ಯಂತ್ರಗಳ ಬಗ್ಗೆ ಮಾತ್ರ. ಕೆಲಸಕ್ಕೆ ತೊಡಗಿಸಬಲ್ಲ ಮಿಲಿಯಗಟ್ಟಲೆ ಕೈಗಳನ್ನು ನೆಲೆದಪ್ಪಿಸುವ ಯಂತ್ರ ಸಂಕೀರ್ಣಗಳು ಹಾನಿಕರವೆಂಬುದು ಅವರ ಅಭಿಪ್ರಾಯವಾಗಿತ್ತು. ರಾಶಿ ಉತ್ಪಾದನೆ ಎಂದೂ ಗ್ರಾಹಕರ ನೈಜ ಅವಶ್ಯಕತೆಯನ್ನು ಗಮನಿಸುವುದಿಲ್ಲವೆಂದು ಅರಿತಿದ್ದ ಗಾಂಧೀಜಿ ಆಧುನಿಕ ಪ್ರಪಂಚದ ಎಲ್ಲ ಆರ್ಥಿಕ ಗಂಡಾಂತರಗಳಿಗೆ ರಾಶಿ ಉತ್ಪಾದನೆಯ ಬಗೆಗಿನ ಉನ್ಮಾದವೇ ಮೂಲ ಕಾರಣ ಎಂದು ಗಾಢವಾಗಿ ನಂಬಿದ್ದರು. ರಾಶಿ ಉತ್ಪಾದನೆಯ ಪರಿಣಾಮವೆಂದರೆ ಸಂಪತ್ತು ಕೆಲವೇ ಕೈಗಳಲ್ಲಿ ಕೇಂದ್ರಿಕೃತವಾಗುವುದು. ಆದರೆ ಗಾಂಧೀಜಿ ಸಂಪತ್ತು ಎಲ್ಲರಲ್ಲೂ ಕೇಂದ್ರಿಕೃತವಾಗಬೇಕೆಂದು ಬಯಸಿದ್ದರು. ಇಂದು ಯಂತ್ರವು ಕೆಲವರಿಗೇ ಸಹಾಯ ಮಾಡಿ ಈ ಕೆಲವರು ಮಿಲಿಯಗಟ್ಟಲೆ ಜನರ ಬೆನ್ನ ಮೇಲೆ ಸವಾರಿ ಮಾಡುವಂತಾಗಿದೆ. ಇದಕ್ಕೆ ಪರಿಹಾರವಾಗಿ ಮಾನವ ತನ್ನ ದುರಾಸೆಯನ್ನು ಮಮತೆಯಾಗಿ ಪರಿವರ್ತಿಸಿಕೊಳ್ಳಬೇಕೆಂದು ಸೂಚಿಸಿದರು.

ನಾವು ಕೈಗಾರಿಕಾ ಕ್ರಾಂತಿ ನಂತರದ ಯಂತ್ರ ಯುಗವನ್ನು ದಾಟಿ ಮಾಹಿತಿ ತಂತ್ರಜ್ಞಾನದ ಅನ್ವಯ(ಆಪ್ಸ್) ಯುಗಕ್ಕೆ ವಿಕಸನಗೊಳ್ಳುತ್ತಿರುವ ಈ ಕಾಲ ಘಟ್ಟದಲ್ಲಿ ಗಾಂಧೀಜಿಯ ಯಂತ್ರ ಸಂಸ್ಕೃತಿಯ ವಿಮರ್ಶೆ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ಸಮಕಾಲೀನ ಮಾಹಿತಿ ತಂತ್ರಜ್ಞಾನದ ನಕಾರಾತ್ಮಕ ಪರಿಣಾಮಗಳು ಗಾಂಧಿ ವಿಶ್ಲೇಷಿಸಿದ ಯಂತ್ರ ಸಂಸ್ಕೃತಿಯ ನಕಾರಾತ್ಮಕ ಪರಿಣಾಮಗಳಿಗಿಂತ ಹೆಚ್ಚು ಆಘಾತಕಾರಿಯಾಗಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಮಾರ್ಕ್ಸ್ ಮತ್ತು ಗಾಂಧಿ ವಿಶ್ಲೇಷಿಸಿದ 'ಪರಕೀಯತೆ'(alienation)ಗಿಂತ ಘೋರವಾದ ಸಮಸ್ಯೆಯನ್ನು ಕಾರ್ಮಿಕರು ಇಂದು ಎದುರಿಸುತ್ತಿದ್ದಾರೆ. ಅದೆಂದರೆ ಅಪ್ರಸ್ತುತತೆ (irrelevance). ಕಾರಣ,

ಈಗ ಆಗುತ್ತಿರುವ ಪ್ರಕ್ರಿಯೆ ಶ್ರಮಿಕರ ವಿಘಟನೆಯಲ್ಲ. ಶ್ರಮದ ವಿಘಟನೆ ಮತ್ತು ಅದರ ಪರಿಣಾಮವಾಗಿ ಶ್ರಮಿಕರ ಅಪ್ರಸ್ತುತತೆ.

ಇಪ್ಪತ್ತೊಂದನೆ ಶತಮಾನದ ಸಂಸ್ಕೃತಿಯನ್ನು ನಾವು ಸ್ಥೂಲವಾಗಿ ಜಾಣ ಸಂಸ್ಕೃತಿ (smart culture) ಎನ್ನಬಹುದು. ಈ ಸಂಸ್ಕೃತಿಯ ಬುನಾದಿ ಜ್ಞಾನ, ವಿವೇಕವಲ್ಲ. ಜ್ಞಾನ, ಕ್ರಿಯೆಗೆ ಸಂಬಂಧಿಸಿದರೆ ವಿವೇಕ ಆಯ್ಕೆಗೆ ಸಂಬಂಧಿಸಿದ್ದಾಗಿದೆ, ಅಂದರೆ ಹೇಗೆ ತೀರ್ಮಾನಿಸಬೇಕು? ಏನು ಮಾಡಬೇಕು? ಎಂಬುದಕ್ಕೆ ಸಂಬಂಧಿಸಿದ್ದು. ನಮ್ಮ ಚಿಂತನಾ ಕ್ರಮಕ್ಕೆ ನಾಲ್ಕು ಸ್ತರಗಳಿವೆ. ಅವುಗಳೆಂದರೆ ವಿಷಯ(data), ಮಾಹಿತಿ (information), ಜ್ಞಾನ(knowledge) ಮತ್ತು ವಿವೇಕ (wisdom). ಈ ನಾಲ್ಕೂ ಸ್ತರಗಳು ಏಕಕಾಲದಲ್ಲಿ ಸಮನ್ವಯದಲ್ಲಿರಲಾರದು. ವಿಷಯ ಮತ್ತು ಮಾಹಿತಿಯನ್ನು ಮಾತ್ರ ಆಧರಿಸಿದ ಜ್ಞಾನ ವಿವೇಕದ ಹಂತವನ್ನು ತಲುಪದಿದ್ದರೆ ಜ್ಞಾನದ ವಿಘಟನೆಯಾಗಿ ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇಂದಿನ ಬದಲಾವಣೆಗಳು ಎಷ್ಟು ತ್ವರಿತ ಗತಿಯವೆಂದರೆ ಅವನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಜ್ಞಾನವನ್ನು ಪಡೆದುಕೊಳ್ಳುವಷ್ಟರಲ್ಲೇ ಕಾಲ ಮಿಂಚಿ ಹೋಗಿ ಮುಂದಿನ ಹಂತ ತಲುಪಿರುತ್ತದೆ. ಅಂದರೆ ನಮ್ಮ ಜ್ಞಾನವನ್ನು ವಿವೇಕದ ಹಂತಕ್ಕೇರಿಸಲು ನಮಗೆ ಕಾಲಾವಕಾಶವೇ ಇಲ್ಲ! ವಿಷಯ ಮತ್ತು ಮಾಹಿತಿಗಳು ಜ್ಞಾನವನ್ನು ಅರ್ಥೈಸಲು ಬೇಕಾದರೆ, ವಿವೇಕ, ಮೌಲ್ಯ ಮತ್ತು ದೂರದೃಷ್ಟಿ ಹೊಂದಲು ಅನಿವಾರ್ಯ. ವಿವೇಕರಹಿತ ಜ್ಞಾನ ನಮ್ಮ ಇಂದಿನ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ. ಇಂದು ಬರೀ ಜ್ಞಾನವನ್ನೇ ಆಧರಿಸಿ ಸೃಷ್ಟಿ ಮಾಡುತ್ತಿರುವ ಹಲವು ಬದಲಾವಣೆಗಳು ಹಾನಿಕರವಾಗಿದ್ದು ಈ ಬದಲಾವಣೆಗೆ ನಾವು ಅವಶ್ಯಕತೆಗಿಂತ ಮಂದಗತಿಯಲ್ಲಿ ಹೊಂದಿಕೊಳ್ಳುವ ಖಂಡನೆಗೆ ಒಳಗಾಗಿದ್ದೇವೆ. ಇದರ ಇನ್ನೊಂದು ಪರಿಣಾಮವೆಂದರೆ ಜಾಗತೀಕರಣಗೊಂಡ ಇಂದಿನ ಜಗತ್ತಿನಲ್ಲಿ ವೈಯಕ್ತಿಕ ಮತ್ತು ಜಾಗತಿಕ ಅಪಾಯಗಳ ನಡುವೆ ಅಂತರವಿಲ್ಲದಂತಾಗಿ, ಇದೆಲ್ಲದರ ಫಲವಾಗಿ ನಮ್ಮನ್ನು ನಾವು ನಾಶ ಮಾಡಿಕೊಳ್ಳುವುದರ ಜೊತೆಗೆ ಇಡೀ ಜಗತ್ತಿನ ಜೀವರಾಶಿಯನ್ನೇ ವಿನಾಶದ ಅಂಚಿಗೆ ತಳ್ಳುತ್ತಿರುವ ವಿದ್ಯಮಾನದ ಬಗ್ಗೆ ನಮಗೆ ನೆದರೇ ಇಲ್ಲದಾಗಿದೆ.

ಪಾಶ್ಚಾತ್ಯ ಸಮಾಜವು ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತದೆ ಎಂಬ ಕಲ್ಪನೆಯನ್ನಾಧರಿಸಿದೆ. ಆದರೆ ಈ ಕಲ್ಪನೆ ಇಂದು ಹುಸಿಯಾದಂತೆ ತೋರುತ್ತಿದೆ. ಕಾರಣ ಜ್ಞಾನದ ತ್ವರಿತ ವಿಕಸನದಿಂದಾಗಿ ವಿವೇಕವು ಜ್ಞಾನದ ಒಂದು ಒಳ ಸುರಳಿಯಾಗಿ ಜ್ಞಾನಕ್ಕೂ ವಿವೇಕಕ್ಕೂ ಅಂತರ ಇಲ್ಲದಂತಾಗಿದೆ. ಅಂದರೆ ಜ್ಞಾನವೇ ವಿವೇಕದ ರೂಪದಲ್ಲಿ ಅವತರಿಸಿದೆ! ಇಂದು ಜಗತ್ತಿನ ಉಳಿವಿಗೆ ತೀರ ಅನಿವಾರ್ಯವಾಗಿರುವ ಅರ್ಥಪೂರ್ಣ ವಿವೇಕವನ್ನು ಜ್ಞಾನ ಸೊಕ್ಕಿನಿಂದ ಬದಿಗೆ ತಳ್ಳಿದೆ. ಈ ಕಾರಣಕ್ಕಾಗಿಯೇ ಇಪ್ಪತ್ತೊಂದನೆ ಶತಮಾನವು ಅತ್ಯಂತ ಅಮಾನವೀಯ ಶತಮಾನವಾಗುವ ಸಾಧ್ಯತೆ ನಮ್ಮೆದುರಿಗೆ ಇದ್ದಂತಿದೆ. ವಿವೇಕಕ್ಕೆ ಸಂಬಂಧಿಸಿದಂತೆ ಇನ್ನೊಂದು ಅಂಶವನ್ನೂ ನಾವು ಮನಗಾಣಬೇಕು. ಮಾನವ ನಾಗರಿಕತೆಯು ಅರ್ಥಪೂರ್ಣ ಮೌಲ್ಯವನ್ನು ಹೊಂದಲು ವಿವೇಕವು ಅವಶ್ಯಕ. ಸಮಸ್ಯೆಯೆಂದರೆ ಪ್ರತಿಯೊಂದು ಮೌಲ್ಯ(ಆದರ್ಶ)ಕ್ಕೂ ಮಾನವ ನಾಗರೀಕತೆ ಒಂದು ಬೆಲೆಯನ್ನು ತೆರಬೇಕಾಗುತ್ತದೆ. ಬೆಲೆ ಇಲ್ಲದೆ ಮೌಲ್ಯವಿಲ್ಲ. ನಮ್ಮ ನಾಗರೀಕತೆಗೆ ಮೌಲಿಕ ಪರಂಪರೆ ಇಲ್ಲವೆಂದೇನೂ ಅಲ್ಲ. ಆದರೆ ಇಂದು ವೈಯಕ್ತಿಕವಾಗಿ ಅಥವಾ ಒಂದು ಸಂಸ್ಥೆ ಅಥವಾ ರಾಷ್ಟ್ರವಾಗಿ ನಾವು ಅಂತಹ ಮೌಲಿಕ ಬೆಲೆಯನ್ನು ತೆರಲು ಸಿದ್ಧರಿಲ್ಲ. ಹೆಚ್ಚುತ್ತಿರುವ ಎಲೆಕ್ಟ್ರಾನಿಕ್ ಸಾಧನ ಮತ್ತು ಮಾಧ್ಯಮಗಳ ಬಳಕೆ ವಿವೇಕದ ಅಭಿವೃದ್ಧಿಗೆ ಪೂರಕವಾಗಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಪೊಳ್ಳಾದ ಮತ್ತು ಭಂಡನಾಗಿ ಮುನ್ನುಗ್ಗುವ ವ್ಯಕ್ತಿಗಳಿಗೆ ಸಮಾಜದಲ್ಲಿ ವಿಶೇಷ ಸವಲತ್ತು ಎಲ್ಲಾ ಸ್ತರಗಳಲ್ಲಿ ದೊರೆಯುತ್ತಿದೆ. ವಿವೇಕವು ಅಭಿವೃದ್ಧಿಯಾಗಬೇಕಾದರೆ ವ್ಯಕ್ತಿ, ಸಂಸ್ಥೆ ಮತ್ತು ಸಮಾಜದ ಸ್ತರಗಳಲ್ಲಿ ಅದನ್ನು ಉದ್ದೇಶಪೂರ್ವಕವಾಗಿ ಮಂಥಿಸಿ, ಆಚರಿಸಿ ಬೇರೆಯವರಿಗೆ ಉದಾಹರಣೆಯಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಗಾಂಧೀಜಿಯ ವಿಚಾರಧಾರೆ ಇಂದು ಅತ್ಯಂತ ಸಮಕಾಲೀನ ಮತ್ತು ಪ್ರಸ್ತುತವಾಗಿದೆ.



**(ಮೂಲತ: ಅರ್ಥಶಾಸ್ತ್ರಜ್ಞರಾದ ಲೇಖಕ ಡಾ. ಎಚ್.ಎ. ಶಂಕರನಾರಾಯಣ ಅವರು ಗಾಂಧಿ ಆರ್ಥಿಕ ಚಿಂತನೆಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದು, ಪರಿಣಿತ ಮ್ಯಾನೇಜ್‌ಮೆಂಟ್ ಸಲಹಾಕಾರರೂ ಆಗಿದ್ದಾರೆ)**

# ಚರಕವೆಂಬ ಪ್ರಾಯಶ್ಚಿತ್ತ...

**–ಪ್ರಸನ್ನ, ಹೆಗ್ಗೋಡು**



**'ನಾ**ನು ಎಲ್ಲೆಲ್ಲಿಯೂ ಚರಕವನ್ನು ನೋಡಲು ಬಯಸುತ್ತೇನೆ. ಏಕೆಂದರೆ ಎಲ್ಲೆಲ್ಲಿಯೂ ದಿವಾಳಿತನವನ್ನು ನೋಡುತ್ತಿದ್ದೇನೆ. ಅಸ್ಥಿಪಂಜರದಂತಿರುವ ಭಾರತದ ಜನರಿಗಾಗಿ ಉಣ್ಣಲಿಕ್ಕೆ ಉಡಲಿಕ್ಕೆ ಹೊದೆಯಲಿಕ್ಕೆ ದೊರೆಯಬೇಕು. ಅಲ್ಲಿಯವರೆಗೆ ಅವರಿಗೆ ಧರ್ಮದ ಅರ್ಥವಿಲ್ಲ. ಇಂದಿನ ಇಂತಹ ಪರಿಸ್ಥಿತಿಗೆ ನಾವೇ ಕಾರಣರು. ಹಾಗಾಗಿ ಚರಕ ಎಂಬುದು ನನಗೊಂದು ಪ್ರಾಯಶ್ಚಿತ್ತವಿದ್ದಂತೆ'. ಇದು ಗಾಂಧೀಜಿಯವರ ಮಾತು.

ಇವತ್ತು ಗಾಂಧೀಜಿ ನಮ್ಮೊಡನಿಲ್ಲ. ಗಾಂಧೀವಾದ ಇದೆ. ವಾದಗಳ ಸಮಸ್ಯೆಯೆಂದರೆ, ಬಾಯಿಂದ ಬಾಯಿಗೆ ಅದು ಬದಲಾಗುತ್ತಿರುತ್ತದೆ. ತಪ್ಪಲ್ಲ. ವಾದಗಳಿರುವುದೇ ಹಾಗೆ. ಹಾಗಿದ್ದಲ್ಲಿ, ಗಾಂಧೀಜಿಯವರ ಮೂಲ ಆಶಯ ಏನಿದ್ದಿರಬಹುದು? ಮೇಲೆ ಉದಾಹರಿಸಿದ ಅವರ ಮಾತು, ಅವರ ಆಶಯವನ್ನು ಸಮರ್ಥವಾಗಿ ಬಿಂಬಿಸುತ್ತಿದೆ ಎಂದೇ ನನ್ನ ಅನಿಸಿಕೆ. ಅವರು ಶ್ರಮಜೀವನದ ಪರವಾಗಿದ್ದರು. ಚರಕವೆಂಬುದು ಶ್ರಮಜೀವನಕ್ಕೆ ಒದಗಿ ಬಂದ ಒಂದು ಸರಳ ಉಪಕರಣ ಎಂದವರು ನಂಬಿದ್ದರು, ಸರಳ ಉಪಕರಣ! ಶ್ರಮ ಪರಿಶ್ರಮ ಕೌಶಲ್ಯ ಮೂರನ್ನೂ ಮೇಳವಿಸಿಕೊಂಡಿರುವ ಉಪಕರಣ!

ದಾರಿದ್ರ್ಯ ಕಂಡು ಮರುಗುತ್ತಿದ್ದರು ಗಾಂಧೀಜಿ. ಆದರೆ ಬಡತನವನ್ನು ಸಾರಾಸಗಟಾಗಿ ನಿರ್ಮೂಲನ ಮಾಡುತ್ತೇನೆ ಎಂದು ಅವರು ಎಲ್ಲಿಯೂ ಹೇಳಲಿಲ್ಲ. ಬಡತನದಿಂದಾಗಿ ಬರುವ ಸರಳತೆಯಲ್ಲಿ ಸಜ್ಜನಿಕೆ ಅಡಗಿದೆ ಎಂದು ನಂಬಿದ್ದರು ಅವರು. ಹಾಗಾಗಿ, ಚರಕವೆಂಬುದು ಬಡವರಿಗೆ ಎಷ್ಟು ಅಗತ್ಯವೋ ಅಷ್ಟೇ ನಮಗೂ–ಅರ್ಥಾತ್ ಸುಲಭಜೀವಿಗಳಿಗೂ ಅಗತ್ಯ ಎಂದು ಗಾಂಧೀಜಿ ನಂಬಿದ್ದರು. ಅದನ್ನೇ ಅವರು ಪ್ರಾಯಶ್ಚಿತ್ತ ಎಂದದ್ದು.

ಸಭ್ಯತೆ ಎಂಬುದು ಶ್ರಮದ ಬದುಕು ಹಾಗೂ ಸುಲಭ ಬದುಕಿನ ನಡುವಿನ ಸಮತೋಲನ ಸ್ಥಿತಿ. ಹಾಗಾಗಿ ಬಡವರೆಲ್ಲ ಶ್ರೀಮಂತರಾಗಬೇಕಿಲ್ಲ. ಶ್ರೀಮಂತರು ಸರಳಜೀವಿಗಳಾಗಬೇಕು, ಸಮಾಜದ ಧರ್ಮದರ್ಶಿಗಳಾಗಬೇಕು. ಬಡವರು ದಾರಿದ್ರ್ಯದಿಂದ ಬಿಡುಗಡೆ ಹೊಂದಬೇಕು ಎಂದು ಗಾಂಧೀಜಿ ನಂಬಿದ್ದರು.

ಸಮತೋಲನ ಕಳೆದುಕೊಂಡವರು ನಾವು. ನಮಗೆ ಬಡತನವೂ ತಿಳಿಯುವುದಿಲ್ಲ ಸಭ್ಯತೆಯೂ ತಿಳಿಯುವುದಿಲ್ಲ. ಎಲ್ಲರನ್ನೂ ಶ್ರೀಮಂತರನ್ನಾಗಿಸಿಬಿಡುತ್ತೇವೆ, ಎಲ್ಲರನ್ನೂ ಸುಲಭಜೀವಿಗಳನ್ನಾಗಿಸಿಬಿಡುತ್ತೇವೆ ಎಂದು ಉತ್ತರನ ಪೌರುಷ ತೋರಿಸುತ್ತಿದ್ದೇವೆ ನಾವು. ನಮ್ಮೀ ಪ್ರಯಾಸದಿಂದಾಗಿ ಶ್ರಮಜೀವಿಗಳು ಸುಲಭಜೀವಿಗಳಾದಾರೋ ಇಲ್ಲವೋ, ನಾವಂತೂ ಸುಲಭಜೀವನದಲ್ಲಿ ಮುಂದುವರೆಯಬಹುದು, ನಮಗಷ್ಟು ಸಾಕು. ಯಂತ್ರಗಳನ್ನೇರಿ ಕ್ರಾಂತಿ ಮಾಡಲಿಕ್ಕೆ ಹೊರಟಿರುವ ಉತ್ತರಕುಮಾರರು ನಾವು.

ಮಗ್ಗ ಒಂದು ಯಂತ್ರ. ಮಾನವ ಕಂಡುಹಿಡಿದ ಅತ್ಯಂತ ಅಸಾಧಾರಣವಾದ, ಹಾಗೂ ಅತ್ಯಂತ ಸಂಕೀರ್ಣವಾದ ಕೈಯಂತ್ರ. ಶ್ರಮಜೀವನದ

ಸೃಜನಾತ್ಮಕತೆಗೆ ಕಿರೀಟವಿಟ್ಟಂತಹ ಕೃತಿಯಿದು ಕೈಮಗ್ಗ. ಕೈಮಗ್ಗವೂ ಸುಲಭತೆಯನ್ನು ಸೃಷ್ಟಿಸಬಲ್ಲದು, ಆದರದು ಶ್ರಮದ ಮೂಲದಿಂದ ಬಂದದ್ದಾಗಿದೆ. ಶ್ರಮಜೀವಿಗಳು ಪರಸ್ಪರ ಸಹಕರಿಸಿ ಉತ್ಪಾದಿಸುವ, ನಿಧಾನಗತಿಯ ನೂಲಿನಂತಹ, ನಿವಿರಾದ ಸಭ್ಯತೆಯದು.

ನಿಧಾನ ಗತಿಯದ್ದಾದ, ಸರಳವಾದ ಹಾಗೂ ಸ್ನೇಹಮಯವಾದ ಸಭ್ಯತೆಯ ಪ್ರತಿಪಾದಕರಾಗಿದ್ದರು ಗಾಂಧೀಜಿ. ನಾವಿಂದು ಅನುಭವಿಸುತ್ತಿರುವುದು, ಅವಸರ ಪ್ರವೃತ್ತಿಯದ್ದಾದ, ಅತಿಸಂಕೀರ್ಣವಾದ ಹಾಗೂ ದ್ವೇಷಪೂರಿತವಾದ ಅಸಭ್ಯತೆಯೊಳಗೆ. ಜೀವನಶೈಲಿಯನ್ನು ಬದಲಿಸಿಕೊಳ್ಳುವ ನಿರ್ಧಾರ ಮಾಡೋಣ ಮೊದಲು. ಸಮಾಜ ಬದಲಾವಣೆ ತನ್ನಿಂತಾನೆ ಆಗುತ್ತದೆ.



**(ವಿಜ್ಞಾನದ ವಿದ್ಯಾರ್ಥಿಯಾಗಿ, ನಂತರ ಪ್ರಸಿದ್ಧ ರಂಗಕರ್ಮಿಯಾಗಿ, ಮಾರ್ಕ್ಸ್‌ವಾದಿ ಹೋರಾಟಗಾರರಾಗಿ ಹಲವು ರೂಪಾಂತರಗಳನ್ನು ಹೊಂದಿದ ಪ್ರಸನ್ನ ಈಗ ಗಾಂಧಿ ಚಿಂತನೆಗಳಲ್ಲಿ ನೆಲೆ ಪಡೆದು, ಸಾಗರದ ಬಳಿಯ ಹೆಗ್ಗೋಡಿನಲ್ಲಿ ಚರಕ ಎಂಬ ಕೈಮಗ್ಗ ಸಹಕಾರಿಯ ರೂವಾರಿಯಾಗಿದ್ದಾರೆ**

# ಅಸ್ಪೃಶ್ಯ ದಲಿತರೂ, ಅಸ್ಪೃಶ್ಯ ಗಾಂಧಿಯೂ...

–ಎಚ್. ಗೋವಿಂದಯ್ಯ



**ಹರಿಜನ ನಿಧಿಗಾಗಿ ಗಾಂಧಿ ಭಿಕ್ಷಾಟನೆ**

**ಗಾಂ**ಧಿ ಮತ್ತು 'ಅಸ್ಪೃಶ್ಯ' ದಲಿತರ ನಡುವೆ ವಿಚಿತ್ರವಾದ ಸಾವಯವ ಸಂಬಂಧ ಇರುವಂತೆ ಕಾಣುತ್ತದೆ. ಗಾಂಧಿ 'ಅವೈಚಾರಿಕ', 'ಅಪ್ರಸ್ತುತ', 'ಸನಾತನವಾದಿ' ಇತ್ಯಾದಿ ನಕಾರಾತ್ಮಕ ಶಬ್ದಾವಳಿಯ ಮೂಲಕ 'ಪ್ರಗತಿಪರ'ರ ಕಣ್ಣಲ್ಲಿ ಒಂದು ಬಗೆಯಲ್ಲಿ 'ಅಸ್ಪೃಶ್ಯ'ಗೊಂಡಿರುವವರು. ದಲಿತರು ತಮ್ಮದಲ್ಲದ ತಪ್ಪಿಗಾಗಿ ವೈದಿಕಶಾಹಿಯ ಕಣ್ಣಲ್ಲಿ ಸಾವಿರಾರು ವರ್ಷಗಳಿಂದಲೂ ಸಾಮಾಜಿಕವಾಗಿ ಅಸ್ಪೃಶ್ಯಗೊಂಡಿರುವವರು. ಈ ಎರಡು ರೀತಿಯ ಅಸ್ಪೃಶ್ಯತೆಗಳ ನಡುವೆ ನನಗೆ ಅಂತಹ ವ್ಯತ್ಯಾಸವೇನೂ ಕಾಣುತ್ತಿಲ್ಲ. ಸಾಮಾಜಿಕ ಸಮಾನತೆಯನ್ನು ಒಪ್ಪದ ವೈದಿಕ ಧಾರ್ಮಿಕತೆಯನ್ನು ಪ್ರತಿರೋಧಿಸಿದ 'ತಪ್ಪಿಗೆ' ದಲಿತರು 'ಅಸ್ಪೃಶ್ಯ'ಗೊಂಡರೆ, ಪಶ್ಚಿಮ ಪ್ರಣೀತವಾದ ಸುಖದ ಬೆನ್ನೇರಿದ ಆಧುನಿಕ ಯಂತ್ರನಾಗರೀಕತೆಯ ಹುಚ್ಚನ್ನು ಪ್ರತಿರೋಧಿಸಿದ 'ತಪ್ಪಿಗೆ' ಗಾಂಧಿ ಅಸ್ಪೃಶ್ಯಗೊಂಡಿದ್ದಾರೆ.

ಕರ್ನಾಟಕದ ದಲಿತ ಚಳುವಳಿಯ ನಿರೀಕ್ಷೆಗಳು ಹುಸಿಯಾದ ಮೇಲೆ, ನಾನು ಮಂಟೇಸ್ವಾಮಿ, ಮಲೈಮಹದೇಶ್ವರ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಅಲ್ಲಮ, ರವಿದಾಸ ಮುಂತಾದವರ ಆದಿಮ ಸಾಂಸ್ಕೃತಿಕ ಪರಂಪರೆಯ ಗುಂಗಿಗೆ ಬಿದ್ದ ಮೇಲೆ, ಗಾಂಧಿ ಈ ಪರಂಪರೆಯ ಮುಂದುವರಿದ ಸಮಕಾಲೀನ ಕೊಂಡಿಯಂತೆ ಕಾಣತೊಡಗಿದ್ದಾರೆ. ಶುದ್ಧ–ಅಶುದ್ಧ ಎನ್ನುವುದು ಇಲ್ಲ; ಘನ–ಮನ, ಒಳ–ಹೊರಗು ಎನ್ನುವುದು ಪ್ರತ್ಯೇಕಗಳಲ್ಲದ ಅಭಿನ್ನ ಸಮತಾ–ಏಕತಾ ವಾಸ್ತವ ಎನ್ನುವುದು ಈ ಪರಂಪರೆಯ ತಾತ್ವಿಕತೆಯಾಗಿದ್ದು, ಗಾಂಧಿ ತಮ್ಮ ಕಾಲಘಟ್ಟದಲ್ಲಿ ಸತ್ಯ–ಅಹಿಂಸೆ–ಅಪರಿಗ್ರಹಗಳ ಪ್ರತಿಪಾದನೆಯ ಮೂಲಕ ಇದೇ ತಾತ್ವಿಕತೆಯನ್ನು ಮತ್ತೊಂದು ರೀತಿಯಲ್ಲಿ ಮಂಡಿಸಿದರು ಎನಿಸುತ್ತದೆ.

ಸಾಮಾಜಿಕ ಸಮಾನತೆಯನ್ನು ಒಪ್ಪದ ವೈದಿಕ ಧಾರ್ಮಿಕತೆ ಮತ್ತು ಈ ಅವೈದಿಕ ಆದಿಮ ಧಾರ್ಮಿಕ ಸಾಂಸ್ಕೃತಿಕತೆಗಳ ನಡುವೆ ಆರಂಭದಿಂದಲೂ ಅವಿರತ ಸಂಘರ್ಷ ನಡೆಯುತ್ತಲೇ ಬಂದಿದೆ. ಬುದ್ಧಪೂರ್ವದ ಬೋಧಿಸತ್ವ, ಮತಂಗ ಮುನಿಯ ಸಂದರ್ಭದಲ್ಲಂತೂ ಈ ಸಂಘರ್ಷ ಯುದ್ಧೋಪಾದಿಯಲ್ಲೇ ನಡೆದಂತೆ ತೋರುತ್ತದೆ. ೧೨ನೇ ಶತಮಾನದ ಅಲ್ಲಮ ಹಾಗೂ ೧೪, ೧೫, ೧೬ ನೇ ಶತಮಾನದ ಎಂದು ಹೇಳಲಾಗುತ್ತಿರುವ ಮಲೈಮಹದೇಶ್ವರ, ಮಂಟೇಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ ಮುಂತಾದವರು ಪ್ರತಿಪಾದಿಸಿದ ಜಾತೀಯತೆಯ ಮೂಲವಾದ ಶುದ್ಧ–ಅಶುದ್ಧ ತಾತ್ವಿಕತೆಯನ್ನು ಧಿಕ್ಕರಿಸುವ ಆದಿಮ ಸಾಂಸ್ಕೃತಿಕ ಪರಂಪರಾ ಧಾರೆಗಳು ಈ ಮತಂಗ ಮುನಿ ಪ್ರಣೀತ ಆದಿಮ ಧಾರ್ಮಿಕ–ಸಾಂಸ್ಕೃತಿಕ ಧಾರೆಗಳೇ ಆಗಿವೆ. ವೈದಿಕ ಧಾರ್ಮಿಕತೆ ವಿರುದ್ಧ ಮತಂಗ ಮುನಿ ನಡೆಸಿದ ರೋಚಕ ಧಾರ್ಮಿಕ ಸಮರದ ವಿವರಗಳು ಬುದ್ಧನ ಜಾತಕ ಕಥೆಗಳಲ್ಲಿ ದಾಖಲೆಗೊಂಡಿವೆ. ಹೀಗೆ ಅವಿರತವಾಗಿ ನಡೆಯುತ್ತಲೇ ಬಂದ ಸಂಘರ್ಷ ಯಂತ್ರನಾಗರಿಕತೆ ಅಡಿಯಿಟ್ಟು, ಕ್ರಮೇಣ ಅದೇ ಆಧುನಿಕಶಾಹಿಯಾಗಿ ಬೆಳೆದು, ಇದು ವೈದಿಕಶಾಹಿಯ ಜೊತೆ ಒಂದಾದ ಆಧುನಿಕ ಸಂದರ್ಭದಲ್ಲಿ ಮಾತ್ರ ಮಸುಕಾದಂತೆ ಕಂಡಿತು. ಆದರೆ ಅಸಮಾನತೆ, ವಿಕ್ಷಿಪ್ತತೆಗಳ ಮೂಲವಾದ ಪಶ್ಚಿಮದ ಆಧುನಿಕ ಯಂತ್ರನಾಗರಿಕತೆ ವಿರುದ್ಧ ಗಾಂಧಿ ಸಾರಿದ ನೈತಿಕ ಸಮರದ ಮೂಲಕ ಈ ಆದಿಮ ಪರಂಪರಾ ತಾತ್ವಿಕತೆ ಸಮಕಾಲೀನ ಸಂದರ್ಭಕ್ಕೂ ದಕ್ಕುವಂತೆ ವಿಭಿನ್ನ ಸ್ವರೂಪದಲ್ಲಿ ಮತ್ತೆ ಪುನರುಜ್ಜೀವಗೊಂಡಿತು.

ದಲಿತರು ಅಸ್ಪೃಶ್ಯರಾದದ್ದಕ್ಕೆ ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು, ಚಿಂತಕರು ಅನೇಕ ಕಾರಣಗಳನ್ನು ನೀಡಿದ್ದಾರೆ. ಆದರೆ ಇವರು ಶುದ್ಧ–ಅಶುದ್ಧತೆಗಳನ್ನು ಮೀರಿದ ತಾತ್ವಿಕತೆಯ ಧಾರ್ಮಿಕ–ಸಾಂಸ್ಕೃತಿಕ ಪ್ರತಿಪಾದನೆಯ ಆದಿಮ ಕಲಾಕಾರ ಸಮುದಾಯವಾಗಿದ್ದುದೇ ಇವರನ್ನು ಹೀಗೆ ಅಸ್ಪೃಶ್ಯರನ್ನಾಗುವಂತೆ ಮಾಡಿತು ಎನಿಸುತ್ತದೆ! ಚಮ್ಮಾರಿಕೆ, ಕಮ್ಮಾರಿಕೆ, ನೇಕಾರಿಕೆ ಮುಂತಾದ ಬಿಡುವಿಗೆ ಅವಕಾಶವುಳ್ಳ ಕುಶಲ ಕಸುಬುದಾರಿಕೆಗಳನ್ನು ಮಾಡುತ್ತಿದ್ದ ದಲಿತರು ಸಹಜವಾಗಿಯೇ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಪ್ರಕಾರಗಳಲ್ಲೂ ಪರಿಣತಿ ಹೊಂದಿದ್ದ ಆದಿಮ ಕಲಾಕಾರರೂ ಆಗಿದ್ದರು. ಈ ಎಲ್ಲಾ ಕಲಾಪ್ರಕಾರಗಳೂ ಮೂಲಭೂತವಾಗಿ ಅನುಭವಗಳ –ನೆನಪುಗಳ ಸೃಜನಶೀಲ ತಾತ್ವಿಕ ಲೋಕವ್ಯವಹಾರಕ್ಕೆ ಸಂಬಂಧಿಸಿದ್ದಾಗಿರುವುವು. ಆದುದರಿಂದ ದಲಿತರ ಇಂತಹ ಕಲಾಲೋಕದಲ್ಲಿ ಶುದ್ಧ–ಅಶುದ್ಧತೆಗಳನ್ನು ಮೀರಿದ ಆದಿಮ ಧಾರ್ಮಿಕ ಸಾಂಸ್ಕೃತಿಕತೆಯೇ ಅಭಿವ್ಯಕ್ತಿಗೊಳ್ಳುತ್ತಿದ್ದುದು ಸಹಜವೇ ಆಗಿರುತ್ತಿತ್ತು. ಈ ಮೂಲಕ ಈಗಿನ ದಲಿತರು ತಮ್ಮ ಆ ಹಿಂದಿನ ಪೂರ್ವಜರ ಮೂಲಕ ಇಡೀ ಸಮಾಜದ ಧಾರ್ಮಿಕ ಸಾಂಸ್ಕೃತಿಕ ನಾಯಕತ್ವವನ್ನೂ ತಮ್ಮದನ್ನಾಗಿಸಿಕೊಂಡಿದ್ದರು. ಈ ಸಂದರ್ಭಕ್ಕೆ 'ಅಧಿಕಾರಕ್ಕಾಗಿ ಧಾರ್ಮಿಕತೆ' ತತ್ವವನ್ನನುಸರಿಸುತ್ತಿದ್ದ ವೈದಿಕಶಾಹಿಯು ಸಮಾಜದ ಎಲ್ಲಾ ವರ್ಗಗಳನ್ನೂ ಧಾರ್ಮಿಕ ದಬ್ಬಾಳಿಕೆಯಿಂದ ತನ್ನ ಕೈವಶಮಾಡಿಕೊಳ್ಳಲು ಸಾಧ್ಯವಾಗಿತ್ತು. ಆದರೆ, ದಲಿತರ ವಿಷಯದಲ್ಲಿ ಅದು ಸಾಧ್ಯವಾಗಲೇ ಇಲ್ಲ. ಇವರ ಮೇಲೆ ದೈಹಿಕ ಭೌತಿಕ ದಬ್ಬಾಳಿಕೆ ದೌರ್ಜನ್ಯಗಳು ನಡೆದಿರಬಹುದಾದರೂ ಇವರು ವ್ಯವಹರಿಸುತ್ತಿದ್ದ ಅನುಭವಗಳ–ನೆನಪುಗಳ ಕಲಾಲೋಕವನ್ನು ಧ್ವಂಸಮಾಡಲು ಯಾರಿಂದಲೂ ಯಾವುದರಿಂದಲೂ ಸಾಧ್ಯವಿರಲಿಲ್ಲ. ನೆನಪುಗಳನ್ನು ಕೊಲ್ಲಲಾಗುವುದಿಲ್ಲ. ಆದ್ದರಿಂದ ಇವರ ಮೇಲೆ ನಡೆದಿರಬಹುದಾದ ದಬ್ಬಾಳಿಕೆ, ದೌರ್ಜನ್ಯಗಳೂ ಇವರ ಕಲಾಲೋಕದಲ್ಲಿ ಸೃಜನಶೀಲ ಅಭಿವ್ಯಕ್ತಿಗೆ ವಸ್ತುಗಳಾಗತೊಡಗಿ, ದಲಿತರು ವೈದಿಕರ ಕಣ್ಣಲ್ಲಿ ರಿಪೇರಿಮಾಡಲಸಾಧ್ಯರಾಗಿ(ಇನ್‌ಕಾರಿಜಬಲ್) ಆಗಿಹೋದರು. ವೈದಿಕಶಾಹಿಗೆ ಈಗ ಅನ್ಯಮಾರ್ಗವಿಲ್ಲದೆ ಒಳದಾರಿಗಳನ್ನು ಹಿಡಿಯಿತು. ಆದಿಮ ಭಾರತೀಯ ಧಾರ್ಮಿಕ ಸಾಂಸ್ಕೃತಿಕ ವಿವರಗಳನ್ನು ಅಪಹರಿಸಿ ಅವುಗಳಿಗೆ 'ಶುದ್ಧತೆ'ಯ ಬಣ್ಣಹಚ್ಚಿ ತನ್ನದಾಗಿಸಿಕೊಳ್ಳತೊಡಗಿತು. ಜೊತೆಗೆ 'ಇನ್‌ಕಾರಿಜಿಬಲ್' ದಲಿತರನ್ನು ಸಮಾಜದ ಮುಖ್ಯವಾಹಿನಿಯಿಂದ ಕಿತ್ತು ಕತ್ತರಿಸಿ ಊರಿಂದ ಆಚೆ ಎಸೆದು 'ಅಸ್ಪೃಶ್ಯ'ರನ್ನಾಗಿ ಮಾಡಲಾಯಿತು ಎನಿಸುತ್ತಿದೆ.

ಆದರೆ ಆದಿಮ ಕಲಾಲೋಕದಲ್ಲಿ ದಲಿತರು ಅಸ್ಪೃಶ್ಯಗೊಳ್ಳಲೇ ಇಲ್ಲ! ವೈದಿಕಶಾಹಿಯ ಹತಾಶೆಯ ಈ ಕೃತ್ಯಕ್ಕೆ ನಕ್ಕು ಕಲಾಲೋಕದ ನೆನಪಿನ



ಮಹಾಯಾನ ಮುನ್ನಡೆದಂತೆ ತೋರುತ್ತದೆ. ಇಲ್ಲದಿದ್ದರೆ ಮಂಟೇಸ್ವಾಮಿ, ಮಲೈಮಹದೇಶ್ವರದಂತಹ ಆದಿಮ ಜನಪದ ಮಹಾಕಾವ್ಯಗಳು ನಮಗೆ ದಕ್ಕುತ್ತಿದ್ದುವಾದರೂ ಹೇಗೆ? ಇನ್ನು ಜಂಬುದ್ವೀಪದಾದ್ಯಂತ ಹೀಗೆ ತುಂಬಿ ತುಳುಕುತ್ತಿರುವ ಇಂತಹ ನೆನಪಿನ ಜನಪದ ಕಲಾಕೋಶಗಳನ್ನು ಬಿಡಿಸಿ ನೋಡಿದವರಾರು? ಹೀಗೆ ವೈದಿಕಶಾಹಿಯನ್ನು ಪ್ರತಿರೋಧಿಸಿದ ತಪ್ಪಿಗೆ ದಲಿತರೂ, ಆಧುನಿಕಶಾಹಿಯನ್ನು ಪ್ರತಿರೋಧಿಸಿದ ತಪ್ಪಿಗೆ ಗಾಂಧಿಯೂ 'ಅಸ್ಪೃಶ್ಯ'ಗೊಂಡು ಒಂದುಗೂಡಿದ್ದು ಮಾತ್ರ ನನಗಂತೂ ಆದಿಮ ಭಾರತೀಯ ಧಾರ್ಮಿಕ-ಸಾಂಸ್ಕೃತಿಕತೆಗಳ ಮಹಾಕೂಟದಂತೆ ಕಾಣುತ್ತದೆ. ಈ ಮಹಾಕೂಟದ ನಂತರದ ಮಹಾಸ್ಫೋಟವನ್ನು ಗ್ರಹಿಸಿಯೊ ಏನೋ ಮತ್ತೊಂದು ಕಡೆ ವೈದಿಕಶಾಹಿ ಮತ್ತು ಆಧುನಿಕಶಾಹಿಗಳು ಒಂದಾಗುವುದೂ ನಡೆಯಿತು.

ಅಲ್ಲದೆ, ಒಂದಾಗಿ ಗಾಂಧಿಯನ್ನು ದೈಹಿಕವಾಗಿ ಕೊಲ್ಲುವುದೂ ನಡೆದುಹೋಯಿತು.

ವೈದಿಕಶಾಹಿಯ ವಿರುದ್ಧ ಬೌದ್ಧಿಕ ಸಮರವನ್ನೇ ಸಾರಿದ, ಅಪ್ರತಿಭ ಸಾಂಸ್ಕೃತಿಕ ಒಳನೋಟಗಳಿದ್ದ ಡಾ. ರಾಮಮನೋಹರ ಲೋಹಿಯಾ ಕೂಡ ಇಂತಹ ಸತ್ಯ ಸಮತೆ ಏಕತೆಗಳ ಆದಿಮ ಭಾರತೀಯ ವೈಚಾರಿಕತೆಯ ಪ್ರತೀಕದಂತಿದ್ದ ಗಾಂಧಿಯ ತಾತ್ವಿಕ ಸಹಚರರಾಗದೇ ಹೋದದ್ದು ನನಗೆ ಸೋಜಿಗವೆನಿಸುತ್ತದೆ. ಅಥವಾ ಇವರ ಪಶ್ಚಿಮ ಕನ್ನಡಕದ ನೋಟ ಇವರ ಒಳನೋಟಗಳನ್ನೂ ಊನಗೊಳಿಸಿಬಿಟ್ಟಿತ್ತೊ ಏನೋ! ಅಂತೂ ಗಾಂಧಿಯನ್ನು ಇಂಪ್ರೂವೈಸ್ ಮಾಡುವ ಗೋಜಿಗೆ ಹೋಗದೆ ಗಾಂಧಿಯ ಬೇಷರತ್ ಸಾಂಸ್ಕೃತಿಕ ಸಹಚರರಾಗಿ ಲೋಹಿಯಾ ಉಳಿದಿದ್ದರೆ ಅವರು ಗಾಂಧಿಯ ನಂತರದ ಮಹಾ ಭಾರತೀಯ ನಾಯಕರಾಗಿ ನಮಗೆ ದಕ್ಕುತ್ತಿದ್ದರು. ಜೊತೆಗೆ ಲೋಹಿಯಾ ಪ್ರಣೀತವಾದ ಸಮಾಜವಾದಿ ಪ್ರಭುತ್ವ ದೇಶದಲ್ಲಿ ಅಜರಾಮರಗೊಳ್ಳುತ್ತಿತ್ತು; ಹಾಗೇ ದಲಿತರು ಮತ್ತು ಗಾಂಧಿ ಹೀಗೆ ಅಸ್ಪೃಶ್ಯಗೊಳ್ಳುವುದು ತಪ್ಪುತ್ತಿತ್ತು ಎನಿಸುತ್ತದೆ. ಲೋಹಿಯಾ ಅವರದು ಹೀಗೆ ಪಶ್ಚಿಮದ ಕನ್ನಡಕ ಮಾತ್ರವಾಗಿದ್ದರೆ, ಡಾ. ಬಿ. ಆರ್. ಅಂಬೇಡ್ಕರ್ ಅವರು ಪೂರ್ಣವಾಗಿಯೇ ಪಶ್ಚಿಮವಾಗಿದ್ದರು. ದಲಿತರ ಬಗೆಗಿನ ಇವರ ತೀವ್ರ ಕಳಕಳಿ, ಆಳವಾದ ಅಧ್ಯಯನ ವಿಶ್ಲೇಷಣೆಗಳೂ ಗಾಂಧಿ ಮತ್ತು ದಲಿತರ ನಡುವಿನ ಸಾವಯವ ಸಾಂಸ್ಕೃತಿಕ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡದೇ ಹೋದದ್ದು ನನ್ನನ್ನು ಮಹಾಸೋಜಿಗವಾಗಿ ಕಾಡುತ್ತಿದೆ.



ಇಂತಹ ಭಾರತೀಯ ಸಾಂಸ್ಕೃತಿಕ ತಾತ್ವಿಕತೆಯ ಕೊರತೆಯ ಹಿನ್ನೆಲೆಯಲ್ಲಿ, ಗಾಂಧಿ ದಲಿತರನ್ನು 'ಹರಿಜನರು' ಎಂದು ಕರೆದು ಪ್ರಗತಿಪರರಿಂದ ಅಪಹಾಸ್ಯಕ್ಕೊಳಗಾಗಿರುವುದೂ, ಜೀವವನ್ನು ಪಣಕ್ಕಿಟ್ಟು ಉಪವಾಸ ಸತ್ಯಾಗ್ರಹದ ಮೂಲಕ ಪೂನಾ ಒಪ್ಪಂದವನ್ನು ಪ್ರತಿರೋಧಿಸಿ, ದಲಿತರಿಂದಲೂ 'ದಲಿತರ ಆಜನ್ಮ ಶತ್ರು' ಎಂಬಂತೆ ಬಿಂಬಿತವಾಗುತ್ತಿರುವುದೂ ಸಹಜವಾದ ಭಾರತೀಯ ಸಾಂಸ್ಕೃತಿಕ ಅಧಃಪತನದಂತೆ ಕಾಣುತ್ತಿದೆ.

ಒಂದು ಪಕ್ಷ ಪೂನಾ ಒಪ್ಪಂದಕ್ಕೆ ಗಾಂಧಿ ಪ್ರತಿರೋಧಿಸದೆ, ಅಂಬೇಡ್ಕರ್ ಅಭಿಲಾಷೆಯಂತೆ, ಬ್ರಿಟಿಷರ ಒಳಆಶೆಯಂತೆ ಅದು ನಡೆದೇಬಿಟ್ಟಿತ್ತು ಎಂದುಕೊಳ್ಳೋಣ. ಆಗ ಏನಾಗುತ್ತಿತ್ತು? ದಲಿತರು ತಮ್ಮ ಆದಿಮ ಭಾರತೀಯ ಸಾಂಸ್ಕೃತಿಕ ಬೇರುಗಳನ್ನು ತಾವೇ ತಮ್ಮ ಕೈಯಾರ ಕಡಿದುಕೊಂಡಂತೆ ಆಗುತ್ತಿತ್ತು! ಅಂದರೆ ದಲಿತರ ಸಾಂಸ್ಕೃತಿಕ ಆತ್ಮಹತ್ಯೆ ನಡೆದುಹೋಗುತ್ತಿತ್ತು! ಅಂದು ನಿಜಕ್ಕೂ ಸಮಾಜದ ಮುಖ್ಯವಾಹಿನಿಯಿಂದ ದಲಿತರು ಪ್ರತ್ಯೇಕಗೊಂಡು ಸ್ವಯಂಕೃತವಾಗಿ ಶಾಶ್ವತವಾಗಿ ಅಸ್ಪೃಶ್ಯಗೊಳ್ಳುತ್ತಿದ್ದರಷ್ಟೆ!

ಗಾಂಧಿ ಮಹಾತ್ಮನಿಗೆ ನಮಸ್ಕಾರ.



**(ಸಮಾಜವಾದಿ ಯುವಜನ ಸಭಾದ ಮೂಲಕ ದಲಿತ ಸಂಘರ್ಷ ಸಮಿತಿ ಸೇರಿ ಅದರ ಹೋರಾಟಗಳ ಮುಂಚೂಣಿ ಚಿಂತಕ ಮತ್ತು ನಾಯಕರಲ್ಲೊಬ್ಬರಾಗಿ ಮೂಡಿದ ಪ್ರೊ. ಎಚ್. ಗೋವಿಂದಯ್ಯ ಕವಿಯೂ ಹೌದು. ಮೈಸೂರು ವಿಶ್ವವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿ ಈಗ ಇದೆಲ್ಲದರಿಂದ ದೂರಾಗಿ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದಾರೆ. .)**

---

## ಎರಡು ಪದ್ಯಗಳು

### ಗಾಂಧಿ

ಇಲ್ಲವೆಂದರೂ
ಇಲ್ಲವಾಗುವುದೇ?

ನೆನಪು-
ಹುಲ್ಲು ಗರಿಕೆಯಂತೆ
ಹಸಿರಾಗಿದೆ

ಆ ಚಿತ್ರ ಅವನದೇ
ಮಳೆಬಿಲ್ಲಿನಂತೆ
ಭರತಖಂಡದ ಮೇಲೆ ಬಾಗಿದೆ
ತಂಗಾಳಿ ಅದನ್ನು ತೂಗಿದೆ.

ಕಣ್ಣೊಳಗಿನ ಮಿಂಚು
ಭೂಮಂಡಲವ ಬೆಳಗಿದೆ
ನಿಸ್ವಾರ್ಥ ನಗೆ
ಮೂಲೆ ಮೂಲೆಯನೂ ತಾಕಿದೆ

ಸರಕು ಸಂತೆಯಲಿ
ಗೌಜು ಗದ್ದಲದಲಿ
ತುಸು ನೂಲ
ತಾನೇ ನೂಲುತಿದೆ ಚರಕ



'ಅರಿವೆ' ಅರಿವೆಂಬ ರೂಪಕ
ಅಳಿಸಲಾಗದು ಅಚ್ಚೊತ್ತಿದಂತಿದೆ

ಅಷ್ಟು ಸುಲಭವಾಗಿ
ಆರದು
ಅವನು ಹಚ್ಚಿದ ದೀವಿಗೆ

**-ಸವಿತಾ ನಾಗಭೂಷಣ**

### ಗಾಂಧಿಯ ಮೆಟ್ಟುಗಳು

ನೂಲುವ ವೃತ್ತಿಯ
ಮೋಹನದಾಸ ಕರಮಚಂದ ಗಾಂಧಿ
ತಾನೇ ತಯಾರಿಸಿ ತುಳಿದ
ಮೆಟ್ಟುಗಳು ಸವೆಯುತ್ತ ಹೋದಂತೆ
ವೈಭವದ ಬ್ರಿಟಿಷ್ ಸಾಮ್ರಾಜ್ಯವೂ ಸವೆದದ್ದು;

ಕೊನೆಯ ದಿನ ಆ ಜುಗ್ಗ ಮೆಟ್ಟಿದ್ದ
ಸವೆಯಬಹುದಾದ ಮೆಟ್ಟುಗಳು
ಹಾಗೇ ಇವೆ.

**-ಯು.ಆರ್. ಅನಂತಮೂರ್ತಿ**

ಚೀನಾದ ಪ್ರಗತಿ ಮೋದಿಯವರನ್ನು ಪ್ರಭಾವಿಸಿದೆ, ಆದರೆ ಅದಕ್ಕೆ ತೆರಬೇಕಾದ ಬೆಲೆ ಎಷ್ಟು?

# SEZwan ತಿನಿಸಿನ ಕಾಡುವ ರುಚಿಯೂ... –

–ಪಲ್ಲವಿ ಅಯ್ಯರ್
(ಕನ್ನಡಕ್ಕೆ: ಟಿ.ಎಲ್ ರೇಖಾಂಬ)



ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ನಾನು ಮೊಟ್ಟಮೊದಲ ಬಾರಿಗೆ ಮತ್ತು ಅದೊಂದೇ ಬಾರಿಗೆ ಭೇಟಿಯಾದದ್ದು ೨೦೦೬ರಲ್ಲಿ ಚೀನಾದ ರಾಜಧಾನಿಯಾದ ಬೀಜಿಂಗ್‌ನಲ್ಲಿ. ಅವರು ಗುಜರಾತಿನ ಮುಖ್ಯಮಂತ್ರಿಯಾಗಿ ಚೀನಾದಲ್ಲಿ ಬಿರುಸಿನ ಪ್ರವಾಸ ಕೈಗೊಂಡಿದ್ದ ಆ ಸಂದರ್ಭದಲ್ಲಿ ನಾನು ಚೀನಾದ ರಾಜಧಾನಿಯಲ್ಲಿ ಪತ್ರಕರ್ತೆಯಾಗಿ ಕೆಲಸ ಮಾಡುತ್ತಿದ್ದೆ. ಮೋದಿಯವರು ಪದೇ ಪದೇ ಭೇಟಿಕೊಡಲಾರಂಭಿಸಿದ್ದ ಚೀನಾ ದೇಶಕ್ಕೆ ಆಗ ಇದ್ದದ್ದು ಒಂದೇ ಗುರಿ–'ವಿಶೇಷ ಆರ್ಥಿಕ ವಲಯ'(SEZ)ಗಳನ್ನು ಸ್ಥಾಪಿಸುವುದು.

ಬಹು ಆಕರ್ಷಣೀಯವಾಗಿ ಕಾಣುತ್ತಿದ್ದ ದಕ್ಷಿಣ ಚೀನಾದ ಪ್ರಮುಖ ವಿಶೇಷ ಆರ್ಥಿಕ ವಲಯ(SEZ)ವಾದ ಶೆನ್‌ಜ಼ೆನ್‌ಗೆ ಭೇಟಿಕೊಟ್ಟ ನಂತರ ಮೋದಿಯವರು 'ನಮ್ಮ ಗುಜರಾತಿನ ವಿಶೇಷ ಆರ್ಥಿಕ ವಲಯಗಳಲ್ಲೂ ಇದೇ ರೀತಿಯ ವಿಶ್ವ ದರ್ಜೆಯ ಮೂಲಸೌಕರ್ಯಗಳನ್ನು ಒದಗಿಸುವುದು ಮತ್ತು ಬಂಡವಾಳವನ್ನು ಆಕರ್ಷಿಸುವುದು ನನ್ನ ಗುರಿ' ಎಂದು ಬಹಳ ಉತ್ಸುಕರಾಗಿ ವಿವರಿಸುತ್ತಿದ್ದಾಗ ಅವರ ಕಣ್ಣುಗಳು ಮಿಂಚುತ್ತಿದ್ದವು. ಅವರ ಈ ಉತ್ಸುಕತೆಯನ್ನು ನಾನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲವಳಾಗಿದ್ದೆ. ಅಲ್ಲಿನ ಮಿನುಗುವ ಗಗನಚುಂಬಿ ಕಟ್ಟಡಗಳೂ, ಬಹು ಚತುಷ್ಪಥ ಹೆದ್ದಾರಿಗಳೂ ನಾನು ಕಂಡ ಹಾಗೆ ಅಲ್ಲಿಗೆ ಭೇಟಿಕೊಟ್ಟ ಪ್ರತಿಯೊಬ್ಬ ಭಾರತೀಯನೂ ಕರುಬುವಂತೆ ಮಾಡುತ್ತಿದ್ದವು.

೧೯೮೦ರಲ್ಲಿ ಶೆನ್‌ಜ಼ೆನ್ ಸುಮಾರು ೨೪ ಸಾವಿರ ಜನಸಂಖ್ಯೆಯ, ಮೀನುಗಾರಿಕೆಯೇ ಪ್ರಮುಖ ಕಸುಬಾಗಿದ್ದ ಒಂದು ಪುಟ್ಟ ಹಳ್ಳಿಯಾಗಿತ್ತು. ಮೋದಿ ಅಲ್ಲಿಗೆ ಭೇಟಿ ಕೊಡುವ ಹೊತ್ತಿಗೆ ಸುಮಾರು ಐದು ದಶಲಕ್ಷ ಜನಸಂಖ್ಯೆಯ ಆಶ್ರಯದಾಣವಾಗಿದ್ದು, ಅತಿಹೆಚ್ಚು ಮಿಗತೆಯ ತಲಾ ಆದಾಯ ಹೊಂದಿದ್ದ, ಚೀನಾದಲ್ಲೇ ಎರಡನೇ ಅತಿ ಹೆಚ್ಚು ಚಟುವಟಿಕೆಯ ಸರಕು ಸಾಗಣೆ ಹಡಗುಗಳ ಬಂದರು ಎಂದು ಹೆಮ್ಮೆ ಪಡುತ್ತಿದ್ದ ನಗರವಾಗಿತ್ತು.

ಬಡವಂ ಬಲ್ಲಿದನಾದ ಕಥೆ ಈ ಶೆನ್‌ಜ಼ೆನ್‌ನದ್ದು ಮಾತ್ರವಾಗಿರಲಿಲ್ಲ. ಇದರ ಜೊತೆಗೇ ಚೀನಾದ ಪೂರ್ವ ಕರಾವಳಿಯುದ್ದಕ್ಕೂ ಹರಡಿದ್ದ ಹಳ್ಳಿಗಳ ಅದೃಷ್ಟವೂ ಖುಲಾಯಿಸಿದಂತಿತ್ತು. ಕಡಿಮೆ ವೇತನ, ಹೇರಳವಾಗಿದ್ದ ಕಾರ್ಮಿಕ ಬಲ, ಸರ್ಕಾರದ ಬಂಡವಾಳ ಸ್ನೇಹಿ ನೀತಿಗಳು, ಇವೆಲ್ಲವೂ ಕಮ್ಯುನಿಸ್ಟ್ ದೇಶವೆಖಇಚ)ಂದು ಕಾಣಿಸಿಕೊಳ್ಳುತ್ತಿದ್ದ ಚೀನಾವನ್ನು ಗುರುತಿಸಲಾಗದಷ್ಟು ಬದಲಾಯಿಸಿಬಿಟ್ಟಿತ್ತು. ಅದು ಸರ್ಕಾರವೇ ಮುನ್ನಡೆಸಿದ ದೈತ್ಯ ಬಂಡವಾಳಶಾಹಿಯಾಗಿ ಪರಿವರ್ತಿತವಾಗಿತ್ತು.

೨೦೦೧–೨೦೦೯ರ ನಡುವೆ ಅಲ್ಲಿಂದ ವರದಿ ಮಾಡುತ್ತಿದ್ದ ನಾನು ಕಂಡಂತೆ ಚೀನಾವು ಹಲವು ಉತ್ಕೃಷ್ಟತೆಗಳ ನಾಡಾಗಿ ಮತ್ತು ಅದ್ಭುತವಾದ ತಯಾರಿಕಾ ಶಕ್ತಿಯಾಗಿ ಏರುಗತಿಯಲ್ಲಿತ್ತು. ಜಗತ್ತಿನ ಅತಿದೊಡ್ಡ ಅಣೆಕಟ್ಟು, ಅತಿದೊಡ್ಡ ವಿಮಾನ ನಿಲ್ದಾಣ ಮತ್ತು ಮ್ಯೂಸಿಯಂ, ಅತಿ ಎತ್ತರದ ರೈಲ್ವೇ ಮಾರ್ಗಗಳನ್ನು ಹೊಂದಿರುವ ದೇಶವೆಂದು ಹೆಮ್ಮೆ ಪಡುತ್ತಿತ್ತು. ೭೦೦ ಹಾಸಿಗೆಗಳ ಆಸ್ಪತ್ರೆಯೊಂದು ಒಂದೇ ವಾರದಲ್ಲಿ ಎದ್ದುನಿಂತಿದ್ದನ್ನು ನೋಡಿ ಅಚ್ಚರಿಯಾಗಿತ್ತು. ಆ ದೇಶದಲ್ಲೇನೋ ಒಂದು ಮಾಂತ್ರಿಕತೆ ಇದೆ ಎನಿಸುತ್ತಿತ್ತು. ತಯಾರಿಕೆಯಲ್ಲಿ ಚಮತ್ಕಾರವನ್ನು ಮಾಡಬಲ್ಲ ಅತೀಂದ್ರಿಯ ಶಕ್ತಿಗಳುಳ್ಳ ನಾಯಕನೊಬ್ಬ ಕಾಮಿಕ್ ಪುಸ್ತಕಗಳ ಪುಟಗಳಿಂದ ಎದ್ದು ಬಂದು ಜಗತ್ತಿನೆಲ್ಲೆಡೆ ತನ್ನ ದೈತ್ಯ ಹೆಜ್ಜೆಗಳನ್ನಿಡುತ್ತಾ, ಹೆಜ್ಜೆ ಇಟ್ಟಲ್ಲೆಲ್ಲ ರಫ್ತಿನ ಸರಕನ್ನು ತುಂಬುತ್ತಾ ಸಾಗುತ್ತಿರುವಂತೆ ಭಾಸವಾಗುತ್ತಿತ್ತು.

ಎತ್ತಿನಗಾಡಿ ಮತ್ತು ಸೈಕಲ್‌ಗಳಿಂದ ತುಂಬಿದ್ದ ಬಡ ಮತ್ತು ಬಹುಮಟ್ಟಿಗೆ ಕೃಷಿಕ ದೇಶವಾದ ಚೀನಾವು ಜಗತ್ತಿನ ಕಾರ್ಖಾನೆಯಾಗಿ ರೂಪಾಂತರ ಗೊಂಡದ್ದು ಕೇವಲ ೨೫ ವರ್ಷಗಳ ಅಂತರದಲ್ಲಿ! ಇದು ಸಹಜ ಮತ್ತು ಶಾಂತವಾದದ್ದೇನಾಗಿರಲಿಲ್ಲ. ಇದರ ವೇಗ ಮತ್ತು ವ್ಯಾಪ್ತಿಗಳು ಕ್ರಾಂತಿಕಾರಿಯೂ ಹಿಂಸಾತ್ಮಕವೂ ಆಗಿತ್ತು. ಆದರೂ ಅದು ಇತರ ಕ್ರಾಂತಿಗಳಂತೆ ರಕ್ತದ ಕೋಡಿಯನ್ನು ಹರಿಸಲೂ ಇಲ್ಲ, ಆಳುವ ಶಕ್ತಿಯನ್ನು ಉರುಳಿಸಲೂ ಇಲ್ಲ. ಬದಲಿಗೆ, ಅದು ಆಡಳಿತಾರೂಢ CCP(Communist party of china)ಯೇ ನಿರ್ದೇಶಿಸಿದ ಕ್ರಾಂತಿಯಾಗಿತ್ತು. ೧೯೭೦ರ ದಶಕದ ಕೊನೆಯ ನಂತರದಲ್ಲಿ ದೇಶದ ನಾಯಕರು ಮಾವೋ ತತ್ವಗಳನ್ನು ಮುಂದುವರೆಸುವುದನ್ನು ನಿಲ್ಲಿಸಿದರಲ್ಲದೆ ತಮ್ಮ ಪಕ್ಷದಲ್ಲಿ ಆ ಮೊದಲಿದ್ದ ಸಿದ್ಧಾಂತಗಳನ್ನು ನೆಲಸಮ ಮಾಡಿದರು. ದೃಢ ನಿಶ್ಚಯದೊಂದಿಗೆ ಮಾರುಕಟ್ಟೆಯನ್ನು ತಬ್ಬಿಕೊಂಡರು. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಖಾಸಗೀಕರಣ, ಕಾರ್ಮಿಕ ಸುಧಾರಣೆಗಳಿಂದಾಗಿ 'ಕಬ್ಬಿಣದ ಅನ್ನದ ಬಟ್ಟಲು' ಎಂದು ಕರೆಯಲ್ಪಡುತ್ತಿದ್ದ ಜೀವನ ಪರ್ಯಂತದ ಉದ್ಯೋಗ ವ್ಯವಸ್ಥೆಯಾಗಿದ್ದ ಸರ್ಕಾರೀ ಉದ್ದಿಮೆಗಳು ಬದಲಾದದ್ದು, 'ವಿಶೇಷ ಆರ್ಥಿಕ ವಲಯ'ಗಳನ್ನು ಸ್ಥಾಪಿಸಿದ್ದು, ರಫ್ತು ರಿಯಾಯಿತಿಗಳನ್ನು ಘೋಷಿಸಿದ್ದು, ಮೂಲಸೌಕರ್ಯ ಅಭಿವೃದ್ಧಿಯ ಮೇಲೆ ಭಾರೀ ಹೂಡಿಕೆಯನ್ನು ಮಾಡಿದ್ದು, ಇವುಗಳು ರಾಷ್ಟ್ರ ನಾಯಕರ ಈ ಹೊಸ ನಿಲುವುಗಳಿಂದುಂಟಾದ ಕೆಲವು ಪ್ರಮುಖ ಬದಲಾವಣೆಗಳು.

ಬಹುತೇಕ ಎಲ್ಲ ಕ್ರಾಂತಿಗಳಂತೆ ಈ ಕ್ರಾಂತಿಯೂ ಬಹಳ ದೊಡ್ಡ ಬೆಲೆಯನ್ನು ತೆರಬೇಕಾಯಿತು. ಯಾವುದು ಜಗತ್ತಿನ ಅತ್ಯಂತ ಸಮಾನತಾವಾದಿ ರಾಷ್ಟ್ರಗಳಲ್ಲೊಂದು(ಕೊನೇ ಪಕ್ಷ ತಾತ್ವಿಕ ಬದ್ಧತೆಯಾಗಿ) ಎಂದು ಕರೆಸಿಕೊಂಡಿತ್ತೋ ಅಲ್ಲಿ ಅದು ಅಸಮಾನತೆಯ ದೊಡ್ಡ ಕಂದರಗಳನ್ನೇ ಸೃಷ್ಟಿಸಿತ್ತು. ಅತ್ಯಂತ ಕಡಿಮೆ ಅಥವಾ ಯಾವುದೇ ಭದ್ರತೆಯಿಲ್ಲದೇ ಲಕ್ಷ ಲಕ್ಷ ಕಾರ್ಮಿಕರನ್ನು ಸರ್ಕಾರೀ ಸ್ವಾಮ್ಯದ ಉದ್ದಿಮೆಗಳಿಂದ ವಜಾಗೊಳಿಸಲಾಯಿತು. ಯಾವ ಭೂಸ್ವತ್ತುಗಳನ್ನು ಮರುಹಂಚಿಕೆ ಮಾಡಲು ಉಳ್ಳವರಿಂದ ವಶಪಡಿಸಿಕೊಳ್ಳಲಾಗುತ್ತಿತ್ತೋ ಅಂತಹ ಆಸ್ತಿಯನ್ನು ಇಂದು ಬಡವರಿಂದ ಕಿತ್ತುಕೊಂಡು ರಿಯಲ್ ಎಸ್ಟೇಟ್ ಧಣಿಗಳಿಗಳಿಗೆ ಕೊಡುವಂತಾಯಿತು. ವ್ಯಾಪಕ ಭ್ರಷ್ಟಾಚಾರ ಮತ್ತು ಕ್ಷೀಣಿಸುತ್ತ ಬಂದ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಯ ಮೇಲಿನ ಹೂಡಿಕೆ ಸಮಾಜದ ಒಂದು ದೊಡ್ಡ ಜನಸಮೂಹದ ಮೇಲೆ ಹಾನಿಕಾರಕವಾಗಿಯೂ, ಅನೇಕ ಕಡೆ ವಿಧ್ವಂಸಕವೂ ಆದ ದುಷ್ಪರಿಣಾಮಗಳನ್ನುಂಟು ಮಾಡಿತ್ತು.

ತಯಾರಿಕೆಯ ಉತ್ಕರ್ಷದಿಂದ ಪರಿಸರದ ಮೇಲುಂಟಾದ ಪರಿಣಾಮಗಳು ಬೆಚ್ಚಿಬೀಳಿಸುವಂತಿತ್ತು. ದೇಶದ ಉದ್ದಗಲಕ್ಕೂ ಇರುವ 'ಕ್ಯಾನ್ಸರ್ ಹಳ್ಳಿ'ಗಳಿಗೆ ಭೇಟಿ ಕೊಟ್ಟಾಗ ಶೇಕಡಾವಾರು ಅತಿ ಹೆಚ್ಚಿನ ಪ್ರಮಾಣದಲ್ಲಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಹಳ್ಳಿಗರು, ರಾಸಾಯನಿಕಗಳು ಮತ್ತು ಕೈಗಾರಿಕೆಗಳ ತ್ಯಾಜ್ಯದಿಂದುಂಟಾಗುತ್ತಿದ್ದ ನದಿ ಮಾಲಿನ್ಯದ ಬಗ್ಗೆ ದೂರುತ್ತಿದ್ದರು. ಮೋದಿಯವರ ೨೦೦೬ರ ಚೀನಾದ SEZ ಭೇಟಿಯ ಹೊತ್ತಿಗೆ ಶೇಕಡಾ ೭೦ರಷ್ಟು ನದಿಗಳು ಮತ್ತು ಕೆರೆಗಳು ಆಗಲೇ ಸಾಕಷ್ಟು ಕಲುಷಿತವಾಗಿದ್ದು, ಶೇಕಡಾ ೨೮ರಷ್ಟು, ನೀರಾವರಿ ಅಥವಾ ಕೈಗಾರಿಕಾ ಬಳಕೆಗೂ ಕೂಡ ಬಳಸಲಾಗದಷ್ಟು ಕಲುಷಿತವಾಗಿತ್ತು. ನಗರ ಪ್ರದೇಶಗಳಲ್ಲಿನ ಶೇಕಡಾ ೯೦ರಷ್ಟು ಅಂತರ್ಜಲವು ಅತ್ಯಂತ ಕಲುಷಿತವಾಗಿದ್ದು ಕುಡಿಯಲು ಯೋಗ್ಯವಲ್ಲವೆಂದು ಪರಿಗಣಿಸಲಾಗಿತ್ತು. ಬೆಳಗಿನ ಸೂರ್ಯ ಮೇಲೇರುವ ಹೊತ್ತಿಗೆ ಸೂರ್ಯನಿಗೇ ಗ್ರಹಣ ಹಿಡಿಯುವಷ್ಟು ಕಲ್ಲಿದ್ದಲಿನ ಧೂಳಿನಿಂದ ಆವೃತವಾಗಿದ್ದ ಚೀನಾದ ನಗರಗಳಲ್ಲಿ ವರ್ಷಗಟ್ಟಲೆ ಅಲೆದಿದ್ದರಿಂದ ನನಗೇ ಕೆಮ್ಮು ನಿರಂತರ ಕಾಡಹತ್ತಿತು. ಮರುಭೂಮಿಯು ನುಂಗಿಹಾಕಿದ ಉತ್ತರ ಚೀನಾದ ನಿಂಗ್ಸಿಯಾ ಪ್ರಾಂತ್ಯದ ಪುಟ್ಟ ಪುಟ್ಟ ನಗರಗಳಿಗೂ ನಾನು ಭೇಟಿಕೊಟ್ಟಿದ್ದೆ.

ಚೀನಾದ ಕಮ್ಯುನಿಸ್ಟ್ ಪಾರ್ಟಿ ಮಾಮೂಲಿನಂತೆ ಕೊನೆಯಲ್ಲಿ ತನ್ನ ನೀತಿಗಳ ಮೌಲ್ಯಮಾಪನ ಮಾಡಿತು. ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ಕ್ರಮಗಳನ್ನು ಮತ್ತು ಕಾರ್ಮಿಕರನ್ನು ರಕ್ಷಿಸುವ ಕೆಲವು ಹೊಸ ಸಾಮಾಜಿಕ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಯಿತು. ಉದಾರೀಕರಣಕ್ಕೆ ಸಂಬಂಧಿಸಿದಂತೆ ಮುಂದುವರೆಯುತ್ತಿದ್ದ ತನ್ನ ನಿಯಂತ್ರಣಗಳ ಪರಿಷ್ಕಾರದ ಪ್ರಯತ್ನವು ಕಠಿಣವೂ, ಅನೇಕ ವೇಳೆ ಅಪರಿಪೂರ್ಣವೂ ಆಗಿರುತ್ತಿತ್ತು. ಉದಾಹರಣೆಗೆ, ಚೀನಾ ದೇಶದೊಳಗೆ ಕಾರ್ಮಿಕ ಚಳುವಳಿಗಳು ಕ್ರಮೇಣ ಸಡಿಲಗೊಂಡರೂ ಅಸ್ತಿತ್ವವನ್ನು ಉಳಿಸಿಕೊಂಡಿದ್ದವು. ನಗರ ಪ್ರದೇಶಗಳಲ್ಲಿ ಖಾಸಗಿ ಆಸ್ತಿ ಹೊಂದಲು ಅವಕಾಶ ಮಾಡಿಕೊಡಲಾಯಿತಾದರೂ, ಹಳ್ಳಿಗಳ ರೈತರು ಭೂಮಿಯನ್ನು ಮಾರಲು ಅಥವಾ ಕೊಳ್ಳಲು ಅವಕಾಶವಿರಲಿಲ್ಲ. ಇದರ ಫಲವಾಗಿ ಗ್ರಾಮೀಣ ಪ್ರದೇಶಗಳಿಂದ ಬರುತ್ತಿದ್ದ ವಲಸೆ ಕಾರ್ಮಿಕರಿಗೆ ನಗರಗಳಲ್ಲಿ ಸಮರ್ಪಕವಾದ ಉದ್ಯೋಗ ಸಿಗದಿದ್ದಾಗಲೂ ಹಿಂತಿರುಗಲು ಅವರಿಗೆ ತಮ್ಮದೇ ಆದ ತುಂಡುಭೂಮಿಯೊಂದು ಇದ್ದೇ ಇರುತ್ತಿತ್ತು.

ಚೀನಾದಲ್ಲಿ ನಾನು ಹೆಚ್ಚೆಚ್ಚು ಸಮಯ ಕಳೆದಂತೆ, ಈ ದೇಶದ ವರ್ತಮಾನ ಮತ್ತು ಭವಿಷ್ಯದ ವಿಷಯವಾಗಿ ತೆಗೆದುಕೊಳ್ಳಲಾಗುತ್ತಿದ್ದ ಸುಲಭದ ಅಥವಾ ಕಣ್ಣಿಗೆ ರಾಚುವ ತೀರ್ಮಾನಗಳು ತಪ್ಪು ದಾರಿಗೆಳೆಯುವಂತಹದ್ದು ಎಂದು ನನಗೆ ಸ್ಪಷ್ಟವಾಗಹತ್ತಿತು. ಚೀನಾದ 'ಸುಧಾರಣೆ'ಗಳು ಒಬ್ಬ ವಲಸೆ ಕಾರ್ಮಿಕನಿಗೂ ಮತ್ತು ಭದ್ರವಾಗಿ ನೆಲೆಯೂರಿದ್ದ ಉದ್ಯಮಪತಿಗೂ ನಡುವೆ ಇದ್ದ ಆರ್ಥಿಕ ಅಂತರವನ್ನು ಮಾವೋಜೆಡಾಂಗ್‌ನ ಕಾಲದಲ್ಲಿ ಇರಬಹುದಾಗಿದ್ದ ಗರಿಷ್ಠ ಅಂತರಕ್ಕಿಂತ ಬಹು ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸತೊಡಗಿದ್ದವು. ಮುಖ್ಯ ಭೂಭಾಗದಲ್ಲಿದ್ದ ಕಾರ್ಖಾನೆಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಲು ನಿರಂತರವಾಗಿ ಶ್ರಮಿಸುತ್ತಿದ್ದ ವಲಸೆ ಕಾರ್ಮಿಕರು ತುಂಬಾ ಕಠಿಣ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಹಲವು ವೇಳೆ ತಾರತಮ್ಯಕ್ಕೂ ಒಳಗಾಗುತ್ತಿದ್ದರು.

ಇಷ್ಟೆಲ್ಲಾ ಆದರೂ ಈಗ ಅವರ ಮುಂದೆ ಆಯ್ಕೆಗಳ ಅಕಾಶ ತೆರೆದಿತ್ತು– ಉದ್ಯೋಗ, ಪ್ರವಾಸ, 'ವೈಯಕ್ತಿಕ' ಬದುಕಿನ ಆಯ್ಕೆಗಳು. ಜೊತೆಗೆ, ಮಾವೋ ಯುಗದಲ್ಲಿದ್ದಂತೆ ನಿಶ್ಚಲ ಭವಿಷ್ಯಕ್ಕೆ ವ್ಯತಿರಿಕ್ತವಾಗಿ ಮೇಲ್ಮುಖ ಚಲನಶೀಲತೆಯ ಕೆಲವು ಅವಕಾಶಗಳು ಕೂಡ. ಕಾರ್ಖಾನೆಯ ಶ್ರಮಿಕ ವಿಭಾಗದಲ್ಲಿದ್ದು, ಆಡಳಿತ ವಿಭಾಗಕ್ಕೆ ಬಡ್ತಿ ಪಡೆದ ಕೆಲವು ೨೦ ವರ್ಷದ ಹುಡುಗಿಯರನ್ನು ನಾನು ಸಂದರ್ಶಿಸಿದೆ. ಅವರಲ್ಲಿ ಒಬ್ಬಳಂತೂ ಸ್ವಂತ ಉದ್ಯಮ ಸ್ಥಾಪಿಸಿಕೊಳ್ಳುವ ಮಟ್ಟಕ್ಕೇರಿದ್ದಳು.

ಮೋದಿಯವರೊಡನೆ ಚೀನಾದ 'ಯಶಸ್ಸಿ'ನ ಬಗ್ಗೆ ಕೆಲವು ಸೂಕ್ಷ್ಮ ವಿಚಾರಗಳನ್ನು ಚರ್ಚಿಸಲು ನಾನು ಯಾವಾಗ ಪ್ರಯತ್ನಿಸಿದೆನೋ ಅಗ ಅವರು ಥಟ್ಟನೆ ಅದರಲ್ಲಿ ಆಸಕ್ತಿಯನ್ನು ಕಳೆದುಕೊಂಡರು. ಅವರು ಆಗಷ್ಟೇ SEZಗಳಿಗೆ ಭೇಟಿಕೊಟ್ಟು ಬಂದಿದ್ದರಿಂದ "ಅವುಗಳ ಅಭಿವೃದ್ಧಿಗಾಗಿ ರೈತರ ಭೂಮಿಯನ್ನು ವಶಪಡಿಸಿಕೊಳ್ಳುವಾಗ ಎದುರಾಗಿದ್ದ ಸಮಸ್ಯೆಗಳನ್ನು ಚೀನೀಯರು ಹೇಗೆ ನಿಭಾಯಿಸಿದರು ಎಂದು ತಾವು ಕೂಲಂಕುಷವಾಗಿ ವಿಚಾರಿಸಿದ್ದೀರಾ" ಎಂದು ನಾನು ಮೋದಿಯವರನ್ನು ಕೇಳಿದೆ. ಈ ತರಹದ ವಿಚಾರಣೆಗಳು ತಮ್ಮ "ಪ್ರವಾಸದ ವ್ಯಾಪ್ತಿಯನ್ನು ಮೀರಿದ್ದು" ಎಂದು ಹೇಳಿ ನನ್ನ ಪ್ರಶ್ನೆಯನ್ನು ಅವರು ತಳ್ಳಿಹಾಕಿದರು.

**(ವರದಿಗಾರ್ತಿ ಪಲ್ಲವಿ ಅಯ್ಯರ್, ಈಗ ಜಕಾರ್ತಾದಲ್ಲಿ ನೆಲೆಯೂರಿರುವ ಭಾರತೀಯ ಪತ್ರಕರ್ತೆಯಾಗಿದ್ದು, ಚೀನಾ ಕುರಿತು ಕೆಲ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ)**

(ಕೃಪೆ: **'ಔಟ್‌ಲುಕ್'** ವಾರಪತ್ರಿಕೆ:ಸೆಪ್ಟಂಬರ್ ೧, ೨೦೧೪)

## ವಿಜ್ಞಾನ, ಭಾಷೆ, ಸಾಹಿತ್ಯ ಇತ್ಯಾದಿ...



**ಭಾ**ರತ ಪಾರಂಪರಿಕವಾಗಿ ಖಭೌತಶಾಸ್ತ್ರದಲ್ಲಿ ಅತೀವ ಆಸಕ್ತಿ ಹೊಂದಿದ ಮತ್ತು ಸಾಧನೆಗಳನ್ನು ಮಾಡಿದ ದೇಶ. ಕಾರಣ, ಖಭೌತದಲ್ಲಿರುವ 'ಖ'–ತ್ವ ಅಂದರೆ ಆಕಾಶ ತತ್ವದ ಬಗ್ಗೆ ಈದೇಶ ತಳೆದಿರುವ ತಾತ್ವಿಕ ಆಸಕ್ತಿ ಮತ್ತು ರಚಿಸಿರುವ ಅಪೂರ್ವ ಮೀಮಾಂಸೆ. ಈ ಅಮೂರ್ತ ಮೀಮಾಂಸೆ ಈಗ ಮಂಗಳಯಾನದ ಯಶಶ್ಸಿನ ರೂಪದಲ್ಲಿ ಸಾಕಾರಗೊಳ್ಳುತ್ತಿದೆ ಎಂದೆನ್ನಬಹುದೇ? ಎಷ್ಟಾದರೂ ಇದು ಆರ್ಯಭಟನ ದೇಶವಲ್ಲವೇ?

ಸಾರಾಭಾಯಿ–ಸತೀಶ್ ಧವನ್–ಯು.ಆರ್. ರಾವ್ ಅವರಂತಹ ಕರ್ಮಜೀವಿಗಳ ಪರಂರೆಯಿರುವ ನಮ್ಮ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇತರ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳಂತಲ್ಲ. ಇದರಲ್ಲಿ ತುಂಬಿರುವವರು ನಮ್ಮ ಐ.ಐ.ಟಿ.ಗಳಿಂದ ಬಂದ 'ಬೃಹತ್' ವಿಜ್ಞಾನಿಗಳಲ್ಲ. ಬದಲಿಗೆ ಸಣ್ಣಪುಟ್ಟ ಊರುಗಳ ಸಾಮಾನ್ಯ ಕಾಲೇಜುಗಳಿಂದ ಬಂದ ಸಾಹಸ ಪ್ರಿಯ 'ಸಣ್ಣ ಪ್ರಮಾಣ'ದ ವಿಜ್ಞಾನಿಗಳು ಮತ್ತು ತಂತ್ರಜ್ಞರು. ಇದು ಭಾರತದ ವಿಜ್ಞಾನ ಸಂಶೋಧನೆಯ ನಿಜವಾದ ನೆಲೆ ಮತ್ತು ಸೆಲೆಗಳು ಎಲ್ಲಿವೆ ಎಂಬುದನ್ನು ಸೂಚಿಸುತ್ತಿರುವಂತಿದೆ. ಈ ಎಲ್ಲ ವಿಜ್ಞಾನಿಗಳು ಮತ್ತು ತಂತ್ರಜ್ಞರಿಗೆ ನಮ್ಮ–ನಿಮ್ಮ ಅಭಿನಂದನೆಗಳು.

ಅದಿರಲಿ, ಈ ಯಶಸ್ಸಿನ ಸಂಬಂಧವಾಗಿ ಕೇಳಿಬರುತ್ತಿರುವ ಎರಡು ಜನಪ್ರಿಯ ಸುದ್ದಿಗಳಿಗೆ ಇಲ್ಲಿವೆನಮ್ಮ ಪತ್ರಿಕೆಯ ಗುದ್ದುಗಳು:

ಒಂದು: ಲಕ್ಷಾಂತರ ಕಿ.ಮೀ.ಗಳ ಈ ಯಾನದ ಖರ್ಚನ್ನು ಲೆಕ್ಕಹಾಕಿ, ಇದು ಪ್ರತಿ ಕಿ.ಮೀ.ಗೆ ನಮ್ಮ ಆಟೋ ರಿಕ್ಷಾ ಪ್ರಯಾಣ ದರಕ್ಕಿಂತ ತುಂಬ ಕಡಿಮೆ ಇದೆ ಎಂದು ಹೇಳಲಾಗುತ್ತಿದೆ. ಹಾಗಿದ್ದಲ್ಲಿ ಈ ತಂತ್ರಜ್ಞಾನನ್ನು ನಮ್ಮ ಆಟೋ ರಿಕ್ಷಾಗಳಿಗೂ ಏಕೆ ಅಳವಡಿಸಬಾರದು?

ಎರಡು: ಈ ಸಾಹಸವನ್ನು ನೋಡಿ ಎದೆಯುಬ್ಬಿಸಿ ಹೆಮ್ಮೆಪಟ್ಟ ಪ್ರಧಾನಿ ಮೋದಿಯವರು ಇನ್ನು ಮುಂದಾದರೂ, ತಾವು ಅಧಿಕಾರಕ್ಕೆ ಬರುವವರೆಗೆ ಈ ದೇಶದಲ್ಲಿ ನಡೆದದೆಲ್ಲ ಬರೀ ಬುರ್ನಾಸು ಎಂದು ಹೇಳುವುದನ್ನು ನಿಲ್ಲಿಸಬೇಕು. •

**ದಲಿತ ಸಾಹಿತ್ಯ ಸಮ್ಮೇಳನ** ಮೈಸೂರಿನಲ್ಲಿ ಅರ್ಜುಣ ಗೊಳಸಂಗಿ ಎಂಬ ಪ್ರಸಿದ್ಧ ಲೇಖಕರ ನೇತೃತ್ವದಲ್ಲಿ ಮತ್ತು ಮಲ್ಲೇಪುರಂ ವೆಂಕಟೇಶ್ ಎಂಬ ಘನ ವಿದ್ವಾಂಸರ ಅಧ್ಯಕ್ಷತೆಯಲ್ಲಿ ನಡೆಯಿತು ಎಂಬುದೇ ಅದರ ಬಗ್ಗೆ ಎಲ್ಲ ಹೇಳುತ್ತಾದ್ದರಿಂ ಬೇರೆ ಏನೂ ಹೇಳುವ ಅವಶ್ಯಕತೆ ಇಲ್ಲ ಎಂದು ಭಾವಿಸುವೆ.

### ಹೀಗಿದೆ ನಮ್ಮ ಕನ್ನಡ ಮಾಧ್ಯಮ ಪ್ರಪಂಚ:

ನಮ್ಮ ಕನ್ನಡದ ಮಾಧ್ಯಮಗಳ ಬಗ್ಗೆ ಸದ್ಯಕ್ಕೆ ಎರಡು ಪ್ರಶ್ನೆಗಳನ್ನು ಕೇಳಲೇಬೇಕು. ರೈಲ್ವೇ ಮಂತ್ರಿ ಸದಾನಂದಗೌಡರ ಮಗನಿಗೆ ಮತ್ತು ರಾಘೇಶ್ವರ ಭಾರತಿ ಎಮುಬ ಮಠಾಧೀಶರಿಗೆ ಸಂಬಂಧಿಸಿದ ಹಗರಣಗಳ ಪೈಕಿ ಮೊದಲನೆಯದರ ಚರದಿಗಾರಿಕೆ ಒಂದೇ ದಿನದಲ್ಲಿ ವಿರುದ್ಧ ದಿಕ್ಕಿಗೆ ತಿರುಗಿ, ಸಂಬಂಧಪಟ್ಟ ಹೆಣ್ಣುಮಗಳ ಚಾರಿತ್ರ್ಯಹನನದ ಮಟ್ಟ ತಲುಪಿದರೆ, ಮಠಾಧೀಶರಿಗೆ ಸಂಬಂಧಿಸಿದ ಹಗರಣದ ವರದಿ ಒಂದೇ ದಿನಕ್ಕೆ ಪತ್ರಿಕೆಯ ಪುಟಗಳಿಂದ ಮತ್ತು ಟಿವಿಗಳ ತೆರೆಗಳಿಂದ ಮಾಯವಾಗಿ ಹೋಯಿತಲ್ಲಾ ಏಕೆ? ಮಠಾಧೀಶರಿಗಿಂತ ಮೊದಲೇ ಅವರ ಮೇಲೆ ಗಂಭೀರ ದೂರು ದಾಖಲು ಮಾಡಿದವರ ಕ್ಷಿಪ್ರ ಕಾರ್ಯಚರಣೆಗೆ ಮುಂದಾದ ನಮ್ಮ ಪೋಲಿಸು ಮತ್ತು ನ್ಯಾಯಾಂಗ ಮಠಾಧೀಶರ ಮೇಲೆ ದಾಖಲಾದ ಆರೋಪದ ಬಗ್ಗೆ ಏಕೆ ಹೀಗೆ ಮೀನ–ಮೇಷ ಎಣಿಸುತ್ತಿದೆ ಎಂಬ ಪ್ರಶ್ನೆಯನ್ನು ಈ ಗೊಗ್ಗರು ಗಂಟಲಿನ ಕ್ರೈಂ ಕರ್ಯಕ್ರಮಗಳ ಪ್ರವೀಣರು ಕೇಳಲಿಲ್ಲವೇಕೆ? ಈ ಸಂಬಂಧ ಒಂದು ಪತ್ರಿಕೆ ಮತ್ತು ಎರಡು ಟಿವಿ ವಾಹಿನಿಗಳ ಹೊರತಾಗಿ ಮಿಕ್ಕಾವ ಮಾಧ್ಯಮಗಳೂ ಕನಿಷ್ಠ ಮಾಧ್ಯಮ ಘನತೆಯನ್ನೂ ಕಾಯ್ದುಕೊಳ್ಳಲಿಲ್ಲ ಎಂಬುದನ್ನು ನಾವೆಲ್ಲ ವಿಷಾದದಿಂದ ಗಮನಿಸಬೇಕಾಗಿದೆ.

### ಅನಂತಮೂರ್ತಿಯವರ ದ್ವಂದ್ವ ಮೀಮಾಂಸೆ ಮತ್ತು ಕನ್ನಡ ಹೋರಾಟ

### ಪ್ರಜಾವಾಣಿ ಪ್ರಕಟಿಸದ ಒಂದು ಪತ್ರ

ಅನಂತಮೂರ್ತಿಯವರು ಬದುಕಿದ್ದಾಗ ಹೇಗೋ ನಿಧನರಾದ ಮೇಲೂ ವಿವಾದಗಳನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗಿದ್ದಾರೆ! ಅವರು ತಮ್ಮ ವಿರೋಧಿಗಳೂ ಸೇರಿದಂತೆ ಎಲ್ಲರನ್ನೂ ಮೆಚ್ಚಿಸಲು ಯತ್ನಿಸುವ ಗುಣವೇ ಅವರ ಶವಸಂಸ್ಕಾರ ನಡೆದ ರೀತಿಯನ್ನು ನಿರ್ಧರಿಸಿದ್ದು ಎಂದು ಕೆಲವರು ಲಘುಶೈಲಿಯಲ್ಲಿ ಹೇಳುತ್ತಿದ್ದಾರೆ. ಅಂದರೆ, ಅವರ ನಿಧನವನ್ನು ಸಂತೋಷದ ಘಟನೆಯೆಂದು ಆಚರಿಸಿದ 'ಹಿಂದೂವಾದಿ'ಗಳನ್ನೂ ಈ ರೀತಿ ಅವರು ಮೆಚ್ಚಿಸಿ ಹೋದರಂತೆ!

ಅದೇನೇ ಇರಲಿ, ಅನಂತಮೂರ್ತಿಯವರ ಶವ ಸಂಸ್ಕಾರದ ರೀತಿ–

ನೀತಿಗಳನ್ನು ಕುರಿತು ಆರಂಭವಾದಂತೆ, ಅವರ ನಿಜ ವ್ಯಕ್ತಿತ್ವದ ಬಗ್ಗೆ ನಡೆದಿರುವ ಚರ್ಚೆ(ನಮ್ಮ ಪತ್ರಿಕೆಯ 'ನಿಮ್ಮಪತ್ರ' ಅಂಕಣದಲ್ಲೂ ಗಮನಿಸಬಹುದು) ಈಗ ಜನಪ್ರಿಯ ಧಾಟಿಯನ್ನು ಮೀರಿ ಗಂಭೀರ ತಾತ್ವಿಕ ಶೈಲಿಗೆ ತಿರುಗಿದೆ. ಅವರ ವ್ಯಕ್ತಿತ್ವದ ಸಹಜ ಓರೆಕೋರೆಗಳನ್ನು ತಿದ್ದಿ ಪ್ರಸ್ತುತಪಡಿಸುವ ಮರಣೋತ್ತರ ರಿಪೇರಿ ಪ್ರಯತ್ನಗಳು ಈಗ ನಡೆದಿವೆ. ಈ ಸಂಬಂಧವಾಗಿ ಪ್ರಜಾವಾಣಿ'ಯಲ್ಲಿ ಪ್ರಕಟವಾದ ಒಂದು ಬರಹ ಮತ್ತು ಅದೇ ದಿನ ಅದೇ ಪತ್ರಿಕೆಯಲ್ಲಿ ಪ್ರಕಟವಾದ ಮಾತೃಭಾಷಾ ಶಿಕ್ಷಣ ಕುರಿತ ನಟರಾಜ ಹುಳಿಯಾರರ ಅಂಕಣದ ಬಗ್ಗೆ ನಾನೊಂದು ಪ್ರತಿಕ್ರಿಯೆ ಬರೆದು ಕಳಿಸಿದೆ. ಅದು ಪ್ರಕಟವಾಗಲಿಲ್ಲ. ಏಕೆಂದು ನೀವೇ ತೀರ್ಮಾನಿಸಲಿ ಎಂದು. ಅದನ್ನು ಇಲ್ಲಿ ಕೊಡುತ್ತಿರುವೆ:

೧೭ನೇ ಸೆಪ್ಟಂಬರ್ ಪ್ರಜಾವಾಣಿಯ 'ಅಭಿಮತ' ಪುಟದ ಎರಡು ಬರಹಗಳ ಬಗ್ಗೆ ನನ್ನ ಪ್ರತಿಕ್ರಿಯೆ:

೧. ರೋಹಿತ್ ಚಕ್ರತೀರ್ಥ ಅವರು 'ಸಂಗತ'ದಲ್ಲಿ 'ಬ್ರಾಹ್ಮಣನ ಕಷ್ಟ...' ಇತ್ಯಾದಿ ಶೀರ್ಷಿಕೆಯಲ್ಲಿ ಯು.ಆರ್. ಅನಂತಮೂರ್ತಿಯವರ ವ್ಯಕ್ತಿತ್ವ ವಿಶ್ಲೇಷಣೆಯ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಅವರನ್ನು ದ್ವಂದ್ವಮೂರ್ತಿ ಎಂಬ ಟೀಕೆಯಿಂದ ಪಾರು ಮಾಡುವ ಬೌದ್ಧಿಕ ಕಸರತ್ತೊಂದನ್ನು ನಡೆಸಿದ್ದಾರೆ. ಅನಂತಮೂರ್ತಿಯವರು, ಇಂತಹ ಬೌದ್ಧಿಕ ಸಹಾನುಭೂತಿಯ ಪ್ರಯತ್ನಗಳು ಅನಗತ್ಯವೆನ್ನಿಸುವಷ್ಟರ ಮಟ್ಟಿಗೆ ಸ್ವತಃ ತಾವೇ ತಮ್ಮ ಸೃಜನಶೀಲ ಬರಹಗಳ ಮೂಲಕ ಕನ್ನಡದ ಸಾರಸ್ವತ ಲೋಕದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಸಾಧಿಸಿಕೊಂಡಿದ್ದಾರೆ. ಹೀಗಾಗಿ ರೋಹಿತ್ ಅವರ ಬರಹ ಯಾವುದೋ ಸಾಹಿತ್ಯೇತರ ಹಿತಾಸಕ್ತಿಯ ಧ್ವನಿಯಾಗಿ ನಮ್ಮನ್ನು ತಾಗಿ, ಅನುಮಾನಾಸ್ಪದವೆನ್ನಿಸುತ್ತದೆ.

'ಬ್ರಾಹ್ಮಣನ ಕಷ್ಟ' ಎಂದು ಆರಂಭವಾಗುವ ರೋಹಿತ್ ಅವರ ಬರಹದ ಈ ಶೀರ್ಷಿಕೆಯೇ, ಅವರ ಬರಹ ಯಾವುದನ್ನು ಹಲವು ಆಧುನಿಕ ಸಿದ್ಧಾಂತಗಳ ಉಲ್ಲೇಖಗಳ ಮೂಲಕ 'ನ್ಯಾಯಸಮ್ಮತ' (rationalise)ಗೊಳಿಸಲು ಹೊರಟಿದೆಯೋ(ಅಂದರೆ ದಂದ್ವಗಳನ್ನು ಯುಗ್ಮಗಳೆಂದು ಸಾಬೀತುಪಡಿಸುವುದು) ಅದನ್ನೇ ಮೂಲತಃ ಧಿಕ್ಕರಿಸುತ್ತಿದೆ. ಅಂದರೆ ಯಾವ ಆಧುನಿಕತೆಯೂ ಬ್ರಾಹ್ಮಣನನ್ನು ಬ್ರಾಹ್ಮಣ ಪಟ್ಟದಿಂದ(ಅಂದರೆ ಬ್ರಾಹ್ಮಣ್ಯದಿಂದ) ಬಿಡುಗಡೆಗೊಳಿಸಲಾರದು ಎಂದು ಅದು ಧ್ವನಿಸುತ್ತಿದೆ. ಇದರರ್ಥ, ಆಧುನಿಕತೆ ಎಂಬುದು ಬ್ರಾಹ್ಮಣನಿಗೆ ಬ್ರಾಹ್ಮಣ ಪ್ರಾಧಾನ್ಯವಲ್ಲದ ಹೊಸ ಕಾಲದಲ್ಲಿ ತನ್ನ ಪ್ರಾಧಾನ್ಯವನ್ನುಳಿಸಿಕೊಳ್ಳಲು ಹೊರ ವೇಷ ಭೂಷಣಗಳನ್ನು ಒದಗಿಸಬಲ್ಲುದೇ ಹೊರತು ಅವನನ್ನು ಒಳಗಿಂದ ಬದಲಾವಣೆ ಮಾಡಲಾರದು ಎಂಬುದೇ ಆಗಿದೆ.

ಇದು ಅನಂತಮೂರ್ತಿಯವರು ನಂಬಿದ್ದ, ಬರೆದ ಮತ್ತು ಕೆಲವು ಸಂದರ್ಭಗಳಲ್ಲಿ(ಉದಾ: ಅವರ ಮದುವೆ) ಕ್ರಿಯಾಶೀಲರೂ ಆಗಿದ್ದ ಸನ್ನಿವೇಶಗಳು ಸೂಚಿಸುವ ಆಧುನಿಕತೆಯ ಅರ್ಥಕ್ಕೆ ತದ್ವಿರುದ್ಧವಾದದ್ದು. ನಿಜ, ಅವರು ತಮ್ಮನ್ನು ಒಳ ಟೀಕಾಕಾರ(critical insider) ಎಂದು ಕರೆದುಕೊಂಡು ಸಂಪ್ರದಾಯ ಮತ್ತು ಆಧುನಿಕತೆಗಳೆರಡನ್ನೂ ಟೀಕಿಸಿದ್ದಾರೆ. ಆದರೆ ಈ ಟೀಕೆಗಳೆರಡೂ ಸಂಧಿಸುವ ವ್ಯಾವಹಾರಿಕವಾಗಿ ಸುಸಂಬದ್ಧವೆನಿಸುವ ಜಾಗವನ್ನು(Social space) ಮಾತ್ರ ಅವರು ಎಲ್ಲೂ ಸೂಚಿಸಿಲ್ಲ. ಹಾಗಾಗಿ ಅವರ ಈ ವಿಚಾರ ವಿಮರ್ಶೆ ಯುಗ್ಮ ರೂಪದಲ್ಲಿ ಕಾಣದೆ ಅವರು ದ್ವಂದ್ವಗಳಿಗೇ ಹೆಸರಾದರೆಂದು ತೋರುತ್ತದೆ. ಒಂದು ಪ್ರಾತಿನಿಧಿಕ ಉದಾ: ಮಿಶ್ರ ಜಾತಿ–ಮತಗಳ ಮತ್ತು ವಿಧವಾ ವಿವಾಹಗಳನ್ನು ಹಾಗೂ ಜಾತಿ ಭೇಧವಿಲ್ಲದ ಸಾಮೂಹಿಕ ಊಟದ ವ್ಯವಸ್ಥೆಯನ್ನು ಧರ್ಮಸಮ್ಮತವಲ್ಲವೆಂದು ನಂಬುವ ಮಠಾಧೀಶರನ್ನು ಪೂಜ್ಯರೆಂದು ಮಾನ್ಯ ಮಾಡುವ ಅನಂತಮೂರ್ತಿಯವರ ಸಾಮಾಜಿಕ ವರ್ತನೆಯನ್ನು ಏನೆಂದು ಕರೆಯುವುದು? ಹೇಗೆ ಅರ್ಥ ಮಾಡಿಕೊಳ್ಳುವುದು?

ಅನಂತಮೂರ್ತಿ ಆಧುನಿಕ ಕನ್ನಡದ ಓರ್ವ ಅಪ್ರತಿಮ ಲೇಖಕ. ನಮಗೆ ಅವರು ಅಷ್ಟರಮಟ್ಟಿಗೆ 'ಹೀರೋ' ಆಗಿರುವುದು ಸಾಕು. ಮಿಕ್ಕೆಲ್ಲ ಪ್ರಯತ್ನಗಳು ವ್ಯರ್ಥ ಪಾರಿಭಾಷಿಕ ರಾಜಕಾರಣ ಮಾತ್ರವೆನಿಸಿಕೊಂಡೀತು. ಅವರ ಶವಸಂಸ್ಕಾರಕ್ಕೆ ಸರ್ಕಾರದ ವತಿಯಿಂದ ಖರ್ಚಾದ ಕೇಜಿಗಟ್ಟಲೆ ತುಪ್ಪ ಮತ್ತು ಶ್ರೀಗಂಧ ಹಾಗೂ ಪುರೋಹಿತರ ಶುಲ್ಕ ಇತ್ಯಾದಿಗಳನ್ನು ನಮ್ಮ ಸರ್ಕಾರಗಳು ಮಾಡುವ ಹಲವು ರೀತಿಗಳ ದುಂದುವೆಚ್ಚಗಳಲ್ಲಿ ಒಂದೆಂದು ಪರಿಗಣಿಸಿಬಿಡೋಣ!

೨. ಇನ್ನು ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಮರುತೀರ್ಪಿನ ಹಿನ್ನೆಲೆಯಲ್ಲಿ ಮಾತೃಭಾಷಾ ಶಿಕ್ಷಣದ ಬಿಕ್ಕಟ್ಟಿನ ಬಗ್ಗೆ ತಮ್ಮ ಅಂಕಣದಲ್ಲಿ('ಕನ್ನಡಿ') ನಟರಾಜ ಹುಳಿಯಾರರು ಬರೆದಿದ್ದಾರೆ. ತಾವು ಮತ್ತು ತಮ್ಮ ಗೆಳೆಯರು ಕೆಲವು ವರ್ಷಗಳ ಹಿಂದೆ ಒಂದನೇ ತರಗತಿಯಿಂದಲೇ ನಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸಬೇಕೆಂಬ ಪ್ರಚಾರ ಕಾರ್ಯಕ್ರಮ ಶುರು ಮಾಡಿದಾಗ ಕೆಲ ಹಿರಿಯ ಸಾಹಿತಿಗಳು ನ್ಯಾಯಾಲಯ ತೀರ್ಪು ಮಾತೃಭಾಷಾ ಶಿಕ್ಷಣ ಮಾಧ್ಯಮದ ಬಗ್ಗೆ ಬರಲಿದೆಯೆಂಬ ನಿರೀಕ್ಷೆಯಿಂದ ಅದನ್ನು ವಿರೋಧಿಸಿದ್ದಾಗಿ ಅಲ್ಲಿ ಬರೆದಿದ್ದಾರೆ. ಆದರೆ ಇದು ಸರಿಯಾದ ಮಾಹಿತಿಯಲ್ಲ. ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ವ್ಯವಸ್ಥೆಯನ್ನು ನಾನೂ ಸೇರಿ ಹಲವರು ವಿರೋಧಿಸಿದ್ದು, ಈ ವ್ಯವಸ್ಥೆಯನ್ನು ಪ್ರತಿಪಾದಿಸಿದವರೆಲ್ಲರೂ ಇಂದಿನ ಪರಿಸ್ಥಿತಿಯಲ್ಲಿ ಮಾತೃಭಾಷಾ ಶಿಕ್ಷಣ ಮಾಧ್ಯಮದ ಪ್ರಶ್ನೆಯೇ ಅಸಂಗತವೆಂದು ನಿರ್ಧರಿಸಿ ತಂತಮ್ಮ ಮಕ್ಕಳನ್ನೆಲ್ಲ ಪ್ರತಿಷ್ಠಿತ ಇಂಗ್ಲಿಷ್ ಶಾಲೆಗಳಿಗೆ ಸೇರಿಸಿ; ಕನ್ನಡ ಶಾಲೆಯ ಮಕ್ಕಳ ಬಗ್ಗೆ ತಮ್ಮ (ಅನಗತ್ಯ ಮತ್ತು ಅವಮಾನಕರ) ಮರುಕ ವ್ಯಕ್ತಪಡಿಸುವ ರೂಪದಲ್ಲಿ ಅದನ್ನು ಸಮರ್ಥಿಸತೊಡಗಿದಾಗ. ಇನ್ನೂ ಮುಖ್ಯವಾಗಿ, ಮಾತೃಭಾಷಾ ಶಿಕ್ಷಣದ ಪ್ರಶ್ನೆಯನ್ನು ಜಾತಿ–ಸಮುದಾಯಗಳ ಪ್ರಶ್ನೆಯನ್ನಾಗಿ ಬಿಂಬಿಸಿದಾಗ ಮತ್ತು ಇದು ಇಂಗ್ಲಿಷ್ ಶಿಕ್ಷಣ ಮಾಧ್ಯಮದ ಆಗ್ರಹದ ಮುನ್ನುಡಿ ಎಂದೆನ್ನಿಸತೊಡಗಿದಾಗ. (ಮುಂದೆ ಅದು ನಿಜವೇ ಆಯಿತು.) ಮಾತೃ ಭಾಷಾ ಮಾಧ್ಯಮವನ್ನು ಕಡ್ಡಾಯ ಮಾಡಿ ಯಾವ ತರಗತಿಯಿಂದಲಾದರೂ ಇಂಗ್ಲಿಷ್ ಕಲಿಸಿ ಎಂಬುದು ನಮ್ಮ ವಾದವಾಗಿತ್ತು. ಮತ್ತು ನಮ್ಮ ಮಕ್ಕಳ ಮನಸ್ಸಿನಲ್ಲಿ ಆರಂಭದಿಂದಲೇ ಕನ್ನಡದ ಪ್ರಾಥಮಿಕತೆಗೆ ಭಂಗ ಉಂಟಾಗಬಾರದೆಂಬುದೂ ನಮ್ಮ ಉದ್ದೇಶವಾಗಿತ್ತು.

ನಟರಾಜರ ಅಂಕಣ ಓದಿದಾಗ ಅವರು ಕನ್ನಡಿಗರು ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಕೈಬಿಡುವುದು ಲೇಸೆಂಬ ಭಾವನೆಯನ್ನೇ ಹೊಂದಿರುವುದು ಗೊತ್ತಾಗುತ್ತದೆ. ಅವರು ರಾಜ್ಯದಲ್ಲಿ ಕನ್ನಡವನ್ನು ಕನ್ನಡದ ಮಕ್ಕಳು ಪ್ರಥಮ ಭಾಷೆಯಾಗಿಯಾದರೂ ಕಲಿಯುವುದನ್ನು ಕಡ್ಡಾಯ ಮಾಡಿ ಕನ್ನಡವನ್ನು ಉಳಿಸುವ ಸಲಹೆ ನೀಡಿದ್ದಾರೆ. ಇದು ಶಿಕ್ಷಣ ಮಾಧ್ಯಮದ ವಿಷಯದಲ್ಲಿ ಅಂಕಣಕಾರರು ನ್ಯಾಯಾಲಯದ ತೀರ್ಪು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳನ್ನು ನಿರ್ವಹಿಸಿರುವ ನೆಲೆಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲವೆಂಬುದನ್ನು ಸೂಚಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಯಾವ ಆಧಾರದ ಮೇಲೆ ಇವರು ತಮ್ಮ ಈ ಸಲಹೆಯಾದರೂ ನ್ಯಾಯಾಲಯದ ಮಾನ್ಯತೆ ಪಡೆಯುವುದೆಂದು ಭಾವಿಸಿದ್ದಾರೋ ತಿಳಿಯದಾಗಿದೆ!

ಮಾತೃಭಾಷಾ ಶಿಕ್ಷಣವನ್ನು ಉಳಿಸಿಕೊಳ್ಳಲು ನಮ್ಮ ರಾಜ್ಯ ಸರ್ಕಾರ ಇತರ ರಾಜ್ಯಗಳ ಸರ್ಕಾರಗಳೊಡನೆ ಚರ್ಚಿಸಿ ಒಂದು ಸಂಘಟಿತ ರಾಷ್ಟ್ರೀಯ ಪ್ರಯತ್ನ ಮಾಡುವ ಪ್ರಸ್ತಾವವನ್ನು ನಟರಾಜರು ಅನುಮಾನದಿಂದ ನೋಡಿರುವುದೇ ಮಾತೃಭಾಷಾ ಶಿಕ್ಷಣ ಕುರಿತ ಅವರ ಮೂಲ ನಿಲುವನ್ನು ಸ್ಪಷ್ಟಪಡಿಸುವಂತಿದೆ. ಕರ್ನಾಟಕ ಸರ್ಕಾರ ಈ ವಿಷಯದಲ್ಲಿ ಆಸಕ್ತಿ ತಳೆಯುತ್ತಿರುವಾಗ ಇತರ ಸರ್ಕಾರಗಳು ತಾಳಲಾರವು ಎಂದು ನಟರಾಜರು, ಇಂತಹ ಪ್ರಯತ್ನಗಳು ಆರಂಭವಾಗುವ ಮುನ್ನವೇ ಸಂದೇಹಿಸಲು ಏನು ಕಾರಣ? ಹಾಗಿದ್ದಲ್ಲಿ ಅವರು ಇಂದು ಕನ್ನಡ ಉಳಿಸಲು ಸೂಚಿಸಿರುವ ಕ್ರಮಗಳಾದರೂ ವ್ಯಾವಹಾರಿಕ ಎಂದು ಹೇಗೆ ನಂಬುವುದು? ಇಂತಹ (ಇವರು ಪ್ರಸ್ತಾಪಿಸುವ ಉನ್ನತ ಹಂತದ ತರಗತಿಗಳಿಗಾಗಿ ವಿಜ್ಞಾನ ವಿಷಯಗಳ ಪಠ್ಯಪುಸ್ತಕಗಳ ಲಭ್ಯತೆಯೂ ಸೇರಿದಂತೆ) ಪ್ರಯತ್ನಗಳು ಈ ಹಿಂದೆ ನಡೆದಿದ್ದವು ಎಂಬುದು ನಟರಾಜರಿಗೆ ಗೊತ್ತಿದ್ದಂತಿಲ್ಲ. ಆದರೆ ಭಾಷೆ ಕುರಿತ ಇಂತಹವರ ಇಂತಹ 'ವ್ಯಾವಹಾರಿಕ' ನಿಲುವಿನಿಂದಾಗಿ ಅವೆಲ್ಲ ವಿಫಲವಾಗಿ ಇಂದು ಕನ್ನಡಕ್ಕೆ ಈ ದುರ್ಗತಿ ಒದಗಿದೆ ಎಂದು ಇಲ್ಲಿ ಹೇಳಬೇಕಿದೆ. ನಟರಾಜರು ಪಂಜಾಬ್‌ನ ಜೋಗಾ ಸಿಂಗ್‌ರ ಹೋರಾಟದ ಉದಾಹರಣೆಯನ್ನು ನೀಡಿರುವುದು ಅವರ ಈ ನಿಲುವಿನ ಹಿನ್ನೆಲೆಯಲ್ಲಿ ಒಂದು ತಮಾಷೆಯಾಗಿ ಮಾತ್ರ ಕಾಣಬಲ್ಲುದು. ಕನ್ನಡಕ್ಕೆ ಒದಗಿರುವ ಇಂದಿನ ದುರ್ಗತಿಯ ಹಿಂದಿರುವ ತಮ್ಮಂತಹವರ ಕೇವಲ ವ್ಯಾವಹಾರಿಕೆನ್ನಿಸುವ ನಿಲುವಿನ ಸಮೀಪ ದೃಷ್ಟಿ ದೋಷವನ್ನು ಮರೆಮಾಚಿಕೊಳ್ಳಲಷ್ಟೇ ಅವರು ಈ ಉದಾಹರಣೆಯನ್ನು ತಮ್ಮ ಬರಹದಲ್ಲಿ ಸೇರಿಸಿದಂತಿದೆ.

ಇಂದಿನ ಜಾಗತೀಕರಣದ ಸವಾಲುಗಳ ಸಂದರ್ಭದಲ್ಲಿ ನಮ್ಮ ಮಾತೃಭಾಷೆಗಳನ್ನು ಶಿಕ್ಷಣ ಕ್ರಮದಲ್ಲಿನ ಒಂದು ಭಾಷೆಯಾಗಿ ಮಾತ್ರವಲ್ಲ, ಕನಿಷ್ಟ ಅಡಿಪಾಯದ ಶಿಕ್ಷಣ ಮಾಧ್ಯಮವಾಗಿಯಾದರೂ ಉಳಿಸುವುದು ಹಲವು ದೃಷ್ಟಿಗಳಿಂದ ಎಷ್ಟು ಮಹತ್ವದ ಸಂಗತಿ ಮತ್ತು ಅದಕ್ಕಾಗಿ ಯಾವ ರೀತಿಯ ಮತ್ತು ಪ್ರಮಾಣದ ಪ್ರಯತ್ನ ಇಂದು ಅಗತ್ಯವಾಗಿದೆ ಎಂಬುದು ನಟರಾಜರ ಅರಿವಿಗೆ ಬಂದಂತಿಲ್ಲ. ಬಂದಿದ್ದಲ್ಲಿ, ನ್ಯಾಯಾಲಯದ ತೀರ್ಪನ್ನು ನಾವು ಎದುರಿಸಬೇಕಾದ ರೀತಿ–ನೀತಿಗಳನ್ನು ಕುರಿತು ಅವರು ತಮ್ಮ ಈ ಅಂಕಣದಲ್ಲಿ ಬರೆದಿರುವಷ್ಟು ಸುಲಭ ತರ್ಕ ಮತ್ತು ಶೈಲಿ ಮತ್ತು ಹುಸಿಯೆನಿಸುವ ಶೀರ್ಷಿಕೆಯೊಂದಿಗೆ ('ಶುರುವಾಗಲಿದೆ ತಾಯ್ನುಡಿ ಪರ ಯುದ್ಧ') ಬರೆಯುತ್ತಿರಲಿಲ್ಲ.

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪುಸ್ತಕ: **ಯಾನ** ಲೇ: **ಎಸ್.ಎಲ್. ಭೈರಪ್ಪ** ಪ್ರ: **ಸಾಹಿತ್ಯ ಭಂಡಾರ,** ಬೆಂಗಳೂರು ಪು: **೨೩೪ ಬೆಲೆ:** ರೂ. ೧೯೦/- $. ೧೫/-

# ಹಳೆಯ ಮಂತ್ರ-ಹೊಸ ತಂತ್ರ




ಕನ್ನಡದ ಹಿರಿಯ ಮತ್ತು ಮುಖ್ಯ ಕಾದಂಬರಿಕಾರರು ಕಣ್ಮರೆಯಾಗಿರುವ ಈ ಹೊತ್ತಿನಲ್ಲಿ ಆ ಪ್ರಕಾರದಲ್ಲಿ ಈಗಲೂ ಚಾಲ್ತಿಯಲ್ಲಿರುವ ದೊಡ್ಡ ಹೆಸರು ಭೈರಪ್ಪನವರದು. ಇಂದಿಗೂ ಅವರು ಪ್ರತಿಯೊಂದು ಕಾದಂಬರಿಯ ರಚನೆಗಾಗಿ ಸಾಕಷ್ಟು ಸಿದ್ಧತೆ ಮಾಡುತ್ತಿರುವುದನ್ನು ಮತ್ತು ವೃತ್ತಿಗಾಗಿ ಅಪಾರವಾಗಿ ಹೆಣಗುವುದನ್ನು ನೋಡಿದರೆ ಅವರು ಆ ಪ್ರಕಾರವನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತಾರೆ, ಎಷ್ಟೊಂದು ಗಂಭೀರವಾಗಿ ತೆಗೆದುಕೊಂಡದ್ದಾರೆ ಎಂಬುದು ಮನವರಿಕೆಯಾಗುತ್ತದೆ. ಒಂದೇ ತಿಂಗಳಲ್ಲಿ ಹತ್ತು ಮುದ್ರಣ ಕಂಡ 'ಯಾನ' ಕಾದಂಬರಿಯ ರಚನೆಯಲ್ಲೂ ಅವರ ಪರಿಶ್ರಮ, ಕುತೂಹಲ ಕಣ್ಣಿಗೆ ಕಟ್ಟುವಂತಿದೆ. ಕನ್ನಡದಲ್ಲಿ ಅಷ್ಟಾಗಿ ಬೆಳೆಯದಿರುವ ವೈಜ್ಞಾನಿಕ ಕಥನ ಧಾರೆಯ ಎಳೆಯೊಂದನ್ನು ಬಳಸಿಕೊಂಡು 'ಯಾನ' ಕಾಂದಬರಿಯನ್ನು ರಚಿಸಿದ್ದರೂ 'ಯಾನ'ವು ಈ ಯಾವ ಪ್ರಕಾರಕ್ಕೂ ಸೇರಿಸಲಾಗದ ಕೃತಿಯಾಗಿ ಮೂಡಿದೆ. 'ನನ್ನ ಇತರ ಕಾದಂಬರಿಗಳಂತೆ ಇದೂ ಮನುಷ್ಯನ ಅನುಭವವನ್ನು ಶೋಧಿಸುತ್ತದೆ' ಎಂದು ಅವರು ಹೇಳಿರುವವರಾದರೂ ಈ ಮಾತು ಕಾದಂಬರಿಯಲ್ಲಿ ನಿಜವಾಗದೇ ಹೋಗುತ್ತದೆ.

ಒಂದು ಮಾತು ಹೇಳಬೇಕು: ಈ ಕಾದಂಬರಿಯ ರಚನೆಕಾರರಾದ ಭೈರಪ್ಪನವರಿಗೆ ಇರುವ ಹೊಸದನ್ನು ಕಲಿಯಬೇಕು, ಸಾಧ್ಯವಾದರೆ ಅದನ್ನು ತಮ್ಮ ಸೃಜನಶೀಲ ಬರವಣಿಗೆಗೆ ಭಿತ್ತಿಯಾಗಿ ಬಳಸಿಕೊಳ್ಳಬೇಕೆಂಬ ತೀವ್ರವಾದ ಹಂಬಲವಿದೆ. ಅವರು ಭೌತಶಾಸ್ತ್ರ, ಖಭೌತಶಾಸ್ತ್ರ, ಅಂತರಿಕ್ಷಯಾನ ತಂತ್ರಜ್ಞಾನ, ಜೀವವಿಕಾಸ, ಕೃಷಿವಿಜ್ಞಾನ-ಹೀಗೆ ಹಲವಾರು ವಿಷಯಗಳನ್ನು ತಲಸ್ಪರ್ಶಿಯೆಂಬಂತೆ ಅಧ್ಯಯನ ಮಾಡಿದ್ದಾರೆ. ಅದರ ಜೊತೆಗೆ ಭಾರತೀಯ ತತ್ವಶಾಸ್ತ್ರ, ವೇದ-ವೇದಾಂತಗಳನ್ನು ಆಳವಾಗಿ ಅಭ್ಯಸಿಸಿದ್ದಾರೆ. ಈ ಎಲ್ಲವನ್ನು ಈ ಕೃತಿಯ ರಚನೆಯಲ್ಲಿ ಹಿನ್ನೆಲೆಗೆ ಇಟ್ಟುಕೊಂಡು ವೈಜ್ಞಾನಿಕ ನೆಲೆಯಲ್ಲಿ ಕಲ್ಪನೆಯಾಗಿ ಮೂಡಬಹುದಾದ ಪ್ರಸಂಗವೊಂದನ್ನು ಇಲ್ಲಿ ಕಾಂದಬರಿಯ ರೂಪದಲ್ಲಿ ನಮ್ಮ ಮುಂದಿಟ್ಟಿದ್ದಾರೆ.

ಈ ಕತೆ ಭೂಮಿಯಲ್ಲಿ ನಡೆಯುವಂತೆ ಭೂಮಿಯಿಂದ ಮಿಲಿಯಾಂತರ ಮೈಲಿ ದೂರದಲ್ಲಿ ಹಾರುತ್ತಿರುವ ೩೦೦ ಅಡಿ ಉದ್ದ ೧೫೦ ಅಡಿ ಅಗಲದ ಬಾಹ್ಯಾಕಾಶ ನೌಕೆಯಲ್ಲೂ ನಡೆಯುತ್ತದೆ. ಮೂವತ್ತರಿಂದ ನಲವತ್ತು ಸಾವಿರ ವರ್ಷಗಳವರೆಗೆ ಒಂದು ಸಾವಿರ ತಲೆಮಾರುಗಳ ಜನರು ಈ ನೌಕೆಯಲ್ಲಿ ಪ್ರಯಾಣ ಮಾಡಬೇಕಿದ್ದೆ, ಮತ್ತೆಂದೂ ಭೂಮಿಗೆ ಹಿಂತಿರುಗುವ ಅವಕಾಶವೇ ಇರದ ಈ ನೌಕೆಯಲ್ಲೇ ತಮ್ಮ ಉತ್ತರಾಧಿಕಾರಿಗಳನ್ನು ಸೃಷ್ಟಿಸುತ್ತ, ಅವರಿಗೆ ವಿಜ್ಞಾನ, ಭೌತ-ಖಭೌತಶಾಸ್ತ್ರ, ರಸಾಯನಶಾಸ್ತ್ರ, ಯಂತ್ರವಿಜ್ಞಾನ ಇತ್ಯಾದಿ ಎಲ್ಲವನ್ನೂ ಕಲಿಸುತ್ತ, ಅವರನ್ನು ದೇಶಕ್ಕಾಗಿ ನಡೆಯುತ್ತಿರುವ ಪ್ರಯೋಗ ಪಶುಗಳನ್ನಾಗಿ ಬೆಳೆಸುವ ಗುರುತರ ಜವಾಬ್ದಾರಿ ಹೊತ್ತ ಸುದರ್ಶನ ಮತ್ತು ಉತ್ತರ ಎಂಬ ಗಂಡು ಹೆಣ್ಣುಗಳ ಜೋಡಿಯೊಂದಿದೆ. ಇವರಿಗೆ ವರ್ತಮಾನವಿರುವಂತೆ, ಅದಕ್ಕಿಂತ ಹೆಚ್ಚು ಆಕರ್ಷಕವೂ ನೈತಿಕ ಪ್ರಶ್ನೆಯಾಗಿ ಕಾಡುವ ಪೂರ್ವಾಶ್ರಮದ ನೆನಪೂ ಇದೆ.

ಸೂರ್ಯ ಮಂಡಲದಲ್ಲಿ ಸೃಷ್ಟಿಸಿಕೊಂಡ ನೈತಿಕ ನಿಯಮಗಳು ಸೂರ್ಯನ ಗುರುತ್ವಾಕರ್ಷಣೆಯ ವಲಯದ ಆಚೆಗೆ ಹೋದ ಮೇಲೂ ಸಿಂಧುವಾಗುತ್ತವೆಯೇ? ಎಂಬ ತಾತ್ವಿಕ ಪ್ರಶ್ನೆ ಒಂದು ಸವಾಲಾಗಿ, ಈ 'ಯಾನ'ದಲ್ಲಿ ಪಾಲ್ಗೊಂಡವರನ್ನು ಕಾಡುವುದರ ಸುತ್ತ ನಡೆಯುವ ನಾಟಕವೇ ಕಾದಂಬರಿಯ ಒಟ್ಟು ತಿರುಳು. ಇದರೊಳಗೇ, ಹಿಂದೆ ಭೂಮಿಯಲ್ಲಿರುವಾಗ ಮನುಷ್ಯರಾಗಿ ಅನುಭವಿಸಿದ ಸಂಬಂಧಗಳ ನೆನಪು ಹೊತ್ತು ಹೊರಟ ಗಂಡು-ಹೆಣ್ಣು ಬೇಸರ ಕಳೆಯಲು ಮೆಗಾ ಕಂಪ್ಯೂಟರ್‌ನಲ್ಲಿ ದಾಖಲಿಸಿದ ತಮ್ಮ ಭೂತ ವರ್ತಮಾನದ ಕಥೆಯನ್ನು ಇವರ ಮಕ್ಕಳು(?) ಓದಿಕೊಂಡು, ತಮ್ಮ ತಂದೆ-ತಾಯಿ ಯಾರು ಎಂಬ ಹುಟ್ಟಿಗೆ ಸಂಬಂಧಿಸಿದ ಪ್ರಶ್ನೆಯೂ ಶೋಧಿತವಾಗುವ ;ವೈಜ್ಞಾನಿಕ' ನಾಟಕವೂ ಇದೆ.

ಕಾದಂಬರಿಯ ಪ್ರಮುಖ ಪಾತ್ರಗಳಾಗಿ, ಸಾಂಕೇತಿಕ ಹೆಸರುಗಳನ್ನುಳ್ಳ ಸುದರ್ಶನ ಮತ್ತು ಉತ್ತರ -ಇವರ ಮಕ್ಕಳಾದ ಆಕಾಶ ಮತ್ತು ಮೇದಿನಿಯರು ಕಂಪ್ಯೂಟರ್ ಪರದೆಯ ಮೇಲೆ ಮೂಡಿಸಿಕೊಂಡು ತಮ್ಮ ಅಪ್ಪ-ಅಮ್ಮಂದಿರ(?) ಕಥೆಯನ್ನು ಓದುತ್ತಾ ಚರ್ಚಿಸುತ್ತಾ ಸಾಗುವ ಫ್ಲ್ಯಾಶ್‌ಬ್ಯಾಕ್ ತಂತ್ರದಲ್ಲಿ ಕಾದಂಬರಿಯು ನಿರೂಪಿತವಾಗಿದೆ. ಕಾದಂಬರಿಯ ನೇಯ್ಗೆಯು ಎಪಿಸೋಡಿಕ್ ಕ್ರಮದಲ್ಲಿದೆ. ಆದರೆ ಉದ್ದುದ್ದ ಭಾಷಣಗಳು, ಕಾದಂಬರಿಯಲ್ಲಿ ಕರಗದೆ ಉಳಿಯುವ ವೈಜ್ಞಾನಿಕ ಸಂಗತಿಗಳ ನಿರೂಪಣೆ, ಸೂರ್ಯನನ್ನು ಕುರಿತ ವೇದಮಂತ್ರಗಳ ವಿವರಗಳು, ನೈತಿಕ ಪ್ರಶ್ನೆಗಳನ್ನು ಕುರಿತ ಜಿಜ್ಞಾಸೆಗಳು ಹಲವು ಕಡೆ ನೀರಸವಾಗಿ, ಒಣ ತರ್ಕವಾಗಿ ಬೇಸರ ತರಿಸುತ್ತವೆ. ಬಾಹ್ಯಾಕಾಶ ನೌಕೆಯು ೪.೬ ಜ್ಯೋತಿವರ್ಷ ದೂರದಲ್ಲಿರುವ ಪ್ರಾಕ್ಸಿಮಾ ಸೆಂಟಾರಿಸ್ ನಕ್ಷತ್ರ ಮಂಡಲಕ್ಕೆ ಕನಿಷ್ಟ ಒಬ್ಬ ಗಂಡಸು ಮತ್ತು ಒಬ್ಬಳು ಹೆಂಗಸು ಅಥವಾ ಗರಿಷ್ಟ ಇಬ್ಬರು ಗಂಡಸರು ಮತ್ತು ಇಬ್ಬರು ಹೆಂಗಸರನ್ನು ಹೊತ್ತು ಸಾಗುವ ಈ 'ಯಾನ'ದಲ್ಲಿ ಈ ಯಾನಿಗಳು ದಾಂಪತ್ಯ ಮತ್ತು ಹುಟ್ಟಿಗೆ ಸಂಬಂಧಿಸಿದಂತೆ ನೈತಿಕ ಪ್ರಶ್ನೆಗಳನ್ನು ಎದುರಿಸುವವರು. ಗುರಿಯೆಂಬುದು ಇರದ ವೈಜ್ಞಾನಿಕ ಸಂಶೋಧನೆಗೆ ಬಲಿಪಶುಗಳಾಗಿ ಅದರ ಉದ್ದೇಶಕ್ಕೆ ತಕ್ಕ ರೀತಿಯಲ್ಲಿ ನಡೆದುಕೊಳ್ಳಬೇಕಾದವರಿಗೆ ಲೋಕದ ಸತ್ಯಗಳು ಅನ್ವಯಿಸುವುದಿಲ್ಲವೆ ಎಂಬುದು ಕಾಂದಬರಿ ನಿರ್ವಹಿಸಲೆತ್ನಿಸುವ ಬಹು ದೊಡ್ಡ ತಾತ್ವಿಕ ಪ್ರಶ್ನೆ. ನೆನಪಿನಿಂದ ವರ್ತಮಾನಕ್ಕೆ, ವರ್ತಮಾನದಿಂದ ಭವಿಷ್ಯಕ್ಕೆ, ಮತ್ತೆ ಹಿಂದೆ ಮುಂದಾಗುತ್ತ ದಿಕ್ಕುಗಾಣದೆ, ತಬ್ಬಲಿಗಳಂತಾದ ಪಾತ್ರಗಳು, ಇವುಗಳ ಯಾನವನ್ನು ಎಲ್ಲಿಗೆ ಮುಟ್ಟಿಸಬೇಕೆಂಬ ಗೊಂದಲ ಕೂಡ ಕಾದಂಬರಿಕಾರರಿಗಿದೆ. ಹೀಗಾಗಿ ಎಲ್ಲೋ ಒಂದು ಕಡೆ, ಕಾದಂಬರಿಕಾರ ಮೈಮೇಲೆ ಹಾಕಿಕೊಂಡ ತಾತ್ವಿಕ ಪ್ರಶ್ನೆಯನ್ನು ನಿರ್ವಹಿಸಲಾಗದೆ ಕಾದಂಬರಿ ತಟ್ಟನೆ ನಿಂತು ಬಿಡುತ್ತದೆ. ಭೈರಪ್ಪನವರು ಹಲವು ಪಟ್ಟುಗಳನ್ನು ಬಲ್ಲ ಪೈಲ್ವಾನನಂತೆ ತಮ್ಮೆಲ್ಲ ಕಲ್ಪನೆಯನ್ನು ಬಳಸಿ 'ಯಾನ'ವನ್ನು ಮುಂದುವರಿಸಿದರೂ ಹೊಸ ಪೈಲ್ವಾನನೊಬ್ಬ ಹಳೆಯ ಪೈಲ್ವಾನನ್ನು ಅನಿರೀಕ್ಷಿತ ಪಟ್ಟಿನಿಂದ ಚಿತ್ತಾಗಿಸುವಂತೆ, ಅವರ ಕಥನ ಶೈಲಿಯೇ ಅವರಿಗೆ'ಎದುರುಬಿದ್ದು 'ಯಾನ'ವನ್ನು ಮುಂದುವರಿಸಲಾಗದೆ ಮುಗ್ಗರೊಸಿರುವುದು ಕಾಣುವಂತಿದೆ.

ಭೈರಪ್ಪನವರ ಹಿಂದಿನ ಕಾದಂಬರಿಗಳಲ್ಲಿ ಬರುವ ಆಕ್ರಮಣಶೀಲ ಗಂಡಸರು ಇಲ್ಲಿ ಸುದರ್ಶನನ ರೂಪದಲ್ಲಿ ಕಾಣಿಸಿಕೊಳ್ಳುವರು. 'ಉಗ್ರರನ್ನು ನಿಗ್ರಹಿಸುವ ವಿಧಾನಗಳಲ್ಲಿ ಅನುಭವದಿಂದ ಪಡೆದಿರುವ ಇಸ್ರೇಲಿನ ಸಹಕಾರವನ್ನು ಭಾರತವು ಪಡೆಯಲು ಭಾರತದ ಎಡಪಂಥೀಯರು ಮತ್ತು ಮುಸ್ಲಿಂ ರಾಷ್ಟ್ರಗಳು ಅಡ್ಡಗಾಲು ಹಾಕುತ್ತವೆ' ಎಂಬ ಮತ್ತು 'ಜಾತ್ಯತೀತ'ರ ಬಗೆಗಿನ ಟಿಪ್ಪಣಿ ಅವರ ಕಾದಂಬರಿಗಳಲ್ಲಿ ಯಾವತ್ತೂ ಜಿಜ್ಞಾಸೆ, ಚರ್ಚೆಗೆ ಒಳಗಾಗುವ ಸಾಮಾಜಿಕ ಸಂದರ್ಭಗಳು ಇಲ್ಲಿಲ್ಲ. ಆದರೂ ಉತ್ತರ ಪಾತ್ರದ ಮೂಲಕ ಅವರು 'ಆದರ್ಶ' ಭಾರತೀಯ ಹೆಣ್ಣನ್ನು ಮತ್ತು ಸುದರ್ಶನ ಪಾತ್ರದ ಮೂಲಕ ಭಾರತೀಯ ಮುನಿ ಪರಂಪರೆಯನ್ನು ನಿರೂಪಿಸುವ ಇಲ್ಲಿನ ಭೈರಪ್ಪನವರ ಪ್ರಯತ್ನ ಎಂದಿನಂತೆ ಅನುಮಾನಾಸ್ಪದವೇ ಆಗಿದೆ.

**-ಪ್ರೊ. ಎಂ.ಜಿ. ಚಂದ್ರಶೇಖರಯ್ಯ**

**ಪ್ರಿಯ ಓದುಗರೇ,**

**ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು ಸಂಪಾದಕರು, ಹೊಸ ಮನುಷ್ಯ-ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು. ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ-ಸಂ.**

ಹೊಸ ಮನುಷ್ಯ ಓದುಗರೆಲ್ಲರಿಗೂ
ದಸರೆಯ ಹಾರ್ದಿಕ ಶುಭಾಶಯಗಳು ಹರ್ದಿಕ



ಜಿ.ಎಂ. ಪಾಟೀಲ್
ಮತ್ತು ಆರ್.ಜಿ. ಹೊಸಮನಿ
ಸಿವಿಲ್ ಕ್ಲಾಸ್ ಕಂಟ್ರಾಕ್ಟರ್‌ಗಳು
ಹುಬ್ಬಳ್ಳಿ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು



-ಡಿ. ಶಿವಲಿಂಗೇಗೌಡ
ಬಿ.ಎಸ್ ಸುಧಾ
ಮತ್ತು ಕು॥ ಸಿಂಚನ
ಶಿವಮೊಗ್ಗ

**ಹೊಸ ಮನುಷ್ಯ ಓದುಗರೆಲ್ಲರಿಗೂ**
**ದಸರೆಯ ಹಾರ್ದಿಕ ಶುಭಾಶಯಗಳು**




**ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 080– 30 600 600**

**ತಿಂಗಳ ಸಾಲುಗಳು...**



ಮೂಕ ಜನಕೋಟಿಯ ಹೃದಯದಲ್ಲಿರುವ ದೇವರನ್ನಲ್ಲದೆ, ಬೇರೆ ದೇವರನ್ನು ನಾನು ಮಾನ್ಯ ಮಾಡುವುದಿಲ್ಲ. ಈ ಜನಕೋಟಿಯ ಸೇವೆಯ ಮೂಲಕವೇ ಸತ್ಯ ಸ್ವರೂಪನಾದ ದೇವರನ್ನು ನಾನು ಪೂಜಿಸುತ್ತೇನೆ.

-ಮಹಾತ್ಮ ಗಾಂಧಿ

**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, ‘Hosa Manushya’, ’HIG-5, ‘Nudi’, Kallahalli Extension, Vinoba Nagara, Shivamogga -577204 (Karnataka)